# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 19 ಭಾನುವಾರ 2025

₹4

ಸಂಪುಟ: 45 | ಸಂಚಿಕೆ: 272 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮುಡಾ ನಿವೇಶನ ಹಂಚಿಕೆ ಭ್ರಷ್ಟಾಚಾರ

# ನಿಷ್ಪಕ್ಷಪಾತ ತನಿಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಅನಿವಾರ್ಯ

## ಸಂಸದ ಯದುವೀರ್ ಒಡೆಯರ್ ಅಭಿಮತ





ಮೈಸೂರು, ಜ.18(ಎಂಟಿವೈ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶೇ.50:50 ಅನುಪಾತದಡಿ ಹಂಚಿಕೆ ಮಾಡಿರುವ 142 ಸ್ಥಿರಾಸ್ತಿಗಳ ಇಡಿ ಮುಟ್ಟುಗೋಲು ಹಾಕಿಕೊಂಡಿರುವುದು, ಪ್ರಕರಣದಲ್ಲಿ ಅಕ್ರಮ ನಡೆದಿದೆ ಎಂಬುದು ದೃಢಪಟ್ಟಿದ್ದು, ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ತನಿಖೆ ಎದುರಿಸಬೇಕು ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಒತ್ತಾಯಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಡಿಯು ಮುಡಾದ 300 ಕೋಟಿ ರೂ. ಮೌಲ್ಯದ 142 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಅದರಲ್ಲಿ ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಹೆಸರಿಗೆ ಮಂಜೂರಾಗಿದ್ದ 14 ನಿವೇಶನವೂ ಸೇರಿದೆ. ಅಲ್ಲದೆ, ಶೇ.50:50ರ ಅನುಪಾತದಲ್ಲಿ ಹಂಚಿಕೆಯಾಗಿರುವ ನಿವೇಶನ ಅಕ್ರಮ ಎಂದು ಇಡಿ ವರದಿಯಲ್ಲಿ ಉಲ್ಲೇಖವಾಗಿದೆ. ಹಾಗಾಗಿ, ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ ಮಾಡಿದ ಆರೋಪ ಸಾಬೀತಾದಂತಾಗಿದೆ. ಈ ಹಿನ್ನೆಲೆಯಲ್ಲಿ ನಿಷ್ಪಕ್ಷಪಾತ ತನಿಖೆಗಾಗಿ ಸಿಎಂ ರಾಜೀನಾಮೆ ನೀಡಬೇಕು ಎಂದರು.

ಮುಡಾದಲ್ಲಿ ನಡೆದಿರುವ ಹಗರಣದಲ್ಲಿ ಕೇವಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿರುವ 14 ನಿವೇಶನ ಮಾತ್ರ ಇಲ್ಲ. ಅಕ್ರಮವಾಗಿ ಸಾವಿರಾರು ನಿವೇಶನಗಳು ಹಂಚಿಕೆಯಾಗಿವೆ. ಹಲವು ವರ್ಷಗಳಿಂದ ಮುಡಾದಲ್ಲಿ ಅಕ್ರಮ ನಡೆದಿದೆ. ತಮ್ಮ ಪತ್ನಿ ಹೆಸರಿಗೆ ಮಂಜೂರಾಗಿರುವ 14 ನಿವೇಶನಗಳನ್ನು ಹಿಂದಿರುಗಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಪ್ಪೊಪ್ಪಿಕೊಂಡಿದ್ದಾರೆ. ಆ ಕಾರಣದಿಂದ ಬಿಜೆಪಿ ರಾಜೀನಾಮೆಗೆ ಆಗ್ರಹಿಸಿ, ಮೊದಲಿನಿಂದಲೂ ಪ್ರತಿಭಟನೆ ನಡೆಸುತ್ತಾ ಬಂದಿದೆ. ಮುಂದೆಯೂ ಹೋರಾಟ ಮುಂದುವರೆಯಲಿದೆ ಎಂದು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಡಾ ಪ್ರಕರಣವನ್ನು ತಮ್ಮ ವಿರುದ್ಧದ ಷಡ್ಯಂತರ ಎನ್ನುತ್ತಾರೆ. ಹಾಗಿದ್ದರೆ ಅವರು ತನಿಖೆಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದಕ್ಕಾಗಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಬೇಕು. ತನಿಖೆ ಪೂರ್ಣಗೊಂಡು ನಿರಪರಾಧಿ ಎಂದು ಸಾಬೀತಾದ ನಂತರ ಮತ್ತೆ ಮುಂದುವರೆಯಲಿ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಹಾಗಾಗಿ ಈ ಪ್ರಕರಣದಲ್ಲಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲೇಬೇಕು ಎಂದು ಆಗ್ರಹಿಸಿದರು.

ಮುಡಾ ಪ್ರಕರಣದಲ್ಲಿ ಇಡಿ ಕೈಗೊಂಡಿರುವ ಕ್ರಮದಿಂದ ಮುಡಾದಲ್ಲಿ ನಡೆದಿರುವ ಹಗರಣದ ಸ್ವಚ್ಛತಾ ಕಾರ್ಯ ಆರಂಭವಾಗಿದೆ ಎಂದೆನಿಸುತ್ತದೆ. ಈ ಒಂದು ಪ್ರಕರಣದಿಂದ ಮುಡಾ ಕ್ಲೀನ್ ಆಗಿದೆ ಎಂದರ್ಥವಲ್ಲ. ಹಲವು ದಶಕಗಳಿಂದ ಅಕ್ರಮ ನಡೆದಿದೆ ಎಂಬುದು ಬಯಲಾಗಿದೆ. ಮುಡಾವನ್ನು ಪೂರ್ಣ ಪ್ರಮಾಣದಲ್ಲಿ ಸ್ವಚ್ಛಗೊಳಿಸಲು ಇನ್ನಷ್ಟು ಸಮಯಾವಕಾಶ ಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಅಭಿವೃದ್ಧಿಗಾಗಿ ಸ್ಥಾಪಿತವಾದ ಮುಡಾಗೆ ತನ್ನದೇ ಆದ ಇತಿಹಾಸವಿದೆ. ಇಂತಹ ಸಂಸ್ಥೆಯಲ್ಲಿ ಅಕ್ರಮಗಳು ಹಲವು ವರ್ಷಗಳಿಂದ ನಡೆದಿವೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. 142 ಸ್ಥಿರಾಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ನಡೆ ಸ್ವಾಗತಾರ್ಹ. ಅಲ್ಲದೆ, ಶೇ.50:50ರ ಅನುಪಾತದಲ್ಲಿ ಯಾರು ಯಾರು ನಿವೇಶನ ಪಡೆದಿದ್ದಾರೆ ಎಂದು ತನಿಖೆಯಾಗಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

**ಮುಡಾ ಸಂಗ್ರಹಿಸಿದ ಸೆಸ್ ಹಣ ಏನಾಯ್ತು:** ಮುಡಾದಲ್ಲಿ ಕೆಲವು ಬಡಾವಣೆಗಳನ್ನು ಪಾಲಿಕೆ ಹಾಗೂ ಇನ್ನಿತರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಹಸ್ತಾಂತರಿಸುತ್ತಿರುವ ಪ್ರಕ್ರಿಯೆ ಒಳ್ಳೆಯ ಬೆಳವಣಿಗೆ. ಆದರೆ, ಮುಡಾ ಸಂಗ್ರಹಿಸಿರುವ ನಾನಾ ಸೆಸ್ ಹಣ ಬಳಕೆಯಾಗಿಲ್ಲ ಎಂಬ ಆರೋಪವಿದೆ. ಕೇವಲ ಬೋರ್‌ವೆಲ್ ಹಾಕಿ ನಿವೇಶನ ಮಂಜೂರು ಮಾಡಲಾಗಿದೆ. ಅಂತಹ ಬಡಾವಣೆಗಳಿಗೆ ಸರಿಯಾದ ರಸ್ತೆ, ಯುಜಿಡಿ ಸೇರಿದಂತೆ ಮೂಲಭೂತ ವ್ಯವಸ್ಥೆ ಕಲ್ಪಿಸಿಲ್ಲ. ಈ ಕಾರಣದಿಂದಲೂ ಸಂಗ್ರಹವಾದ ಸೆಸ್ ಮೊತ್ತ ಏನಾಯಿತು ಎಂದು ಪ್ರಶ್ನೆ ಮಾಡಬೇಕಾಗಿದೆ ಎಂದು ಸ್ಪಷ್ಟಪಡಿಸಿದರು.

# ಪ್ರತಾಪ್ ಸಿಂಹರ ಮೂರ್ನಾಲ್ಕು ತಿಂಗಳ ಚಟುವಟಿಕೆಯಿಂದ ಬೇಸತ್ತು ಕಾರ್ಯಕರ್ತರು ದೂರು ನೀಡಿದ್ದಾರೆ

## ಸಂಸದ ಯದುವೀರ್ ಒಡೆಯರ್ ಮೊದಲ ಬಾರಿ ಪ್ರತಿಕ್ರಿಯೆ



ಮೈಸೂರು, ಜ.18(ಎಂಟಿವೈ)– ಮಾಜಿ ಸಂಸದ ಪ್ರತಾಪ ಸಿಂಹ, ಅವರ ಕಳೆದ ಮೂರ್ನಾಲ್ಕು ತಿಂಗಳ ಚಟುವಟಿಕೆ ಕಾರ್ಯಕರ್ತರಿಗೆ ಇಷ್ಟವಾಗಿಲ್ಲದ ಕಾರಣ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡುವಂತೆ ವರಿಷ್ಠರ ಮುಂದೆ ಬೇಡಿಕೆ ಇಟ್ಟಿದ್ದಾರೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಾಜಿ ಸಂಸದ ಪ್ರತಾಪ ಸಿಂಹ ಅವರನ್ನು ಬಿಜೆಪಿಯಿಂದ ಉಚ್ಚಾಟನೆ ಮಾಡುವಂತೆ ಪಕ್ಷದ ಕೆಲ ಮುಖಂಡರು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ದೂರು ಸಲ್ಲಿಸಿರುವ ಸಂಬಂಧ ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿದ ಸಂಸದರು, ಯಾರೇ ಆಗಲಿ ಪಕ್ಷದ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗಿದೆ. ಮಾಜಿ ಸಂಸದರ ಸ್ಥಾನವೂ ಗೌರವಯುತವಾದುದು. ಪ್ರತಾಪ ಸಿಂಹ ಕಳೆದ 3–4 ತಿಂಗಳಿಂದಲೂ ಯಾವೆಲ್ಲಾ ಚಟುವಟಿಕೆ ನಡೆಸಿದ್ದಾರೆ ಎಂಬುದು ಪಕ್ಷದ ಕಾರ್ಯಕರ್ತರಿಗೆ ತಿಳಿದಿದೆ. ಅದು ನಿಷ್ಠಾವಂತ ಕಾರ್ಯಕರ್ತರಿಗೆ ಬೇಸರವೂ ಆಗಿದೆ. ಆ ಕಾರಣಕ್ಕಾಗಿ ಉಚ್ಚಾಟನೆಯ ಬೇಡಿಕೆ ಇಟ್ಟಿದ್ದಾರೆ ಎಂದರು.

ರಾಜ್ಯದಲ್ಲಿ ಬಿಜೆಪಿ ಜವಾಬ್ದಾರಿಯುತ ವಿರೋಧ ಪಕ್ಷದ ಸ್ಥಾನದಲ್ಲಿದೆ. ಅಧಿಕಾರದಲ್ಲಿ ಇರದೇ ಇದ್ದಾಗ ಒಗ್ಗಟ್ಟು ಪ್ರದರ್ಶನ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಮಾಜಿ ಸಂಸದರ ನಡೆಯಿಂದ ಕಾರ್ಯಕರ್ತರಿಗೆ ನೋವಾಗಿದೆ. ಅದಕ್ಕಾಗಿ ಉಚ್ಚಾಟನೆ ಮಾಡುವಂತೆ ಮನವಿ ಸಲ್ಲಿಸಿದ್ದಾರೆ. ಇದಕ್ಕೆ ಪಕ್ಷದ ರಾಜ್ಯಾಧ್ಯಕ್ಷರು, ನಾಯಕರು ಕ್ರಮ ಕೈಗೊಳ್ಳುತ್ತಾರೆ. ಯಾರೇ ಇರಲಿ, ಏನೇ ಸಮಸ್ಯೆ ಇದ್ದರೂ ಕುಳಿತು ಮಾತನಾಡಿ ಬಗೆಹರಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

> **ಅರಮನೆ ವಿರುದ್ಧ ಮೊದಲಿನಿಂದಲೂ "ಕೇಸ್ ಹಾಕುತ್ತಲೇ ಇದ್ದಾರೆ...!**
>
> ಅರಮನೆ ವಿರುದ್ಧದ ಕೇಸ್‌ಗಳು ಮೊದಲಿನಿಂದಲೂ ನಡೆಯುತ್ತಲೇ ಇದೆ. ನಾನು ಸಂಸದನಾದ ಕಾರಣಕ್ಕೆ ಅರಮನೆ ವಿರುದ್ಧ ಕೇಸ್ ಹಾಕುತ್ತಿದ್ದಾರೆ ಎನ್ನುವುದು ಸರಿಯಲ್ಲ. ಅರಮನೆಯ ಟಿಡಿಆರ್ ವಿಚಾರದಲ್ಲಿ ಕಾನೂನಾತ್ಮಕವಾಗಿ ಹೋರಾಟ ಮುಂದುವರೆಯುತ್ತದೆ. ನಮ್ಮ ತಾಯಿ ಹಾಗೂ ಅರಮನೆ ಕಚೇರಿ ಅದನ್ನು ನೋಡಿಕೊಳ್ಳುತ್ತಾರೆ. 1990ರಲ್ಲಿ ಸಿಎಂ ಸಿದ್ದರಾಮಯ್ಯ ಅವರು ಜೆಡಿಎಸ್‌ನಲ್ಲಿದ್ದಾಗಿನಿಂದ ಅರಮನೆ ವಿರುದ್ಧ ಕೇಸ್ ಆರಂಭವಾಯಿತು. ಆ ನಂತರ ಬಂದ ಸರ್ಕಾರಗಳು ಅದನ್ನು ಮುಂದುವರೆಸಿಕೊಂಡು ಬಂದಿವೆ. ಕೆಲವೊಮ್ಮೆ ಹಿನ್ನಡೆಯಾಗಿದೆ. ನಾನು ಸಂಸದನಾಗಿದ್ದೇನೆ ಎಂದು ಅರಮನೆ ಟಾರ್ಗೆಟ್ ಆಗುತ್ತಿದೆ ಎನ್ನುವುದು ಸರಿಯಲ್ಲ. ನಮ್ಮ ಆಸ್ತಿಯನ್ನು ಸರ್ಕಾರದ ಆಸ್ತಿ ಎಂದು ಘೋಷಣೆ ಮಾಡಲು ಯತ್ನಿಸುತ್ತಿದ್ದಾರೆ. ನ್ಯಾಯಾಲಯದಲ್ಲಿ ಟಿಡಿಆರ್ ನೀಡಬೇಕೆಂಬ ನಿರ್ದೇಶನವಿದೆ. **– ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು**

## ಪ್ರತಾಪ್ ಸಿಂಹ ವಿರುದ್ಧ ಪಕ್ಷದ ರಾಜ್ಯಾಧ್ಯಕ್ಷರಿಗೂ ದೂರು ಸಲ್ಲಿಸಿದ್ದಾರೆ



ಮೈಸೂರು, ಜ.18(ಎಂಟಿವೈ)– ಮಾಜಿ ಸಂಸದ ಪ್ರತಾಪ ಸಿಂಹ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡುವಂತೆ ಪಕ್ಷದ ಕೆಲ ಮುಖಂಡರು ನನಗೆ ದೂರು ನೀಡಿದ್ದು, ಅದನ್ನು ನಾನು ರಾಜ್ಯ ನಾಯಕರಿಗೆ ಕಳುಹಿಸಿದ್ದೇನೆ ಎಂದು ಮಾಜಿ ಶಾಸಕ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸ್ಪಷ್ಟಪಡಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಕ್ಷದ ಮುಖಂಡರಾದ ಕುಮಾರಗೌಡ, ಮೈ.ಕಾ.ಪ್ರೇಮಕುಮಾರ್ ಸೇರಿದಂತೆ ಇನ್ನಿತರರು ಪ್ರತಾಪ ಸಿಂಹ ವಿರುದ್ಧ ದೂರು ನೀಡಿರುವುದು ನಿಜ. ನಾನು ಅದನ್ನು ರಾಜ್ಯ ನಾಯಕರಿಗೆ ಕಳುಹಿಸಿದ್ದೇನೆ. ನಿನ್ನೆ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರಿಗೂ ದೂರು ನೀಡಿದ್ದಾರೆ. ಪಕ್ಷದಲ್ಲಿ ಗೊಂದಲವಿಲ್ಲ ಆದರೆ ಸಣ್ಣ ಪುಟ್ಟ ವ್ಯತ್ಯಾಸವಿದೆ. ಪಕ್ಷದಿಂದ ಪ್ರತಾಪ ಸಿಂಹ ದೂರದಲ್ಲಿಲ್ಲ. ಅವರ ಜೊತೆ ನಾನು ಮಾತನಾಡುತ್ತೇನೆ. ಪಕ್ಷದ ಚೌಕಟ್ಟನ್ನು ಯಾರು ಮೀರಬಾರದು. ಪಕ್ಷದ ಸಭೆಯಲ್ಲಿ ಅವರು ಕೂಡ ಭಾಗಿಯಾಗುತ್ತಿದ್ದಾರೆ. ಕೆಲ ಹೋರಾಟಗಳನ್ನು ಪ್ರತ್ಯೇಕವಾಗಿ ಮಾಡುತ್ತಿದ್ದಾರೆ. ಈ ಬಗ್ಗೆ ನಾನು ಪ್ರತಾಪ್ ಸಿಂಹ ಜೊತೆ ಮಾತನಾಡುತ್ತೇನೆ. ಸಣ್ಣಪುಟ್ಟ ಸಮಸ್ಯೆ ಇದ್ದರೆ ಬಗೆಹರಿಸುತ್ತೇವೆ ಎಂದರು.

**ಸಿಬಿಐ ತನಿಖೆಯಾಗಬೇಕು:** ಮುಡಾದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ನಿವೇಶನಗಳು ಅಕ್ರಮವಾಗಿ ಹಂಚಿಕೆಯಾಗಿವೆ ಎಂದು ಲೋಕಾಯುಕ್ತರು ಪತ್ತೆ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಇದೀಗ ಇಡಿ 142 ಸ್ಥಿರಾಸ್ತಿ ಜಪ್ತಿ ಮಾಡಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು. ಮುಡಾದಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ ಈ ಬಗ್ಗೆ ಸಿಬಿಐ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

## ಪಿ.ಪ್ರಶಾಂತ್‌ಗೌಡರ ಹುಟ್ಟುಹಬ್ಬಕ್ಕೆ ಶುಭ ಹಾರೈಕೆ



ಮಾಜಿ ಕಾರ್ಪೋರೇಟರ್ ಪಿ.ಪ್ರಶಾಂತ್‌ಗೌಡ ಅವರಿಗೆ ಸ್ಥಳೀಯ ಮುಖಂಡರು ಹುಟ್ಟುಹಬ್ಬದ ಶುಭ ಕೋರಿದರು.

ಮೈಸೂರು,ಜ.18–ಮೈಸೂರಿನ ದೇವರಾಜ ಅರಸು ರಸ್ತೆಯ ತ್ರಿಪುರ ಭೈರವಿ ಮಠದ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೈಸೂರು ಮಹಾ ನಗರ ಪಾಲಿಕೆ ಮಾಜಿ ಸದಸ್ಯರಾದ ಪಿ.ಪ್ರಶಾಂತ್‌ಗೌಡ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಬಿಜೆಪಿ, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಅರಸು ರಸ್ತೆ, ಶಿವರಾಮ ಪೇಟೆ ವರ್ತಕರು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡು, ಶುಭ ಕೋರಿದರು.

ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್‌ಭಟ್, ಯುವ ಮೋರ್ಚಾ ಮಂಡಲ ಪ್ರಧಾನ ಕಾರ್ಯದರ್ಶಿ ಚಂದನ್‌ಗೌಡ, ಉಪಾಧ್ಯಕ್ಷರಾದ ಸಿ.ರಾಘವೇಂದ್ರ, ಸಿ.ಎಸ್.ಮಧು, ವೀರ ಸಾವರ್ಕರ್ ಯುವ ಬಳಗದ ಸಂದೇಶ್ ಪವಾರ್, ಕುಂಚಿಟಿಗರ ಸಂಘದ ನಿರ್ದೇಶಕ ಎನ್.ದೀಪಕ್, ಮೈಸೂರು ರಕ್ಷಣಾ ವೇದಿಕೆಯ ಅಧ್ಯಕ್ಷ ಗುರುರಾಜ್ ಶೆಟ್ಟಿ, ಕಾರ್ಯದರ್ಶಿ ಪ್ರಮೋದ್‌ಗೌಡ, ಚಿತ್ರನಟ ಅಮಿತ್ ಇತರರಿದ್ದರು.

## ಬ್ರಹ್ಮತೇಜ ಪ್ರಶಸ್ತಿ ಪುರಸ್ಕಾರ...



ಬೆಂಗಳೂರಿನಲ್ಲಿ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸುವರ್ಣ ಸಂಭ್ರಮ–2025 ಸಮಾವೇಶದಲ್ಲಿ ಮೈಸೂರಿನ ಹಿರಿಯ ಗಂಜೀಫಾ ಕಲಾವಿದರಾದ ರಘುಪತಿ ಭಟ್ ಅವರಿಗೆ ಬ್ರಹ್ಮ ತೇಜ ಪುರಸ್ಕಾರ ನೀಡಿ, ಗೌರವಿಸಲಾಯಿತು. ಈ ವೇಳೆ ಡಾ.ವಿ.ಗೌರಿ ಶಂಕರ್, ಡಾ.ಎಂ.ಆರ್.ವಿ. ಪ್ರಸಾದ್, ಹೆಚ್.ಎಸ್.ಸಚ್ಚಿದಾನಂದ ಮೂರ್ತಿ, ಬ್ರಾಹ್ಮಣ ಸಭಾ ರಾಜ್ಯಾಧ್ಯಕ್ಷರಾದ ಅಶೋಕ್ ಹಾರನಹಳ್ಳಿ, ರಾಜ್ಯ ಉಪಾಧ್ಯಕ್ಷರಾದ ನಂ.ಶ್ರೀಕಂಠಕುಮಾರ್ ಉಪಸ್ಥಿತರಿದ್ದರು.

## ಪ್ಲಾಸ್ಟಿಕ್ ಬಳಕೆ ಅಪಾಯದ ಬಗ್ಗೆ ಜಾಗೃತಿ ಮೂಡಿಸಲು ಕುಂಭಮೇಳಕ್ಕೆ ಸೈಕಲ್ ರ್‍ಯಾಲಿ

ಮೈಸೂರು, ಜ.18(ಜಿಎ)–ಜನರಲ್ಲಿ ಪ್ಲಾಸ್ಟಿಕ್ ಬಳಕೆ ಅಪಾಯ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜ.19ರಂದು ಪ್ರಯಾಗ್‌ರಾಜ್‌ನಲ್ಲಿ ಕುಂಭಮೇಳ ನಡೆಯುತ್ತಿರುವ ಸ್ಥಳಕ್ಕೆ ಸೈಕಲ್ ರ್‍ಯಾಲಿ ಹಮ್ಮಿಕೊಂಡಿರುವುದಾಗಿ ನಗರದ ಇಲವಾಲ ಪಂಚಾಯ್ತಿ ವ್ಯಾಪ್ತಿಯ ಈರಪ್ಪನಕೊಪ್ಪಲು ಪಿ.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 8.30ಕ್ಕೆ ನಗರದ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಗಣ್ಯರು ಈ ಸೈಕಲ್ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ಬಳಿಕ ಒಂಟಿಕೊಪ್ಪಲು ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ಕೆಆರ್‌ಎಸ್, ಕೆ.ಆರ್.ಪೇಟೆಯ ಡಿಂಕಾ, ತೆಂಡೆಕೆರೆ, ಅರಸೀಕೆರೆ, ದಾವಣಗೆರೆ, ಧಾರವಾಡದ ಕಪ್ಪತಗುಡ್ಡ, ಬೆಳಗಾವಿಗೆ ತೆರಳಿ ಅಲ್ಲಿಂದ ಚಿಕ್ಕೋಡಿ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಅಯೋಧ್ಯೆ ಬಳಿಕ ಪ್ರಯಾಗ್‌ರಾಜ್ ಸೇರಲಾಗುವುದು. ತಮ್ಮ ಈ ಸಾಹಸಕ್ಕೆ ಪರಿಸರ ವಾರಿಯರ್ಸ್ ಗ್ರೂಪ್ ಸಹಕಾರವಿದೆ ಎಂದರು.

ಮಹದೇಶ್ವರ ಬೆಟ್ಟದಲ್ಲಿ ಪ್ಲಾಸ್ಟಿಕ್ ಹಾವಳಿ ಹೆಚ್ಚಾಗಿದೆ. ಹೀಗಾಗಿ ಪರಿಸರ ಸ್ನೇಹಿ ವಸ್ತುಗಳನ್ನು ಮಾತ್ರ ಕೊಂಡೊಯ್ಯುವಂತೆ ತಾಳಬೆಟ್ಟದಿಂದಲೇ ಜಾಗೃತಿ ಮೂಡಿಸಬೇಕು. ಇದ್ದಕಾಗಿ ವಿಶೇಷ ಕಾರ್ಯಪಡೆ ರಚಿಸಬೇಕು. ಜಾಗೃತದಳ ತಪಾಸಣೆ ನಡೆಸಿ ಏಕಬಳಕೆ ಪ್ಲಾಸ್ಟಿಕ್ ಬಳಸುವವರಿಗೆ ದಂಡ ವಿಧಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಿ.ಲೋಕೇಶ್, ಗಿರೀಶ್, ಎಸ್.ಬಸಪ್ಪ, ವಿಜಯ್‌ಕುಮಾರ್ ಉಪಸ್ಥಿತರಿದ್ದರು.

## ಕ್ಯಾಲೆಂಡರ್ ಬಿಡುಗಡೆ....



ಡಾ.ರಾಜ್, ಶಿವಸೈನ್ಯ ಶಿವರಾಜಕುಮಾರ್ ಅಭಿಮಾನಿಗಳ ಬಳಗದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಬಿಡುಗಡೆ ಮಾಡಿದರು. ಈ ವೇಳೆ ಚಿತ್ರನಟ ಸೋಮಣ್ಣ, ಬಿ.ಎಸ್.ರವಿ, ಬಿ.ಎಸ್. ಮಹೇಶ್, ಮಹದೇವು, ಎಸ್.ರೇವಣ್ಣ, ಧನು, ನಿಹಾರ್‌ಗೌಡ ಇನ್ನಿತರರಿದ್ದರು.

## ವಿದ್ಯುತ್ ಕಂಬ, ಟ್ರಾನ್ಸ್‌ಫಾರಂ ಅಳವಡಿಕೆಗೆ ಚಾಲನೆ



ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಗ್ರಾಮವನ್ನು ಚಾಮುಂಡೇಶ್ವರಿ ವಿದ್ಯುತ್ ನಿಗಮದ ವತಿಯಿಂದ ಮಾದರಿ ಗ್ರಾಮ ಯೋಜನೆಯಡಿ ನೂತನ ವಿದ್ಯುತ್ ಕಂಬ, ಟ್ರಾನ್ಸ್‌ಫಾರಂಗಳನ್ನು ಅಳವಡಿಸುವ ಕಾರ್ಯಕ್ರಮವನ್ನು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್. ಚಂದ್ರಶೇಖರ್, ಜೆಡಿಎಸ್ ಮುಖಂಡ ಪೈಲ್ವಾನ್ ಮುಕುಂದ, ಜೆಇ ನವೀನ್‌ಕುಮಾರ್, ಗ್ರಾಪಂ ಅಧ್ಯಕ್ಷ ಆದರ್ಶ್, ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

## ಇಂದು ರಾಜ್ಯಮಟ್ಟದ ಮುಕ್ತ ಕರಾಟೆ ಪಂದ್ಯಾವಳಿ

ಮೈಸೂರು, ಜ.18(ಎಂಟಿವೈ)– ಮೈಸೂರಿನ ಮಹರ್ಷಿ ಪಾಠಶಾಲೆ ಬಳಿಯಿರುವ ಮಾಧವ ಶೆಣೈ ಕಲ್ಯಾಣ ಮಂಟಪ ಒಳಾಂಗಣದಲ್ಲಿ ಜ.19ರಂದು ಬೆಳಗ್ಗೆ 9.30ಕ್ಕೆ ರಾಜ್ಯ ಮಟ್ಟದ ಮುಕ್ತ ಕರಾಟೆ ಪಂದ್ಯಾವಳಿ ಹಾಗೂ ಕರಾಟೆ ಕ್ರೀಡಾ ಹಬ್ಬ ಆಯೋಜಿಸಲಾಗಿದೆ ಎಂದು ರ್‍ಯಾಂಬೊ ಸ್ಪೋರ್ಟ್ಸ್ ಕರಾಟೆ ಅಕಾಡೆಮಿ ಹಾಗೂ ಸೆಲ್ಫ್ ಡಿಫೆನ್ಸ್ ಸರ್ವಿಸ್ ಆರ್ಗನೈಸೇಷನ್ ಸಂಸ್ಥೆಯ ಸಂಸ್ಥಾಪಕ ರ್‍ಯಾಂಬೋ ಕಿರಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಾಟೆ ಕ್ರೀಡೆಯನ್ನು ಉತ್ತೇಜಿಸುವುದಕ್ಕಾಗಿ ರಾಜ್ಯಮಟ್ಟದ ಮುಕ್ತ ಕರಾಟೆ ಪಂದ್ಯಾವಳಿ ಹಾಗೂ ಕ್ರೀಡಾ ಹಬ್ಬ ಆಯೋಜಿಸಲಾಗಿದೆ. ಅಲ್ಲದೆ, ವಿವಿಧ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಸನ್ಮಾನಿಸಲಾಗುತ್ತಿದೆ. ಅಂದು ಬೆಳಗ್ಗೆ 9.30ಕ್ಕೆ ಆರಂಭವಾಗುವ ಪಂದ್ಯಾವಳಿಯ ಸಾನ್ನಿಧ್ಯವನ್ನು ಮೇಲುಕೋಟೆಯ ವಂಗೀಪುರದ ನಂಬಿಮಠದ ಇಳೈ ಆಳ್ವಾರ್ ಸ್ವಾಮೀಜಿ ವಹಿಸಲಿದ್ದು, ನಿವೃತ್ತ ಅಧಿಕಾರಿ ಎಂ.ಎನ್. ನಟರಾಜ್, ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ಪಾಲ್ಗೊಳ್ಳಲಿದ್ದಾರೆ. ಅಂದು ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಪಂದ್ಯಾವಳಿಯಲ್ಲಿ ಮೈಸೂರು, ಶಿವಮೊಗ್ಗ, ಬೆಂಗಳೂರು, ಹುಣಸೂರು, ದಾವಣಗೆರೆ, ಗುಲ್ಬರ್ಗ ಹಾಗೂ ವಿವಿಧೆಡೆಯ ಕರಾಟೆ ಪಟುಗಳು ಪಾಲ್ಗೊಳ್ಳಲಿದ್ದಾರೆ. ವಿವಿಧ ವಯೋಮಿತಿಯ ಕರಾಟೆ ಪಟುಗಳಿಗಾಗಿ ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಪಟುಗಳಿಗೆ ಪದಕ, ಪ್ರಮಾಣಪತ್ರ ನೀಡಲಾಗುತ್ತದೆ ಎಂದರು.

## ಮೆಡಿಕಲ್ ಸ್ಟೋರ್ ಮಾಲೀಕನನ್ನು ಹೆದರಿಸಿ ಹಣ ಸುಲಿಗೆ

ಮೈಸೂರು, ಜ.18(ಬಿಎಲ್‌ಯು)– ಮೆಡಿಕಲ್ ಸ್ಟೋರ್ ಮಾಲೀಕನನ್ನು ಬೆದರಿಸಿ ಹಣ ಸುಲಿಗೆ ಮಾಡಿರುವ ಘಟನೆ ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಸಂಭವಿಸಿದೆ. ಮೆಡಿಕಲ್ ಸ್ಟೋರ್ ಮಾಲೀಕ ಸೋಮಶೇಖರ್ ನಿನ್ನೆ ರಾತ್ರಿ ಬಾಗಿಲು ಹಾಕಿ ಮನೆಗೆ ತೆರಳುವಾಗ ಮಂಕಿ ಕ್ಯಾಪ್ ಧರಿಸಿದ ವ್ಯಕ್ತಿ ಎದುರಾಗಿದ್ದಾನೆ. ಆತ, ಏಕಾಏಕಿ ಚಾಕು ತೋರಿಸಿ ಸೋಮಶೇಖರ್ ಬಳಿ ಹಣ ಕಸಿದು ಪರಾರಿಯಾಗಿದ್ದಾರೆ. ಇಲವಾಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಕೋಲ್ಕತ್ತಾ ವೈದ್ಯೆ ಮೇಲೆ ಅತ್ಯಾಚಾರ, ಕೊಲೆ ಪ್ರಕರಣ: ಸಂಜಯ್ ರಾಯ್ ದೋಷಿ



**ಕೋಲ್ಕತ್ತಾ:** ದೇಶಾದ್ಯಂತ ಭಾರೀ ಆಕ್ರೋಶ ಮತ್ತು ವ್ಯಾಪಕ ಪ್ರತಿಭಟನೆಗೆ ಕಾರಣವಾಗಿದ್ದ ಕೋಲ್ಕತ್ತಾದ ಆರ್‌ಜಿ ಕರ್ ಸರ್ಕಾರಿ ವೈದ್ಯಕೀಯ ಕಾಲೇಜ್ ಮತ್ತು ಆಸ್ಪತ್ರೆಯ 31 ವರ್ಷದ ವೈದ್ಯೆಯ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಪ್ರಕರಣದಲ್ಲಿ ಆರೋಪಿ ಸಂಜಯ್ ರಾಯ್ ತಪ್ಪಿತಸ್ಥ ಎಂದು ಕೋರ್ಟ್ ತೀರ್ಪು ನೀಡಿದೆ.

ಕಳೆದ ಆ.9ರಂದು ಕೋಲ್ಕತ್ತಾದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯೆಯ ರಕ್ತಸಿಕ್ತ ಮೃತದೇಹ ಪತ್ತೆಯಾಗಿತ್ತು. ವೈದ್ಯೆಯ ಮೇಲೆ ಅತ್ಯಾಚಾರ ಎಸಗಿ ಹತ್ಯೆ ಮಾಡಲಾಗಿದೆ ಎಂಬ ಆರೋಪದ ಮೇಲೆ ಸಂಜಯ್ ರಾಯ್ ಬಂಧಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ಕೋಲ್ಕತ್ತಾದ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಅನಿರ್ಬನ್ ದಾಸ್ ಅವರು, ಕೇವಲ 57 ದಿನಗಳಲ್ಲೇ ಪ್ರಕರಣದ ತೀರ್ಪು ಪ್ರಕಟಿಸಿದ್ದು, ಆರೋಪಿ 33 ವರ್ಷದ ಸಂಜಯ್ ರಾಯ್ ದೋಷಿ ಎಂದು ಹೇಳಿದ್ದಾರೆ. ಆದರೆ ಶಿಕ್ಷೆಯ ಪ್ರಮಾಣವನ್ನು ಜ.20ರಂದು ಪ್ರಕಟಿಸುವುದಾಗಿ ತಿಳಿಸಿದೆ. ಆಸ್ಪತ್ರೆಯಲ್ಲಿ ನಾಗರಿಕ ಸ್ವಯಂಸೇವಕನಾಗಿದ್ದ ರಾಯ್ ನನ್ನು ಕೊಲೆಯ ಮರುದಿನ ಬಂಧಿಸಲಾಯಿತು ಮತ್ತು ಅಂದಿನಿಂದ ಜೈಲಿನಲ್ಲಿ ಇರಿಸಲಾಗಿದೆ. ತಪ್ಪಿತಸ್ಥ ರಾಯ್‌ಗೆ ಮರಣದಂಡನೆ ಶಿಕ್ಷೆ ವಿಧಿಸುವ ಸಾಧ್ಯತೆ ಇದೆ.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 19 ಭಾನುವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 272 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com













## ನಕ್ಕರೆ ಅದೇ ಸ್ವರ್ಗ

ಅಜ್ಜಿ ಮೊಮ್ಮಗನಿಗೆ : ನಿಮ್ಮ ಟೀಚರ್ ಬರುತ್ತಾ ಇದ್ದಾರೆ.
ಹೋಗು ಬಚ್ಚಿ ಇಟ್ಕೋ
ಅಜ್ಜಿ ಮೊದಲು ನೀನು ಹೋಗು ಬಚ್ಚಿ ಇಟ್ಕೋ ನೀನು ಸತ್ತು ಹೋಗಿದ್ದಿಯಾ ಅಂತ ಹೇಳಿ ಒಂದು ವಾರದಿಂದ ಸ್ಕೂಲ್‌ಗೆ ಹೋಗಿಲ್ಲ.

ಮೈಸೂರು ಮಿತ್ರ
ಭಾನುವಾರ, 19 ಜನವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ.........


ತಡವಾಗಿ ಸಿಕ್ಕ ಯಶಸ್ಸು ವ್ಯಕ್ತಿತ್ವ ರೂಪಿಸುತ್ತದೆ.
ತಕ್ಷಣಕ್ಕೆ ಸಿಕ್ಕ ಯಶಸ್ಸು ಅಹಂಕಾರ ಸೃಷ್ಟಿಸುತ್ತದೆ. – ನುಡಿಮುತ್ತು

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಸೀರಿಗೇಡಿಗೆ ಸೀರೆ ಉಡಿಸಿದರೆ ಕೆರಿ ದಂಡಿ ಮ್ಯಾಗ ನಿಂತು ಕೇಕೆ ಹಾಕಿದಳು.

## ನಿಮ್ಮ ಪತ್ರಗಳು

### ಸಿಪಿಕೆ ಎಂಬ ತುಂಬಿದ ಜ್ಞಾನಸರೋವರ

ಮಾನ್ಯರೆ,



ಡಾ.ಸಿ.ಪಿ.ಕೆ. ಎಂಬ ಮೂರು ಇಂಗ್ಲೀಷ್ ಅಕ್ಷರಗಳ ಕನ್ನಡ ಅವತರಣಿಕೆಯ ಕಾವ್ಯನಾಮಾಂಕಿತ ಮೇರುವ್ಯಕ್ತಿ ಡಾ.ಸಿ.ಪಿ. ಕೃಷ್ಣಕುಮಾರ್ ಅವರು ಕನ್ನಡ ಪದಗಳಲ್ಲಿ ಸುಲಲಿತವಾಗಿ ಚಮತ್ಕಾರಗಳನ್ನು ತೋರುವ, ಮೃದುಭಾಷಿ, ಸೌಮ್ಯ ಸ್ವಭಾವದವರು. ನಮ್ಮ ನಡುವೆ ಇರುವ ಹಿರಿಯ ತಲೆಮಾರಿನ ಸುಪ್ರಸಿದ್ಧ ಕನ್ನಡದ ವಿದ್ವಾಂಸರು. ವಯಸ್ಸು ಎಂಬತ್ತಾರು. ಚಟುವಟಿಕೆಯಲ್ಲಿ ಇನ್ನೂ ಇಪ್ಪತ್ತಾರರ ಹರೆಯ. ಇವರು ರಚಿಸಿರುವ ಕೃತಿಗಳೆಲ್ಲವೂ ಕನ್ನಡ ಭಾಷೆಯ ಅಭಿವೃದ್ಧಿ ಹಾಗೂ ಉಳಿವಿಗೆ ಪೂರಕವಾದವು. ನಾನೂರಕ್ಕೂ ಹೆಚ್ಚು ಪುಸ್ತಕಗಳು ರಚಿಸಿದ್ದರೂ ಇನ್ನೂ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾಗುವ 'ಚುಟುಕು ಚಕ್ರವರ್ತಿ' ಸಿಪಿಕೆಯವರ ಚುಟುಕುಗಳನ್ನು ಓದುವುದಕ್ಕೆ ಕಾತುರದಲ್ಲಿ ಕಾಯುತ್ತಿರುತ್ತಾರೆ ಓದುಗರು.

ಸಿಪಿಕೆಯವರು ಪಕ್ಕದ ಚಿಕ್ಕನಾಯಕನಹಳ್ಳಿ ಗ್ರಾಮದವರು. ನಾನು ಹಾಗೂ ನನ್ನ ಗೆಳೆಯ ಸಾಲಿಗ್ರಾಮದ ಇಂಜಿನಿಯರ್ ಶಿವರಾಂ ಇಬ್ಬರೂ ಮೊನ್ನೆ ಮುಂಜಾನೆಯೇ ಅವರನ್ನು ಭೇಟಿ ಮಾಡಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ತಾಲೂಕಿನ ಬಗ್ಗೆ ಒಂದಷ್ಟು ವಿಷಯಗಳನ್ನು ಮಾತನಾಡಿದೆವು. ಅವರಲ್ಲಿ ಕಂಡ ಸದ್ಗುಣಗಳನ್ನು ಕೆಲವು ಸಾಲುಗಳಲ್ಲಿ ಬರೆಯಲಾಗದು. ಸಾಹಿತ್ಯ ಕೃಷಿಯಲ್ಲಿ ಇವರು ಮಹಾಕವಿ ಹಾಗೂ ಮಹಾಸಂತರು ಆದರೂ ಸೂಜಿ ಮೊನೆಯಷ್ಟೂ ಗರ್ವ ಇಲ್ಲದೆ ನಮ್ಮೊಂದಿಗೆ ಮಗುವಿನಂತೆ ಮೃದುವಾಗಿ ಗಂಟೆಗೂ ಮೀರಿ ಮಾತನಾಡಿ ಚಹಾ ಸೇವನೆಗೆ ಆಮಂತ್ರಿಸಿದರು ಹಾಗೂ ಇತ್ತೀಚೆಗೆ ಪ್ರಕಟವಾಗಿರುವ 'ಪಂಪ ಪರೀಕ್ಷಣ' ಮತ್ತು 'ಎಂಬತ್ತರ ತುಂಬು ತುಳುಕು' ಎಂಬ ಎರಡು ಪುಸ್ತಕಗಳನ್ನು ಸಹಿ ಮಾಡಿ ಇಬ್ಬರಿಗೂ ಆಶೀರ್ವದಿಸಿ ಉಡುಗೊರೆಯಾಗಿ ನೀಡಿದರು. ಇದು ನಮ್ಮ ಜೀವಿತಕಾಲದ ಅವಿಸ್ಮರಣೀಯ ಅಮೃತಘಳಿಗೆ ಎನ್ನಬಹುದು.

ಸಿಪಿಕೆ ಎನ್ನುವುದು ಕನ್ನಡದ ಸಾಹಿತ್ಯ ಭಂಡಾರವನ್ನೇ ತುಂಬಿಕೊಂಡಿರುವ ಪ್ರಶಾಂತವಾದ ಜ್ಞಾನಸರೋವರ. ಸರೋವರದ ಅಮೃತವನ್ನು ಕುಡಿಯದ ಸಾಹಿತಿಗಳಿಲ್ಲ. ಅವರಿಂದ ಲೋಕಾರ್ಪಣೆಗೊಂಡ ಕೃತಿಗಳು, ಮುನ್ನುಡಿ, ಬೆನ್ನುಡಿ ಬರೆಸಿಕೊಂಡಿರುವ ಪುಸ್ತಕಗಳಿಗೆ ಲೆಕ್ಕವಿಲ್ಲ. ರಾಷ್ಟ್ರಕವಿ ಪದವಿಗೇರಲು ಅರ್ಹರಿರುವ ಸಿಪಿಕೆಯವರಿಗೆ ಅವರ ಜೀವಿತಾವಧಿಯಲ್ಲೇ ರಾಷ್ಟ್ರಕವಿ ಪಟ್ಟ ದೊರೆಯಲೆಂಬುದು ಎಲ್ಲರ ಆಶಯ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

### ರಾಜ್ಯಕ್ಕೆ ಕೇಂದ್ರ ನೀಡುವ ಪಾಲು ಅವೈಜ್ಞಾನಿಕ

ಮಾನ್ಯರೇ,

ಕರ್ನಾಟಕ ಸಂಗ್ರಹಿಸುವ ತೆರಿಗೆಯಲ್ಲಿ ಕೇಂದ್ರ ಸರ್ಕಾರ ನೀಡುವ ಪಾಲು ಅತಿ ಕಡಿಮೆಯೂ, ಅವೈಜ್ಞಾನಿಕವೂ ಆಗಿದೆ. ಈ ಮೊಬಲಗನ್ನು ಕೇಂದ್ರ ಸರ್ಕಾರ ವಿತ್ತೀಯ ಆಯೋಗದ ಶಿಫಾರಸಿನಂತೆ ನೀಡುತ್ತದೆ ಎಂದು ಆರ್ಥಿಕ ತಜ್ಞರು ಪ್ರತಿಪಾದಿಸಿದ್ದಾರೆ.

ಹಿಂದಿನಿಂದಲೂ ರಾಷ್ಟ್ರೀಯ ಹಣಕಾಸು ಆಯೋಗ ಕರ್ನಾಟಕಕ್ಕೆ ಕಡಿಮೆ ನೆರವನ್ನು ನೀಡುತ್ತಿದೆ ಎಂಬ ಆರೋಪವಿದೆ. ಆದ್ದರಿಂದ ಹಣಕಾಸು ಆಯೋಗದ ಮಾನದಂಡಗಳನ್ನು ಬದಲಿಸಿ ರಾಜ್ಯಕ್ಕೆ ಶೇಕಡ 50ರಷ್ಟು ತೆರಿಗೆ ಪಾಲನ್ನು ನೀಡಬೇಕು ಎಂದು ಕರ್ನಾಟಕದ ಜನತೆ ಪಕ್ಷಾತೀತವಾಗಿ ಹೋರಾಟ ನಡೆಸಬೇಕು.

ಅದಕ್ಕಾಗಿ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ಪ್ರತಿನಿಧಿಗಳು, ಪ್ರಗತಿಪರ ಹಾಗೂ ಕನ್ನಡಪರ ಸಂಘಟನೆಗಳು ಮತ್ತು ಆರ್ಥಿಕ ತಜ್ಞರ ಸಭೆ ಕರೆದು ಚರ್ಚಿಸಿ, ನ್ಯಾಯಯುತ ಪಾಲಿಗಾಗಿ ಆಗ್ರಹವನ್ನು ಕೇಂದ್ರ ಸರ್ಕಾರದ ಮುಂದೆ ಇಡಬೇಕು.

ಕರ್ನಾಟಕದ ಪ್ರತಿಪಕ್ಷಗಳು ಪ್ರತ್ಯಾರೋಪ ಮಾಡದೆ ಹಣಕಾಸು ಆಯೋಗದ ವತಿಯಿಂದ ನ್ಯಾಯಯುತವಾದ ಅನುದಾನ ದೊರೆಯುವಂತೆ ಸರ್ವಾನುಮತದ ಆಗ್ರಹ ಮತ್ತು ಹೋರಾಟಕ್ಕೆ ಕೈಜೋಡಿಸಬೇಕು.

2018ರ ಕೇಂದ್ರ ಸರ್ಕಾರದ ಆಯವ್ಯಯ 24 ಲಕ್ಷ ಕೋಟಿ ರೂಪಾಯಿಗಳಷ್ಟಿದ್ದರೆ 2024ರ ಆಯವ್ಯಯ 48 ಲಕ್ಷ ಕೋಟಿಗಳಷ್ಟು ಇದೆ. ಅದೇ ರೀತಿಯಲ್ಲಿ ಕೇಂದ್ರದ ಅನುದಾನ ರಾಜ್ಯಕ್ಕೆ ಹೆಚ್ಚಾಗಿದೆಯೇ ಎಂಬುದನ್ನು ಆರ್ಥಿಕ ತಜ್ಞರು ಹೇಳಬೇಕಾಗಿದೆ. ಅದಾಗಿಯೂ ಶೇಕಡ 50ರಷ್ಟು ನೀಡುವುದರಿಂದ ರಾಜ್ಯಕ್ಕೆ ಹೆಚ್ಚಿನ ಹಣ ಸಿಗುವುದರ ಜೊತೆಗೆ ನ್ಯಾಯಯುತ ಪಾಲು ಸಿಕ್ಕಿದಂತಾಗುತ್ತದೆ.

ಕರ್ನಾಟಕದಿಂದ 4.5 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗುತ್ತಿದ್ದು, ಶೇಕಡ 50 ರಷ್ಟು ಪಾಲು ದೊರೆತರೆ ರಾಜ್ಯಕ್ಕೆ ಎರಡು ಕಾಲು ಲಕ್ಷ ಕೋಟಿ ರೂಪಾಯಿ ಲಭ್ಯವಾಗುತ್ತದೆ. ಕೇಂದ್ರಕ್ಕೆ ಎರಡು ಲಕ್ಷ ಕೋಟಿ ರೂಪಾಯಿ ಉಳಿಯುತ್ತದೆ. ಇದೇನು ಕಡಿಮೆ ಮೊತ್ತದ ಮೊಬಲಗಲ್ಲ.

ಆಶ್ಚರ್ಯಕರ ಸಂಗತಿ ಎಂದರೆ 2019ರಲ್ಲಿ ರಾಜ್ಯಕ್ಕೆ ದೊರೆತಿರುವ ಮೊಬಲಗಿಗಿಂತ ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನ ಕಡಿಮೆಯಾಗಿದೆ. ಈ ದಿಸೆಯಲ್ಲಿ ರಾಜ್ಯದ ಎಲ್ಲ ಸಂಸತ್ ಸದಸ್ಯರು ಪಕ್ಷಭೇದ ಮರೆತು ಒಟ್ಟಾಗಿ ಸೇರಿ ಶೇಕಡ 50ರಷ್ಟು ಅನುದಾನ ದೊರೆಯುವಂತೆ ಹಣಕಾಸು ಆಯೋಗದ ಮಾನದಂಡಗಳನ್ನು ಸೂಕ್ತವಾಗಿ ಪರಿಷ್ಕರಿಸುವಂತೆ ಒತ್ತಾಯ ಮಾಡಬೇಕೆಂದು ವೈಯಕ್ತಿಕವಾಗಿ ಆಗ್ರಹಿಸುತ್ತೇನೆ.

–ಸ.ರ.ಸುದರ್ಶನ, ಪ್ರಧಾನ ಕಾರ್ಯದರ್ಶಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು

### ನಾಗರಿಕ ಸಮಾಜ ಎತ್ತ ಸಾಗುತ್ತಿದೆ?!

ಮಾನ್ಯರೆ,

ಅವುಗಳು ತಮ್ಮ ಪಾಡಿಗೆ ತಾವು ಹಾಕಿದ್ದನ್ನು ತಿಂದುಕೊಂಡು ಇರುತ್ತಿದ್ದ ಮೂಕ ಜೀವಿಗಳು. ಹಾದಿ ಬೀದಿಯ ಕಸ ಕಡ್ಡಿ ತಿಂದು ನಮಗೆ ಅಮೃತ ನೀಡುವ ಮುಗ್ಧ ಮೂಕ ಪಶುಗಳು. ಹಾಲು ಕೊಡುವವರಿಗೆ ವಿಷ ಇಕ್ಕಂತೆ ಎನ್ನುವ ರೀತಿ ಹಾಲು ಕೊಡುವ ಕೆಚ್ಚಲನ್ನೇ ಕತ್ತರಿಸಿ, ಕಾಲುಗಳಿಗೆ ಮಚ್ಚಿನೇಟಿನಿಂದ ಘಾಸಿ ಮಾಡಿದ ಕಿರಾತಕರನ್ನು ನೋಡಿದಾಗ ನಮ್ಮ ನಾಗರಿಕ ಸಮಾಜ ಎತ್ತ ಸಾಗುತ್ತಿದೆ ಎಂದೆನಿಸದಿರದು. ಇದರ ಬೆನ್ನಲ್ಲೇ, ನಂಜನಗೂಡಿನಲ್ಲಿ ಹರಕೆ ಗೂಳಿಯ ಬಾಲವನ್ನು ಕತ್ತರಿಸಿದ ಸುದ್ದಿಯೂ ಮನಸ್ಸಿಗೆ ನೋವುಂಟು ಮಾಡಿದೆ. ಕೆಲವೇ ದಿನಗಳ ಹಿಂದೆ ಕಾಮಾಂಧನೊಬ್ಬ ಮೂಕ ಹಸುವಿನ ಮೇಲೆ ಅತ್ಯಾಚಾರ ಮಾಡಲು ಎಸಗಿದ ಸುದ್ದಿಯೂ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಇವೆಲ್ಲ ನೋಡಿದಲ್ಲಿ, ಕಾನೂನಿನ ಭಯವೇ ಇಲ್ಲವೆನ್ನುವಂತೆ ಇವರ ವರ್ತನೆ ತೋರುತ್ತಿದೆ. ಒಂದಂತೂ ನಿಜ, ಪೊಲೀಸರು ಅಪರಾಧಿಗಳನ್ನು ಹಿಡಿದಾಗ ಶಿಕ್ಷೆ ಅಲ್ಲೇ ನೀಡುವ ಕಾನೂನು ಬರಬೇಕು. ಹಮ್ಮುರಾಬಿ ಕಾಲದ ಕಾನೂನು ಮತ್ತೆ ಬಂದರೆ ಒಳಿತು. ನ್ಯಾಯಾಲಯಗಳಲ್ಲಿ ಇಂತಹ ಪ್ರಕರಣಗಳು ವರ್ಷಾನುಗಟ್ಟಲೇ ಎಳೆದು ಎಳೆದೂ ನಂತರ ಬೇಡದ ವಿಷಯಗಳನ್ನು ಹೆಕ್ಕಿ, ಅಪರಾಧಿಯನ್ನು ಅಪರಾಧ ನಡೆಸುವಾಗಲೇ ಹಿಡಿದಿದ್ದರೂ, ನಿರಪರಾಧಿಗಳಾಗಿಯೋ ಅಥವಾ ಕಡಿಮೆ ಶಿಕ್ಷೆ ನೀಡಿಯೋ ಇರುವುದು ನಡೆದಿದೆ. ಅಪರಾಧ ನಡೆದ ಕೆಲವೇ ದಿನಗಳೊಳಗೆ ನ್ಯಾಯಾಲಯಗಳು ಕಠಿಣ ಶಿಕ್ಷೆಯನ್ನು, ಅದರಲ್ಲಿಯೂ ಮೇಲ್ಮನವಿ ಸಲ್ಲಿಸದಂತೆ ನೀಡಿದಲ್ಲಿ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಬಹುದಾಗಿದೆ. ಆದರೆ ಇದಕ್ಕೆ ತಿದ್ದುಪಡಿ ತರುವರೇ ಎಂಬುವುದು ಮಿಲಿಯನ್ ಡಾಲರ್ ಪ್ರಶ್ನೆಯೂ ಹೌದು!

–ವಿಜಯ್ ಹೆಮ್ಮಿಗೆ, ಮೈಸೂರು

# ಜನಸಂಖ್ಯೆಗನುಸಾರ ಮೀಸಲಾತಿ, ಭೂ ಸುಧಾರಣೆ ಜಾರಿಯಾಗದೇ ಸಾಮಾಜಿಕ ನ್ಯಾಯ ಸ್ಥಾಪನೆ ಸಾಧ್ಯವಿಲ್ಲ

**● ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅಭಿಮತ ● ಬಹುರೂಪಿಯ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವಿಷಯ ಮಂಡನೆ ● ಸಾಮಾಜಿಕ ಸಮಾನತೆ ಇಲ್ಲದೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ**

ಮೈಸೂರು,ಜ.18(ಎಂಟಿವೈ)– ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಮತ್ತು ಭೂ ಸುಧಾರಣೆ ಜಾರಿಯಾಗುವವರೆಗೂ ಸಾಮಾಜಿಕ ನ್ಯಾಯ ಒದಗಿಸುವುದು ಸಾಧ್ಯವಿಲ್ಲ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಂಗಾಯಣ ಆವರಣದ ಬಿ.ವಿ.ಕಾರಂತರ ರಂಗಚಾವಡಿಯ ಮಂದಿರದಲ್ಲಿ ಬಹುರೂಪಿಯ ರಾಷ್ಟ್ರೀಯ ನಾಟಕೋತ್ಸವದ 'ಸಾಮಾಜಿಕ ನ್ಯಾಯ–ಚಳವಳಿಗಳು ಮತ್ತು ರಂಗಭೂಮಿ' ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆರ್ಥಿಕ, ಸಾಮಾಜಿಕ ಸಮಾನತೆ ಸಾಧಿಸದೆ ರಾಜಕೀಯ ಸ್ವಾತಂತ್ರ್ಯ ಪಡೆದರೆ ಪ್ರಜಾಪ್ರಭುತ್ವ ವಿಫಲವಾಗಲಿದೆ. ಅತೃಪ್ತ ಜನರು ರೊಚ್ಚಿಗೆದ್ದು ಪ್ರಜಾಪ್ರಭುತ್ವದ ಸೌಧವನ್ನು ಕೆಡವಿ ಹಾಕಲಿದ್ದಾರೆ. ಸಂವಿಧಾನ ಒಳ್ಳೆಯದಾಗಿದ್ದರೂ ಅನುಷ್ಠಾನ ಮಾಡುವವನು ಕೆಟ್ಟವನಾದರೆ ಸಮಾಜಕ್ಕೂ ಕೆಟ್ಟದಾಗುತ್ತದೆ.

ಈಗ ದೇಶದಲ್ಲಿ ಇದೇ ಪರಿಸ್ಥಿತಿ ಇದೆ. ದೇಶದಲ್ಲಿ ಪ್ರತಿ 16 ನಿಮಿಷಕ್ಕೆ ಒಮ್ಮೆ ದಲಿತರ ಮೇಲೆ ದೌರ್ಜನ್ಯ, ಪ್ರತಿದಿನ ನಾಲ್ವರು ದಲಿತ ಮಹಿಳೆಯರ ಮೇಲೆ ಸವರ್ಣೀಯರಿಂದ ಅತ್ಯಾಚಾರ, 12 ದಲಿತರ ಕೊಲೆ ಆಗುತ್ತಿದೆ. ಇದು ಗಮನಕ್ಕೆ ಬರುತ್ತಿರುವ ಘಟನೆಗಳಷ್ಟೇ. ರಾಜ್ಯದ ಶೇ.70 ದಲಿತರ ಬಳಿ ಭೂಮಿ ಇಲ್ಲ. ದಲಿತರಿಗೆ ಶೇ.24ರಷ್ಟು ಮೀಸಲಾತಿ ದೊರೆತಿಲ್ಲ. ಮೀಸಲಾತಿ ಮತ್ತು ಭೂ ಸುಧಾರಣೆಯ ಗಂಭೀರ ವಿಚಾರದ ಬಗ್ಗೆ ಪಿಹೆಚ್.ಡಿಗಳು ಆಗಬೇಕು ಎಂದು ಹೇಳಿದರು.

**ಭಾರತದಲ್ಲಿ ಬಿಲಿನೇಯರ್ಸ್ ಜಾಸ್ತಿ!:** ದೇಶದ ಒಟ್ಟು ವಾರ್ಷಿಕ ಆದಾಯದ ಸರಾಸರಿ 2.4 ಲಕ್ಷ ಕೋಟಿ ರೂ ಇದೆ. ಇದರಲ್ಲಿ ಶೇ.50ರಷ್ಟು ಜನರ ವಾರ್ಷಿಕ ಆದಾಯ 53 ಸಾವಿರ. ಶೇ.10ರಷ್ಟು ಜನ 12 ಲಕ್ಷ ವಾರ್ಷಿಕ ಆದಾಯವಿದೆ. ಇದರಿಂದ ಜಿಡಿಪಿ ಹೆಚ್ಚಳವಾಗಿರಬಹುದು. ಆದರೆ, ಆಸ್ತಿ ಸಮಾನವಾಗಿ ಹಂಚಿಕೆಯಾಗದ ಕಾರಣ ಅನಾಹುತಗಳು ಸಂಭವಿಸುತ್ತಿವೆ. ಅಮೆರಿಕಾ, ಚೀನಾ ಬಿಟ್ಟರೆ ಇಡೀ ಪ್ರಪಂಚದಲ್ಲಿ ಹೆಚ್ಚು ಶತ ಕೋಟ್ಯಾಧೀಶರು ಇರುವುದು ಭಾರತದಲ್ಲಿಯೆ. ಕಳೆದ ವರ್ಷ 102 ಮಂದಿ ಇದ್ದ ಬಿಲಿನೇಯರ್ಸ್ ಇಂದು 145 ಮಂದಿಯಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯಾವ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಬೇಕು? ಎಂದು ಪ್ರಶ್ನಿಸಿದರು.



ದಿನೇಶ್ ಅಮೀನ್ ಮಟ್ಟು

**256 ಕ್ರಿಮಿನಲ್ ಸಂಸದರಿದ್ದಾರೆ!:** ಸಾಮಾಜಿಕ ನ್ಯಾಯ ಸ್ಥಾಪನೆಗೆ ಸಂವಿಧಾನವಿದೆ. ಸಂವಿಧಾನದ ಆಶಯಗಳು ಅನುಷ್ಠಾನಗೊಂಡಿರುವ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದನ್ನು ಸಂಸತ್ತು ಮಾಡಬೇಕು. ಆದರೆ, ಸಂಸತ್ತಿನಲ್ಲಿ 256 ಮಂದಿ ಕ್ರಿಮಿನಲ್ ಸಂಸದರಿದ್ದಾರೆ. ಇವರೆಲ್ಲರೂ ಜಾಮೀನಿನ ಮೇಲೆ ಬಂದು ಸಂಸತ್ತಿನಲ್ಲಿದ್ದಾರೆ. ಇಂತಹ ಕ್ರಿಮಿನಲ್‌ಗಳನ್ನು ಸಂಸತ್ತಿನೊಳಗೆ ಬಿಟ್ಟು ಸಾಮಾಜಿಕ ನ್ಯಾಯ ಅನುಷ್ಠಾನಗೊಳ್ಳಬೇಕು ಎಂದರೆ ಹೇಗೆ ಸಾಧ್ಯ?. ಅಪ್ರಾಪ್ತ ಹುಡುಗಿಯ ಮೇಲೆ 80 ವರ್ಷದ ಹಿರಿಯ ರಾಜಕಾರಣಿ ಲೈಂಗಿಕ ದೌರ್ಜನ್ಯ ನಡೆಸುತ್ತಾನೆ. ಆತನ ಮೇಲೆ ಜಾಮೀನುರಹಿತ ಪೋಕ್ಸೋ ಪ್ರಕರಣವಿದೆ. ಜೈಲಿನಲ್ಲಿ ಇರಬೇಕಿತ್ತು. ಆದರೆ, ಜಾಮೀನಿನ ಮೇಲೆ ಹೊರಗಡೆ ಇದ್ದಾನೆ.

**1952ರಲ್ಲಿ 25; 2024ರಲ್ಲಿ 24 ಮುಸ್ಲಿಂ ಸಂಸದರಿದ್ದಾರೆ:** ದಲಿತರಿಗೆ ಮೀಸಲಾತಿ ಕಾರಣದಿಂದ ರಾಜಕೀಯ ಪ್ರಾತಿನಿಧ್ಯ ಸಿಕ್ಕಿದೆ. ಆದರೆ, ಮುಸ್ಲಿಂರಿಗೆ ಪ್ರಾತಿನಿಧ್ಯವೇ ಇಲ್ಲವಾಗಿದೆ. 1952ರಲ್ಲಿ 25 ಮುಸ್ಲಿಂ ಸಮುದಾಯದ ಸಂಸದರಿದ್ದರು. ಅದೇ 2024ರಲ್ಲಿ 24 ಮಂದಿ ಇದ್ದಾರೆ. ಬಿಜೆಪಿಯಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ಸಮುದಾಯದ ಸದಸ್ಯನಿಲ್ಲ. ಯಾವ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡಬೇಕು. ಮೀಸಲಾತಿ ಬಗ್ಗೆ ಇಂದು ಬಹಳಷ್ಟು ಚರ್ಚೆಯಾಗುತ್ತಿದೆ.

ಆದರೆ, ಶೇ.2ರಷ್ಟು ಮಾತ್ರ ಸರ್ಕಾರದ ಉದ್ಯೋಗಗಳಿವೆ. ಶೇ.98ರಷ್ಟು ಖಾಸಗಿ ಕ್ಷೇತ್ರದಲ್ಲಿ ಇದೆ. ಈ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಹೀಗಾಗಿ ಖಾಸಗಿ ವಲಯವನ್ನು ರಾಷ್ಟ್ರೀಕರಣಗೊಳಿಸಬೇಕು. ಕೃಷಿ ಪದಾರ್ಥಗಳನ್ನು ಸರ್ಕಾರವೇ ಖರೀದಿಸಿ ಮಾರಾಟ ಮಾಡಬೇಕು. ಪ್ರಸ್ತುತ ಸನ್ನಿವೇಶದಲ್ಲಿ ಭೂಮಿ ಹಂಚಿಕೆ ಮಾಡಬೇಕು ಎಂದು ಮನವಿ ಮಾಡಿದರು.

# ಬಹುರೂಪಿಯತ್ತ ರಂಗಾಸಕ್ತರ ಚಿತ್ತ ಜೋರು

### ಜನಪದೋತ್ಸವದಲ್ಲಿ ಸುಗ್ಗಿ ಸಂಸ್ಕೃತಿ ಅನಾವರಣ



ವನರಂಗದಲ್ಲಿ ಶನಿವಾರ ನಡೆದ 'ತಲ್ಕಿ (ಕನ್ನಡ)' ನಾಟಕ ಪ್ರದರ್ಶನ




ಅರೆಭಾಷೆ ಒಕ್ಕಲಿಗ ಗೌಡ ಸಮುದಾಯದ ಸುಗ್ಗಿ ಸಂದರ್ಭದಲ್ಲಿನ ಜಾನಪದ ನೃತ್ಯ ಪ್ರದರ್ಶನ ಕಂಡಿದ್ದನ್ನು ಕಾಣಬಹುದು.

ಮೈಸೂರು,ಜ.18(ಪಿಎಂ)– ರಂಗಾಯಣದಲ್ಲಿ ನಡೆಯುತ್ತಿರುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದತ್ತ ಶನಿವಾರ ರಂಗಾಸಕ್ತರ ಚಿತ್ತ ಜೋರಾಗಿಯೇ ಇತ್ತು. ಜೊತೆಗೆ ವಿವಿಧ ಭಾಷೆಯ ನಾಟಕಗಳು ಬಣ್ಣದ ಲೋಕ ಮೂಲಕ ಮನರಂಜನೆಯೊಂದಿಗೆ ಚಿಂತನೆಗೂ ಹಚ್ಚಿದವು. ಅಲ್ಲದೆ, ಕಿಂದರಿಜೋಗಿ ಆವರಣದಲ್ಲಿ ನಡೆದ ಜನಪದ ಉತ್ಸವದಲ್ಲಿ ಸುಗ್ಗಿಯ ಸಂಸ್ಕೃತಿ ಮತ್ತು ಡೊಳ್ಳು ಕುಣಿತದ ಸಾಹಸಮಯ ಭಂಗಿಗಳು ಅನಾವರಣಗೊಂಡು ನೆರೆದಿದ್ದ ಪ್ರೇಕ್ಷಕರು ಸಂಭ್ರಮದಲ್ಲಿ ತೇಲಿದರು.

ಮೈಸೂರಿನ ಎಸ್.ರಮ್ಯ ಮತ್ತು ತಂಡ ಸಾದರಪಡಿಸಿದ ಡೊಳ್ಳು ಕುಣಿತ ನೋಡುಗರಲ್ಲಿ ರೋಮಾಂಚನ ಉಂಟು ಮಾಡಿತು. ಬಳಿಕ ಭಾಗಮಂಡಲದ ಅಭಿನಯ ಕಲಾ ಮಿಲನ ಚಾರಿಟಬಲ್ ಟ್ರಸ್ಟ್ ಪ್ರಸ್ತುತಪಡಿಸಿದ ಅರೆಭಾಷೆ ಒಕ್ಕಲಿಗ ಗೌಡ ಸಮುದಾಯದ ಸುಗ್ಗಿ ಕುಣಿತ ಮತ್ತು ಹುತ್ತರಿ ಕೋಲು ನೃತ್ಯಕ್ಕೆ ಮನಸೋತ ಶ್ರೋತೃಗಳು ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

ಭೂಮಿಗೀತದಲ್ಲಿ ದಶಾನನ ಸ್ವಪ್ನಸಿದ್ಧಿ (ಕನ್ನಡ), ಕಿರುರಂಗಮಂದಿರದಲ್ಲಿ ತವಾಷಾ (ಮಲಯಾಳಂ), ವನರಂಗದಲ್ಲಿ 'ತಲ್ಕಿ (ಕನ್ನಡ) ಹಾಗೂ ಕಲಾಮಂದಿರದಲ್ಲಿ 'ಕಾನುಲಿವಾಲಾ ಕಾಲಿಂಗ್ (ಇಂಗ್ಲಿಷ್) ನಾಟಕಗಳ ಪ್ರದರ್ಶನ ನಡೆದವು. ಎಲ್ಲಾ ನಾಟಕಗಳಿಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಈ ಪೈಕಿ ಭೂಮಿಗೀತ ರಂಗಮಂದಿರ ಹೌಸ್‌ಫುಲ್ ಆಗಿತ್ತು.

# ಸುಳ್ಳು ನೀತಿಶಾಸ್ತ್ರದಡಿ ಭಾರತದ ಬಹುತ್ವದ ನೆಲೆಗಳ ತಿರುಚುವ ಪ್ರಯತ್ನದ ವಿರುದ್ಧ ಪ್ರತಿಭಟನೆ ಅಗತ್ಯ

### ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಮತ




ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಶನಿವಾರ ನಡೆದ ವಿಚಾರ ಸಂಕಿರಣದ ಗೋಷ್ಠಿಯಲ್ಲಿ ಚಿಂತಕ ಬಂಜಗೆರೆ ಜಯಪ್ರಕಾಶ್ ಮಾತನಾಡಿದರು.

ಮೈಸೂರು,ಜ.18(ಪಿಎಂ)– ಭಾರತದಲ್ಲಿ ಧರ್ಮಶಾಸ್ತ್ರಗಳ ಅನುಸಾರವಾಗಿ ಕೆಲ ಜಾತಿ, ಅವುಗಳ ಪದ್ಧತಿಯನ್ನು ಶ್ರೇಷ್ಠವೆಂದು ಸುಳ್ಳಾಗಿ ಬಿಂಬಿಸಲಾಗಿದೆ. ಬಹುತ್ವದ ನೆಲೆಗಳು ನಮ್ಮ ಸಂಸ್ಕೃತಿಯ ಭಾಗ. ರಾಜಕೀಯ, ಹಣ–ಅಧಿಕಾರದ ಬಲ ಮತ್ತು ಸುಳ್ಳು ನೀತಿಶಾಸ್ತ್ರದ ಮೂಲಕ ಭಾರತದ ಇಂತಹ ಸ್ವರೂಪ ಮತ್ತು ಸ್ವಾಭಾವ ತಿರುಚುವ ಪ್ರಯತ್ನವನ್ನು ನಾವು ಗಟ್ಟಿಯಾಗಿ ಪ್ರತಿಭಟಿಸಬೇಕೆಂದು ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಹಮ್ಮಿಕೊಂಡಿರುವ ಬಹುರೂಪಿ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಬಹುಜನ ಸಂಸ್ಕೃತಿಯ ಬಹುತ್ವದ ನೆಲೆಗಳು' ಶೀರ್ಷಿಕೆಯಡಿ 'ಏಕರೂಪಿ ಸಂಸ್ಕೃತಿಯ ಪ್ರತಿಪಾದನೆ ಹಾಗೂ ಬಹುತ್ವದ ನೆಲೆಗಳ ದಮನ' ಮತ್ತು 'ಆಹಾರ ವಸ್ತ್ರ ಮತ್ತು ಆರಾಧನ ಸಂಸ್ಕೃತಿಯ ಬಿಡುಗಡೆಯ ದಾರಿಗಳು' ವಿಷಯಗಳ ಕುರಿತು ಶನಿವಾರ ನಡೆದ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮನುಧರ್ಮ ಶಾಸ್ತ್ರದಲ್ಲಿಯೂ ಆಹಾರದ ಬಗ್ಗೆ ಒಂದೇ ನಿಲುವಿಲ್ಲ. ಸಸ್ಯಾಹಾರವೇ ಶ್ರೇಷ್ಠವೆಂದು ಇಲ್ಲಿಯೂ ಪ್ರತಿಪಾದಿಸಿಲ್ಲ. ಶಾಸ್ತ್ರಾಚರಣೆ ಪ್ರಕಾರವೇ ನಾಗ ಬ್ರಾಹ್ಮಣರು, ಕಾಶ್ಮೀರಿ ಬ್ರಾಹ್ಮಣರು, ಅಸ್ಸಾಂ ಬ್ರಾಹ್ಮಣರು ಹಾಗೂ ಬಂಗಾಲಿ ಬ್ರಾಹ್ಮಣರಿಗೆ ಮಾಂಸಾಹಾರ ನಿಷಿದ್ಧವಲ್ಲ. ರಾಮಕೃಷ್ಣ ಪರಮಹಂಸರೂ ಬ್ರಾಹ್ಮಣರೇ, ಜೊತೆಗೆ ಅವರು ಕಾಳಿ ಆರಾಧಕರು. ಅವರಿಗೆ ಮಾಂಸಾಹಾರ ಮಾಡಿ ಕೊಡುತ್ತಿದ್ದ ಬಗ್ಗೆ ಶಾರದಾದೇವಿ ಅವರೇ ಬರೆದುಕೊಂಡಿದ್ದಾರೆ. ಹೀಗಿರುವಾಗ ಅವರು ನೀತಿರೂಪಿತವಾದ ಜೀವನ ನಡೆಸಿಲ್ಲ ಎನ್ನಲಾದೀತೆ ಎಂದು ಪ್ರಶ್ನಿಸಿದರು. ಆಹಾರ ಪದ್ಧತಿಯು ಭೌಗೋಳಿಕ, ಹವಾಮಾನ ಆಧಾರಿತ ಮತ್ತು ಚರಿತ್ರೆಯ ಹಿನ್ನೆಲೆಯಲ್ಲಿ ಬೆಳೆಯುತ್ತದೆ ಎಂದರು.

ಮುಸಲ್ಮಾನರ ವಿರೋಧಿ ರಾಜಕಾರಣ ಮಾಡುವವರ ಮನೆಯಲ್ಲೇ ಮುಸ್ಲಿಂರನ್ನು ಮದುವೆಯಾದವರು ಇದ್ದಾರೆ. ಮಾಡುವ ಆಚರಣೆಯೇ ಬೇರೆ. ಆದರೆ ಹೇಳಬೇಕಾದರೆ ಮಾತ್ರ ಒಂದು ಶಾಸ್ತ್ರ ಸಿದ್ಧಾಂತ ಹೇಳುತ್ತಾರೆ. ಒಂದು ಸಂಸ್ಕೃತಿ, ಒಂದು ಪದ್ಧತಿ ಮಾಡುವುದು ಅಮಾನವೀಯ–ಅನೈಸರ್ಗಿಕವಾದುದು. ಒಂದು ಪದ್ಧತಿ ಮಾಡಲು ಇವರಿಗೆ ಅಧಿಕಾರ ಕೊಟ್ಟವರು ಯಾರು. ಎಲ್ಲರೂ ಇವರಷ್ಟೇ ಪ್ರಾಚೀನರು ಅಥವಾ ಅವರಿಗಿಂತಲೂ ಪ್ರಾಚೀನರು ಎಂದು ಕಿಡಿಕಾರಿದರು.

ಭಾರತದ ಸ್ವರೂಪ ತಿರುಚುವ ಪ್ರಯತ್ನವನ್ನು ಪ್ರತಿಭಟಿಸಬೇಕು. ಆದರೆ ಬಹಳ ಸಂದರ್ಭದಲ್ಲಿ ಪ್ರತಿಭಟಿಸದೇ ಅನುಸರಣೆಗೆ ಮುಂದಾಗುತ್ತಿದ್ದೇವೆ. ಇದನ್ನು ಬಿಟ್ಟು ನಿಸರ್ಗದತ್ತವಾಗಿ ಬೆಳೆದು ಬಂದಿರುವ ನಮ್ಮ ಸಂಸ್ಕೃತಿ ಉಳಿಸುವ ದಿಕ್ಕಿನಲ್ಲಿ ಪ್ರಯತ್ನಗಳು ನಡೆಯಬೇಕು ಎಂದರು. ಇದಕ್ಕೂ ಮುನ್ನ ಸಮಾಜಶಾಸ್ತ್ರಜ್ಞ ಸಿ.ಜಿ.ಲಕ್ಷ್ಮೀಪತಿ ಮತ್ತು ಹೋರಾಟಗಾರ್ತಿ ಸಿರಿಗೌರಿ ವಿಷಯಗಳನ್ನು ಮಂಡಿಸಿದರು.

# ಟಿಕೆಟ್ ಇದ್ದೂ ನಾಟಕ ನೋಡಲಾಗದೇ ವಾಪಸ್ಸು ತೆರಳಿದ ಪ್ರೇಕ್ಷಕರು!

**● ಬಹುರೂಪಿಯಲ್ಲಿ ಎಡವಟ್ಟು ; ಆಸನಗಳಿದ್ದಷ್ಟು ವ್ಯವಸ್ಥೆಗೊಳ್ಳದ ಟಿಕೆಟ್ ● ಪಾರ್ಕಿಂಗ್ ಸಮಸ್ಯೆ ಬಗ್ಗೆಯೂ ಬೇಸರ**



ಮೈಸೂರು,ಜ.18(ಪಿಎಂ)– ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಶನಿವಾರ ಭೂಮಿಗೀತ ರಂಗ ಮಂದಿರ ಹೌಸ್‌ಫುಲ್ ಆಗಿತ್ತು. ಆದರೆ ಟಿಕೆಟ್ ಇದ್ದೂ ಹತ್ತಾರು ಮಂದಿ ಇಲ್ಲಿನ ನಾಟಕ ನೋಡಲಾಗದೇ ವಾಪಸ್ಸು ತೆರಳಬೇಕಾಯಿತು.

ನಾವು ಟಿಕೆಟ್ ಖರೀದಿಸಿ ಬಂದಿದ್ದೇವೆ. ರಂಗ ಮಂದಿರದಲ್ಲಿ ಆಸನಗಳು ಇದ್ದಷ್ಟು ಮಾತ್ರವೇ ಟಿಕೆಟ್ ವ್ಯವಸ್ಥೆ ಮಾಡಬೇಕಲ್ಲವೇ? ಎಂಬುದು ಈ ಹತ್ತಾರು ಮಂದಿಯ ಪ್ರಶ್ನೆಯಾಗಿತ್ತು. ಆದರೆ ಅವರ ಈ ಪ್ರಶ್ನೆಗೆ ಉತ್ತರಿಸುವವರೂ ಕೆಲಕಾಲ ಯಾರೂ ಇರಲಿಲ್ಲ.

ಸಾಗರದ ಭಳೀರೇ ವಿಚಿತ್ರಮ್ ತಂಡದಿಂದ 'ದಶಾನನ ಸ್ವಪ್ನಸಿದ್ಧಿ' ನಾಟಕ ಅದೇ ತಾನೆ ಆರಂಭಗೊಂಡಿತ್ತು. ತುಸು ತಡವಾಗಿ ಬಂದ ಹತ್ತಾರು ರಂಗಾಸಕ್ತರು ಬಾಗಿಲು ಬಡಿದರೂ ಯಾರೂ ತೆರೆಯಲಿಲ್ಲ. ಈ ಮಧ್ಯೆ ನಿರಾಸೆಗೊಂಡಿದ್ದ ಈ ರಂಗಾಸ್ತರು, ಪಾರ್ಕಿಂಗ್ ವ್ಯವಸ್ಥೆಯೂ ಸಮರ್ಪಕವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕೊನೆಗೆ ಟಿಕೆಟ್ ಹಣವನ್ನು ಅವರಿಗೆ ಮರುಪಾವತಿ ಮಾಡಿ, ಕಳುಹಿಸಲಾಯಿತು. ಕುವೆಂಪು ಅವರ ಮೂಲ ಪಠ್ಯದ ಆಧಾರದಲ್ಲಿ ರಂಗ ಸ್ವರೂಪ ಪಡೆದಿರುವ ಈ ನಾಟಕ ನೋಡಲು ಆಸಕ್ತರಾಗಿದ್ದ ಈ ಹತ್ತಾರು ಮಂದಿ, ನಿರಾಸೆಯಿಂದ ಮನೆಗೆ ಮರಳ ಬೇಕಾಯಿತು. ಯಾರೋ ಮಾಡಿದ ಎಡವಟ್ಟಿಗೆ ಪ್ರೇಕ್ಷಕರು ಪರಿತಪಿಸಿ ಮರಳಿದ್ದು ನಿಜಕ್ಕೂ ಬೇಸರವೇ ಸರಿ.

# ನಮ್ಮ ತಂಡ ಗೆಲ್ಲಿಸಿ; ಬ್ಯಾಂಕ್ ಅಭಿವೃದ್ಧಿಗೆ ಸಹಕರಿಸಿ



### ಕೆ.ಉಮಾಶಂಕರ್ ಮನವಿ

ಮೈಸೂರು, ಜ.18–ನಾಳೆ (ಜ.19) ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ನಡೆಯಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆಯಲ್ಲಿ ಬ್ಯಾಂಕ್‌ನ ಅಭಿವೃದ್ಧಿ ದೃಷ್ಟಿಯಿಂದ ತಮ್ಮ ನೇತೃತ್ವದಲ್ಲಿ ಸ್ಪರ್ಧಿಸಿರುವ ತಂಡದ ಅಭ್ಯರ್ಥಿಗಳಿಗೆ ಮತ ಚಲಾಯಿಸಿ ಜಯಶೀಲರನ್ನಾಗಿ ಮಾಡಬೇಕೆಂದು ಕೆ.ಉಮಾಶಂಕರ್ ಮನವಿ ಮಾಡಿದ್ದಾರೆ. ಈ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ತಾವು (ಕೆ.ಉಮಾಶಂಕರ್), ಎಂ.ಕುಮಾರ್, ಕೆ.ಹರೀಶ್ ಕುಮಾರ್, ಪರಿಶಿಷ್ಟ ಜಾತಿ ಕ್ಷೇತ್ರದಿಂದ ಕೆ.ಗಿರೀಶ್, ಮಹಿಳಾ ಕ್ಷೇತ್ರದಿಂದ ಪಿ.ರಾಜೇಶ್ವರಿ, ಪಿ.ಸವಿತಾ, ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಎಂ.ರಾಮಕೃಷ್ಣ (ಪಡುವಾರಹಳ್ಳಿ ರಾಮಕೃಷ್ಣ), ಹಿಂದುಳಿದ ವರ್ಗದ ಕ್ಷೇತ್ರದಿಂದ ಸಿ.ರೇವಣ್ಣ ಸ್ಪರ್ಧಿಸುತ್ತಿರುವುದಾಗಿ ತಿಳಿಸಿರುವ ಅವರು, ತಮ್ಮ ತಂಡದ ಎಲ್ಲಾ ಅಭ್ಯರ್ಥಿಗಳಿಗೂ ಮತ ಚಲಾಯಿಸಿ ಗೆಲ್ಲಿಸುವ ಮೂಲಕ ಬ್ಯಾಂಕ್‌ನ ಅಭಿವೃದ್ಧಿಗೆ ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

# ದಲಿತರ ಮೇಲೆ ದೌರ್ಜನ್ಯ ಆರೋಪ

ಮೈಸೂರು,ಜ.18–ತಿ.ನರಸೀಪುರ ತಾಲೂಕು ಮೂಗೂರು ಗ್ರಾಮದ ಶ್ರೀ ತಿಬ್ಬಾದೇವಿ ಜಾತ್ರಾ ಮಹೋತ್ಸವದಲ್ಲಿ ದಲಿತರ ಮೇಲೆ ದೌರ್ಜನ್ಯ ಎಸಗಿರುವ ತಿ.ನರಸೀಪುರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ ಅವರನ್ನು ಅಮಾನತುಪಡಿಸಬೇಕೆಂದು ದಲಿತ ಸಂಘರ್ಷ ಸಮಿತಿ (ದಾದಾ ಸಾಹೇಬ್ ಡಾ.ಎನ್.ಮೂರ್ತಿ ಸ್ಥಾಪಿತ) ಜಿಲ್ಲಾಧ್ಯಕ್ಷ ಶಂಕರ್, ಜಿಲ್ಲಾ ಎಸ್ಪಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮೂಗೂರು ಗ್ರಾಮದಲ್ಲಿ ಜನವರಿ 15ರಂದು ಸಂಜೆ ನಡೆದ ಶ್ರೀ ತಿಬ್ಬಾದೇವಿ ಜಾತ್ರಾ ಮಹೋತ್ಸವದಲ್ಲಿ ತೇರು ಎಳೆಯುವ ವಿಚಾರವಾಗಿ ತಳ್ಳಾಟ–ನೂಕಾಟ ನಡೆದಿದ್ದು, ಆ ವೇಳೆ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದಾರೆ. ನಂತರ ಸುಮಾರು 50 ಮಂದಿ ಪೊಲೀಸರೊಂದಿಗೆ ದಲಿತ ಕೇರಿಗೆ ನುಗ್ಗಿದ ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ ಅವರು, ಅಮಾಯಕ ದಲಿತರನ್ನು ಎಳೆದೊಯ್ದು ಎಫ್‌ಐಆರ್ ದಾಖಲಿಸಿ, ಜೈಲಿಗೆ ಹಾಕಿದ್ದಾರೆ ಎಂದು ಅವರು ದೂರಿದ್ದಾರೆ.

### ಅಮ್ಮನ ಕೈ ರುಚಿ ಹೋಟೆಲ್ ಉದ್ಘಾಟನೆ...



ಮೈಸೂರಿನ ವಿವಿ ಮೊಹಲ್ಲಾದ 11ನೇ ಕ್ರಾಸ್‌ನಲ್ಲಿ ನೂತನವಾಗಿ ಪ್ರಾರಂಭಿಸಿರುವ ಅಮ್ಮನ ಕೈ ರುಚಿ ಹೋಟೆಲ್ ಅನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ, ಶುಭ ಹಾರೈಸಿದರು. ಚಿತ್ರದಲ್ಲಿ ಹೋಟೆಲ್ ಮಾಲೀಕ ಸಮರ್ಥ್ ಗೌಡ, ಮಾಜಿ ಕಾರ್ಪೊರೇಟರ್ ಸ್ನೇಕ್ ಶ್ಯಾಮ್ ಇನ್ನಿತರರು ಕಾಣಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 19 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 272 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




## ಫೆ.1ರಂದು ಕೇಂದ್ರ ಬಜೆಟ್ ಮಂಡನೆ

**ನವದೆಹಲಿ:** 2025ನೇ ಸಾಲಿನ ಕೇಂದ್ರ ಬಜೆಟ್ ಮಂಡನೆಗೆ ಮುಹೂರ್ತ ಫಿಕ್ಸ್ ಆಗಿದೆ. ಜ.31ರಿಂದ ಸಂಸತ್ ಬಜೆಟ್ ಅಧಿವೇಶನ ಆರಂಭವಾಗಲಿದೆ. ಈ ಕುರಿತು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಾಹಿತಿ ನೀಡಿದ್ದಾರೆ. ಏಪ್ರಿಲ್ 4ರವರೆಗೆ ಅಧಿವೇಶನ ನಡೆಯಲಿದೆ ಎಂದರು.

ಜ.31ರಂದು ಬೆಳಗ್ಗೆ 11 ಗಂಟೆಗೆ ಲೋಕಸಭೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಸಂಸತ್ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಫೆ.1ರಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕೇಂದ್ರ ಬಜೆಟ್–2025–26ನ್ನು ಮಂಡಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಬಳಿಕ ಸಂಸತ್ ಬಜೆಟ್ ಪ್ರಸ್ತಾವನೆಗಳನ್ನು ಪರಿಶೀಲಿಸಲು ವಿರಾಮ ತೆಗೆದುಕೊಳ್ಳಲಾಗುವುದು. ವಿವಿಧ ಸಚಿವಾಲಯಗಳ ಅನುದಾನಗಳ ಬೇಡಿಕೆಗಳನ್ನು ಚರ್ಚಿಸಲು ಮತ್ತು ಬಜೆಟ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಮಾ.10ರಿಂದ ಮತ್ತೆ ಸಭೆ ಸೇರುತ್ತೇವೆ ಎಂದು ವಿವರಿಸಿದ್ದಾರೆ.

## ಸಿಇಟಿ ಪರೀಕ್ಷೆಗೆ ಪಠ್ಯಕ್ರಮ ಪ್ರಕಟಿಸಿದ ಕೆಇಎ

ಬೆಂಗಳೂರು, ಜ.18– ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ 2025ನೇ ಸಾಲಿನಲ್ಲಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗೆ ಪಠ್ಯಕ್ರಮವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನ ವಿಷಯಗಳ ಪಠ್ಯಕ್ರಮವನ್ನು ವೆಬ್‌ಸೈಟ್‌ನಲ್ಲಿ ಹಾಕಿದ್ದು, ಅದನ್ನು ನೋಡಿಕೊಂಡೇ ಪರೀಕ್ಷೆಗೆ ತಯಾರಿ ನಡೆಸಿಕೊಳ್ಳಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಹೇಳಿದ್ದಾರೆ.

ಎನ್‌ಸಿಆರ್‌ಟಿಸಿ ಪಠ್ಯಕ್ರಮ ಹಾಗೂ ಶಾಲಾ ಶಿಕ್ಷಣ (ಪಿಯು) ಇಲಾಖೆ ಪ್ರಕಟಿಸಿರುವ ಪಠ್ಯ ಪುಸ್ತಕಗಳನ್ನು ಆಧಾರವಾಗಿ ಇಟ್ಟುಕೊಂಡೇ ಈ ಪಠ್ಯಕ್ರಮ ರಚಿಸಲಾಗಿದೆ. ಇದನ್ನು ಪಿಯು ಕಾಲೇಜುಗಳ ವಿಷಯ ತಜ್ಞರಿಂದಲೂ ಪರಿಶೀಲನೆ ಮಾಡಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

### ಮುಡಾ ಮಾಜಿ ಆಯುಕ್ತನ ಹೆಸರಲ್ಲಿ 198, ಎಂಎಲ್‌ಸಿ ಹೆಸರಲ್ಲಿ 128 ಬೇನಾಮಿ ಸೈಟ್ ಸೇರಿ

# 631 ಸೈಟುಗಳ ಮಾಹಿತಿ ಕೇಳಿದ ಇಡಿ!



**ಮೈಸೂರು, ಜ.18– ಈಗಾಗಲೇ 300 ಕೋಟಿ ರೂ. ಮೌಲ್ಯದ 142 ನಿವೇಶನಗಳನ್ನು ಜಪ್ತಿ ಮಾಡಿರುವ ಇಡಿ, ಸದ್ಯದಲ್ಲೇ ಮುಡಾ ಸ್ಥಿರಾಸ್ತಿ ಜಪ್ತಿಯ ಭಾಗ–2 ಕಾರ್ಯಾಚರಣೆ ಆರಂಭಿಸುವ ಸಾಧ್ಯತೆ ಇದೆ. 631 ಮುಡಾ ನಿವೇಶನಗಳ ಬಗ್ಗೆ ಮಾಹಿತಿ ನೀಡುವಂತೆ ಮುಡಾ ಅಧಿಕಾರಿಗಳನ್ನು ಇಡಿ ಕೇಳಿದೆ.**

ಅಕ್ರಮ ಹಣ ವರ್ಗಾವಣೆ ಹಿನ್ನೆಲೆಯಲ್ಲಿ ಕಳೆದ ಡಿ.16ರಂದೇ ಮುಡಾಗೆ ಇಡಿ ಅಧಿಕಾರಿಗಳು ಬರೆದಿರುವ ಪತ್ರದಲ್ಲಿ ನಿವೇಶನಗಳ ವಿವರ ಕೇಳಿದ್ದಾರೆ ಎನ್ನಲಾಗಿದೆ.

**ಎಂಎಲ್‌ಸಿ ಹೆಸರಲ್ಲಿ 128 ಸೈಟು:** ಮುಡಾ ಸೈಟು ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಕಪ್ಪು ಹಣದ ವಹಿವಾಟು ಹೆಚ್ಚಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. 631 ನಿವೇಶನಗಳ ಖರೀದಿಯಲ್ಲಿ ದೊಡ್ಡ ಮಟ್ಟದಲ್ಲಿ ಕಪ್ಪು ಹಣದ ವಹಿವಾಟು ನಡೆದಿದೆ ಎಂದು ಇಡಿ ಮೂಲಗಳು ತಿಳಿಸಿವೆ. ಅಲ್ಲದೇ ಮುಡಾ ಮಾಜಿ ಆಯುಕ್ತನ ಹೆಸರಲ್ಲಿ 198, ಮೈಸೂರಿನ ಎಂಎಲ್‌ಸಿ ಒಬ್ಬರಿಗೆ ಸೇರಿದೆ ಎನ್ನಲಾದ 128 ನಿವೇಶನಗಳ ದಾಖಲೆಗಳು ಪತ್ತೆಯಾಗಿವೆ. ಮುಡಾ ನಗರ ಯೋಜನೆ ಅಧಿಕಾರಿ ಒಬ್ಬರಿಗೆ ಸೇರಿದ 92 ಬೇನಾಮಿ ನಿವೇಶನಗಳ ದಾಖಲೆಗಳೂ ಪತ್ತೆಯಾಗಿವೆ.

**ಮಾಜಿ ಆಯುಕ್ತರ ಕುಟುಂಬಸ್ಥರ ಹೆಸರಲ್ಲಿ ಭಾರೀ ಆಸ್ತಿ ಪತ್ತೆ:** ಮೈಸೂರಿನ ರಿಯಲ್ ಎಸ್ಟೇಟ್ ಏಜೆಂಟ್‌ವೊಬ್ಬ ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ಬೇನಾಮಿ ಆಗಿರುವ ಅನುಮಾನ ದಟ್ಟವಾಗಿದೆ. ಇತ್ತೀಚೆಗೆ ರಿಯಲ್ ಎಸ್ಟೇಟ್ ಏಜೆಂಟ್‌ವೊಬ್ಬನ ಮನೆ ಹಾಗೂ ಕಚೇರಿ ಮೇಲೆ ಇಡಿ ಅಧಿಕಾರಿಗಳು ನಿರಂತರವಾಗಿ 70 ಗಂಟೆ ರೇಡ್ ಮಾಡಿದ್ದರು. ಆಗ ಆ ರಿಯಲ್ ಎಸ್ಟೇಟ್ ಏಜೆಂಟ್ ಮನೆಯಲ್ಲಿ ಬಹುತೇಕ ಬೇನಾಮಿ ದಾಖಲೆಗಳು ಸಿಕ್ಕಿದ್ದು, ಗೃಹ ನಿರ್ಮಾಣ ಸಹಕಾರ ಸಂಘದ ಹೆಸರಿಲ್ಲಿ ಬೇನಾಮಿ ನಡೆದಿದೆ ಎನ್ನಲಾಗುತ್ತಿದೆ. ಅಲ್ಲದೆ ಮುಡಾ ಮಾಜಿ ಆಯುಕ್ತ ದಿನೇಶ್ ಕುಮಾರ್ ಕುಟುಂಬಸ್ಥರ ಹೆಸರಿನಲ್ಲೂ ಆಸ್ತಿಗಳು ಇವೆ ಎನ್ನಲಾಗಿದೆ.

ರಿಯಲ್ ಎಸ್ಟೇಟ್ ಏಜೆಂಟ್, ಪ್ರಾಥಮಿಕ ವಿಚಾರಣೆಯಲ್ಲಿ ಹಲವರ ಹೆಸರು ಬಾಯಿ ಬಿಟ್ಟಿದ್ದಾನೆ. ಮುಡಾ ಮಾಜಿ ಆಯುಕ್ತ ದಿನೇಶ್ ಕುಮಾರ್ ಸಂಬಂಧಿಯ ಹೆಸರನ್ನು ತಿಳಿಸಿದ್ದಾನೆ. ಹೀಗಾಗಿಯೆ ರಿಯಲ್ ಎಸ್ಟೇಟ್ ಏಜೆಂಟ್ ಮನೆ, ಕಚೇರಿ ಮೇಲೆ ರೇಡ್ ಆಗುತ್ತಿದ್ದಂತೆ ಮುಡಾ ಮಾಜಿ ಆಯುಕ್ತ ದಿನೇಶ್ ಕುಮಾರ್ ■6ನೇ ಪುಟಕ್ಕೆ

### ಇಡಿ ವಶಕ್ಕೆ ಪಡೆದಿರುವ 142 ಸ್ಥಿರಾಸ್ತಿಗಳು ಬಹುತೇಕ ಬೇನಾಮಿ 'ರಿಯಲ್' ಉದ್ಯಮಿಗಳವು!

- ಮೈಸೂರು, ಮಂಡ್ಯ, ಬೆಂಗಳೂರಿನ ಐವರು ರಿಯಲ್ ಎಸ್ಟೇಟ್ ಉದ್ಯಮಿಗಳ ಆಸ್ತಿಗಳಿವು
- ಮುಂದಿನ ದಿನಗಳಲ್ಲಿ ಮತ್ತಷ್ಟು ಮುಡಾ ಭ್ರಷ್ಟಾಚಾರ ಬಯಲು ಮಾಡುವ ಸಾಧ್ಯತೆ

ಬೆಂಗಳೂರು, ಜ. 18(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿಕೊಂಡಿರುವ 142 ಸ್ಥಿರಾಸ್ತಿಗಳು ಬಹುತೇಕ ಬೇನಾಮಿ 'ರಿಯಲ್ ಎಸ್ಟೇಟ್' ಉದ್ಯಮಿಗಳವು. ವಶಪಡಿಸಿಕೊಂಡಿರುವ ಸ್ಥಿರಾಸ್ತಿಗಳು ಮೈಸೂರು, ಮಂಡ್ಯ ಹಾಗೂ ಬೆಂಗಳೂರಿನಲ್ಲಿರುವ ಐವರು ರಿಯಲ್ ಎಸ್ಟೇಟ್ ವ್ಯಕ್ತಿಗಳಿಗೆ ಸೇರಿದ್ದಾಗಿದೆ. ಇಡಿ ತನ್ನ ಟ್ವೀಟ್ ಮೂಲಕ 300 ಕೋಟಿ ರೂ. ಮೌಲ್ಯದ 142 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ಮಾಹಿತಿಯನ್ನು ಬಹಿರಂಗಗೊಳಿಸಿತ್ತು. ಕಳೆದ ಕೆಲ ತಿಂಗಳ ಹಿಂದೆಯಷ್ಟೇ, ಮುಡಾದಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ ಎಂಬ ಮಾಹಿತಿಯನ್ನು ಲೋಕಾಯುಕ್ತ ಗಮನಕ್ಕೆ ಇಡಿ ತಂದಿತ್ತು. ಇದೀಗ ಮುಡಾದಲ್ಲಿ ಬೇನಾಮಿ ಹೆಸರಿನಲ್ಲಿ ■6ನೇ ಪುಟಕ್ಕೆ



ಮುಡಾದಿಂದ 50:50 ಅನುಪಾತದಡಿ ಮಂಜೂರಾದ ಬಹುತೇಕ ಎಲ್ಲಾ ನಿವೇಶನಗಳ ಸಂಬಂಧ ಇಡಿ ಅಧಿಕಾರಿಗಳು ಹಲವು ಬಾರಿ ಮಾಹಿತಿ ಕೇಳಿದ್ದರು. ಅವರು ಕೇಳಿದ ಎಲ್ಲಾ ಮಾಹಿತಿಯನ್ನು ನಾವು ನೀಡಿದ್ದೇವೆ.
–ಎ.ಎನ್.ರಘುನಂದನ್, ಮುಡಾ ಆಯುಕ್ತರು



## ವಿಜಯೇಂದ್ರ ನೀನು ಬಚ್ಚಾ, ಅಧ್ಯಕ್ಷ ಸ್ಥಾನಕ್ಕೆ ಯೋಗ್ಯನಲ್ಲ

- ಮಾಜಿ ಸಚಿವ ರಮೇಶ್ ಜಾರಕಿಹೊಳಿ ಕೆಂಡಾಮಂಡಲ
- ನಾನು ಬಿಜೆಪಿಗೆ ನಿಮ್ಮ ಅಪ್ಪನನ್ನು ಸಿಎಂ ಮಾಡಲು ಬಂದಿದ್ದೆ!


ರಮೇಶ್ ಜಾರಕಿಹೊಳಿ

ಬೆಳಗಾವಿ, ಜ.18– ವಿಜಯೇಂದ್ರ ನೀನು ಬಚ್ಚಾ, ನೀನು ಅಧ್ಯಕ್ಷ ಸ್ಥಾನಕ್ಕೆ ಯೋಗ್ಯನಲ್ಲ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಏಕವಚನದಲ್ಲೇ ವಿಜಯೇಂದ್ರ ವಿರುದ್ಧವೇ ಗುಡುಗಿದ್ದಾರೆ.

ಗೋಕಾಕ್‌ನ ಅಂಕಲಗಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಮ್ಮ ಪಕ್ಷದಲ್ಲಿ ಜಗಳ ಇದೆ. ಅದು ಕೇವಲ ಅಧ್ಯಕ್ಷ ಸ್ಥಾನ ಬದಲಾವಣೆಗಾಗಿ ಮಾತ್ರ. ಅಧ್ಯಕ್ಷ ಸ್ಥಾನ ಬದಲಾವಣೆ ಆಗದಿದ್ದರೂ ಪಕ್ಷ ಸಂಘಟನೆ ಮಾಡುತ್ತೇವೆ ಎಂದರು. ಯಡಿಯೂರಪ್ಪ ಅವರ ಬಗ್ಗೆ ಮಾತನಾಡುವಾಗ ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು ಎಂಬ ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಇಂದಿಗೂ ಯಡಿಯೂರಪ್ಪನವರು ನಮ್ಮ ನಾಯಕ. ನಾನು ಅವರ ಬಗ್ಗೆ ಅಗೌರವದಿಂದ ಮಾತನಾಡಿಲ್ಲ. ಆದರೆ ನೀನು ಸುಳ್ಳು ಹೇಳುವುದನ್ನು ಬಿಡು. ನಾನು ಶಿಕಾರಿಪುರಕ್ಕೆ ಬರುತ್ತೇನೆ. ನಿನ್ನ ಮನೆಯ ಮುಂದೆಯಿಂದಲೇ ಪ್ರವಾಸ ಶುರು ಮಾಡುತ್ತೇನೆ. ನೀನು ದಿನಾಂಕ ನಿಗದಿ ಮಾಡು. ಬೆಂಬಲಿಗರು ಬರಲ್ಲ ಗನ್ ಮ್ಯಾನ್ ಬರಲ್ಲ, ನಾನೊಬ್ಬನೇ ಬರುತ್ತೇನೆ. ಅಲ್ಲಿಂದಲೇ ಪ್ರವಾಸ ಶುರು ಮಾಡುತ್ತೇನೆ ತಡಿ ನೋಡೋಣ ಎಂದು ಸವಾಲೆಸೆದರು. ನಿನ್ನನ್ನು ರಾಜ್ಯದಲ್ಲಿ ಓಡಾಡದ ಹಾಗೆ ಮಾಡುವ ಶಕ್ತಿ ನನಗಿದೆ ಎಂದು ಗುಡುಗಿದ ಜಾರಕಿಹೊಳಿ, ನಿನ್ನಂತ ಕೀಳು ಮಟ್ಟದ ರಾಜಕೀಯ ಮಾಡಲು ನನಗೆ ಬರಲ್ಲ. ವಿಜಯೇಂದ್ರ ಬಗ್ಗೆ ಗೌರವ ಇಲ್ಲ. ಅಧ್ಯಕ್ಷ ಸ್ಥಾನದ ಮೇಲೆ ಮಾತ್ರ ಗೌರವ ಇದೆ. ಅವರನ್ನು ಬದಲಿಸಿ ಹೊಸಬರಿಗೆ ಅವಕಾಶ ನೀಡಲಿ. ಯಡಿಯೂರಪ್ಪನವರೇ ಇನ್ನು ನೀವು ಸಿಎಂ ಆಗಲ್ಲ. ಪದೇ ಪದೆ ಸೈಕಲ್ ಮೇಲೆ ■6ನೇ ಪುಟಕ್ಕೆ

### ಮುಡಾ ನಿವೇಶನ ಅಕ್ರಮ ಹಂಚಿಕೆ ಹಗರಣ

## ಭಂಡತನ ಬಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲಿ

- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹ
- ಬಡವರಿಗೆ ನೀಡಬೇಕಾದ ನಿವೇಶನಗಳು ರಿಯಲ್ ಎಸ್ಟೇಟ್ ಉದ್ಯಮಿಗಳು, ದಲ್ಲಾಳಿಗಳ ಪಾಲಾಗಿವೆ
- ರಾಜ್ಯಪಾಲರು ವಿಚಾರಣೆಗೆ ಅನುಮತಿ ನೀಡಿದ್ದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.


ವಿಜಯೇಂದ್ರ

ಬೆಂಗಳೂರು, ಜ. 18(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬಿಡಿ ನಿವೇಶನ ಹಂಚಿಕೆ ಹಗರಣ ಆರೋಪ ಎದುರಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಭಂಡತನ ಬಿಟ್ಟು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಮೊದಲು ಮುಡಾ ನಿವೇಶನ ಹಂಚಿಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು. ಮುಡಾದಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರ ಹಗರಣವನ್ನು ಸಾಮಾಜಿಕ ಕಾರ್ಯಕರ್ತೆ ಸ್ನೇಹಮಯಿ ಕೃಷ್ಣ ಬಯಲಿಗೆಳೆದಿದ್ದು, ಬಿಜೆಪಿ ಹಾಗೂ ಜೆಡಿಎಸ್ ಸದನದ ಒಳಗೆ ಹಾಗೂ ಹೊರಗೆ ಹೋರಾಟ ಮಾಡುತ್ತಿವೆ. ಮುಡಾ ಹಗರಣ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ 300 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದರಿಂದ ■6ನೇ ಪುಟಕ್ಕೆ

## ಕಾಂಗ್ರೆಸ್‌ನಲ್ಲಿ ಡಿನ್ನರ್ ಮುಗಿತು; ಈಗ ಟೂರ್ ಪಾಲಿಟಿಕ್ಸ್

### 15 ಶಾಸಕರಿಂದ ದುಬೈ ಪ್ರವಾಸ; ಹೊಸ ದಾಳ ಉರುಳಿಸಿದ ಸತೀಶ್ ಜಾರಕಿಹೊಳಿ

ಬೆಂಗಳೂರು, ಜ.18– ಕಾಂಗ್ರೆಸ್‌ನಲ್ಲಿ ಆಂತರಿಕ ಭಿನ್ನಮತ ಹೊತ್ತಿ ಉರಿಯುತ್ತಿದೆ. ಪಟ್ಟಕ್ಕಾಗಿ ಫೈಟ್ ಜೋರಾಗುತ್ತಿದೆ. ಸುರ್ಜೇವಾಲಾ ರಾಜ್ಯಕ್ಕೆ ಬಂದು ವಾರ್ನ್ ಕೊಟ್ಟರು ಕೂಡ ಭಿನ್ನಮತ ಶಮನವಾಗುವ ಯಾವುದೇ ಲಕ್ಷಣಗಳು ಕಾಣಿಸುತ್ತಿಲ್ಲ. ಸತೀಶ್ ಜಾರಕಿಹೊಳಿ ಹಾಗೂ ಡಿಕೆಶಿ ನಡುವಿನ ಗುದ್ದಾಟ ತಾರಕಕ್ಕೇರಿದೆ. ಡಿನ್ನರ್ ಪಾಲಿಟಿಕ್ಸ್ ಬಳಿಕ ಸಾಹುಕಾರ್ ಮತ್ತೊಂದು ದಾಳ ಉರುಳಿಸಿದ್ದಾರೆಂಬ ಚರ್ಚೆ ಶುರುವಾಗಿದೆ. ಡಿನ್ನರ್ ಪಾಲಿಟಿಕ್ಸ್ ಬಳಿಕ ಈಗ ಟೂರ್ ಪಾಲಿಟಿಕ್ಸ್ ಆರಂಭಗೊಂಡಿದ್ದು, ಶೀಘ್ರದಲ್ಲೇ 15 ಶಾಸಕರು ದುಬೈ ಪ್ರವಾಸ ನಡೆಸಲಿದ್ದಾರೆ ■6ನೇ ಪುಟಕ್ಕೆ

# ಭಾರತ ಜಾಗತಿಕ ಕಂಪನಿಗಳಿಗೆ ಸಿಇಓ ತಯಾರು ಮಾಡುವ ಕಾರ್ಖಾನೆ ಇದ್ದಂತೆ...

### ಮೈಸೂರು ವಿವಿ ಘಟಿಕೋತ್ಸವ ಭಾಷಣದಲ್ಲಿ ಪ್ರಾಧ್ಯಾಪಕ ಪ್ರೊ.ಟಿ.ಪಿ.ಸಿಂಗ್ ಅಭಿಪ್ರಾಯ

- ಸುಧಾಮೂರ್ತಿ ಸೇರಿದಂತೆ ಮೂವರಿಗೆ ಗೌರವ ಡಾಕ್ಟರೇಟ್
- ಭಾರತದ ತರಬೇತುದಾರರಿಂದ 130 ಬಿಲಿಯನ್ ಡಾಲರ್ ಗಳಿಕೆ
- ವಿಶ್ವವಿದ್ಯಾನಿಲಯಗಳಿಗೆ ಅನುದಾನ ಹೆಚ್ಚಿಸಬೇಕು
- ಸಾಫ್ಟ್‌ವೇರ್, ಔಷಧ ರಫ್ತಿನಲ್ಲಿ ಮೊದಲ ಸ್ಥಾನಕ್ಕೆ ಬರಬೇಕು


**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಶನಿವಾರ ನಡೆದ ಮೈಸೂರು ವಿಶ್ವವಿದ್ಯಾನಿಲಯದ 105 ನೇ ಘಟಿಕೋತ್ಸವ ಸಮಾರಂಭದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಸುಧಾಮೂರ್ತಿ, ಸಂಶೋಧನಾ ಕ್ಷೇತ್ರದ ಗಣನೀಯ ಸೇವೆಗೆ ಷಹೀನ್ ಮಜ್ಜೀದ್, ಶಿಕ್ಷಣ ಹಾಗೂ ಸಾಮಾಜಿಕ ಸೇವಾ ಕ್ಷೇತ್ರದ ಸೇವೆಗೆ ಡಾ.ಎ.ಸಿ.ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು.**

ಮೈಸೂರು, ಜ.18(ಬಿಎಲ್‌ಯು)– ಭಾರತ, ಜಾಗತಿಕ ಕಂಪನಿಗಳಿಗೆ ಸಿಇಓಗಳನ್ನು ತಯಾರು ಮಾಡುವ ಕಾರ್ಖಾನೆಯಾಗಿದೆ ಎಂದು ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಂಶೋಧನಾ ಪ್ರಾಧ್ಯಾಪಕ ಪ್ರೊ.ಟಿ.ಪಿ.ಸಿಂಗ್ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಇಂದು ಮೈಸೂರು ವಿಶ್ವವಿದ್ಯಾನಿಲಯದ 105ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಘಟಿಕೋತ್ಸವ ಭಾಷಣ ಮಾಡಿದ ಪ್ರೊ.ಟಿ.ಪಿ.ಸಿಂಗ್, ವೃತ್ತಿಪರವಾಗಿ ಭಾರತೀಯರು ಸಾಧನೆ ಮಾಡುತ್ತಿರುವುದು ಒಂದು ವಿಧವಾದರೆ, ಅದೇ ಪ್ರಕಾರವಾಗಿ ವಿದೇಶಿ ವಿನಿಮಯದಿಂದ ಗಳಿಸುತ್ತಿರುವ ದ್ರವ್ಯವು ಗಣನೀಯವಾಗಿ ಹೆಚ್ಚಳವಾಗಿದೆ ಎಂದರು.

ಉತ್ತಮ ಅವಕಾಶಕ್ಕಾಗಿ ತರಬೇತಿ ಹೊಂದಿದ ಭಾರತೀಯ ವಿದ್ಯಾರ್ಥಿಗಳು ವಿದೇಶಕ್ಕೆ ಹೋಗಲು ಹಾತೊರೆಯುತ್ತಿದ್ದ ಕಾಲವೊಂದಿತ್ತು. ಇದನ್ನು ಪ್ರತಿಭಾ ಪಲಾಯನ ಎಂದು ಬಣ್ಣಿಸಲಾಗಿತ್ತು. ಜಗತ್ತಿನ ಬೇರೆ ರಾಷ್ಟ್ರಗಳಲ್ಲಿ ಕೂಡ ಇದೇ ಪರಿಸ್ಥಿತಿ ಇದ್ದ ಕಾರಣ ತಡೆಯಲು ಸಾಧ್ಯವಾಗಲಿಲ್ಲ. ಆದರೆ ಈಗ ಇದನ್ನು ತಿರುವು–ಮುರುವು ಆಗಿದ್ದು, ಭಾರತೀಯರ ಪ್ರತಿಭೆ ವಿದೇಶಗಳಲ್ಲಿ ಬೆಳಗಿ, ಜಾಗತಿಕ ಮಟ್ಟದಲ್ಲಿ ಬೌದ್ಧಿಕತೆ ಹೆಚ್ಚಾಗುತ್ತಿದೆ. ಇದನ್ನು ಈಗ ನಾವು ಪ್ರತಿಭಾ ಲಾಭ ಎಂದು ಕರೆಯುತ್ತಿದ್ದೇವೆ ಎಂದರು.

ತರಬೇತಿ ಹೊಂದಿದ ಹಾಗೂ ಕೌಶಲ್ಯ ಹೊಂದಿದ ನಮ್ಮ ತರುಣ ಹುಡುಗ–ಹುಡುಗಿಯರ ಬಗ್ಗೆ ನಾವು ಹೆಮ್ಮೆ ಪಡುತ್ತಿದ್ದೇವೆ. ವಿಶ್ವದ ಪ್ರಮುಖ ಕಂಪನಿಗಳಲ್ಲಿ ಬಹಳಷ್ಟು ಭಾರತೀಯರು ಸಿಇಓಗಳಾಗಿ ಚುಕ್ಕಾಣಿ ಹಿಡಿದಿದ್ದಾರೆ. ಇದರಿಂದ ಭಾರತ ವಿಶ್ವದ ಕಂಪನಿಗಳಿಗೆ ಸಿಇಓಗಳನ್ನು ತಯಾರಿಸುವ ಕಾರ್ಖಾನೆಯಾಗಿದೆ ಎಂದು ಹೇಳಿದರು. ಒಂದು ಅಂದಾಜಿನಂತೆ ಈ ಗಳಿಕೆ 130 ಬಿಲಿಯನ್ ಅಮೇರಿಕನ್ ಡಾಲರ್ ಗಳಾಗಿದೆ. ಬೇರೆ ಯಾವ ದೇಶವು ಈ ಪ್ರಮಾಣದ ಹಣ ಗಳಿಸುತ್ತಿಲ್ಲ. ಇದು ಸಾಧ್ಯವಾಗಿರುವುದು ಪ್ರತಿಭಾವಂತ ಭಾರತೀಯರಿಂದ ಎಂದು ಪ್ರೊ.ಟಿ.ಪಿ.ಸಿಂಗ್ ಮೆಚ್ಚುಗೆ ವ್ಯಕ್ತಪಡಿಸಿದರು. ನೀವು ನಾಳಿನ ನಾಯಕರು, ಚಿಂತಕರು ಹಾಗೂ ಸಮಸ್ಯೆ ಬಗೆಹರಿಸುವವರಾಗಿದ್ದು, ಭವಿಷ್ಯ ನಿಮ್ಮ ಕೈಯ್ಯಲ್ಲಿದೆ ■6ನೇ ಪುಟಕ್ಕೆ

### ಕಣ್ಣು ಕತ್ತಲಾದರೂ ಕೈ ಹಿಡಿದ ಅಕ್ಷರ, ಕುಗ್ರಾಮದ ಸವಾಲು, ಚಿನ್ನದ ಪದಕದಲ್ಲಿ ಮಹಿಳೆಯರಿಗೆ ಸಿಂಹಪಾಲು

## ಮೈಸೂರು ವಿವಿ ಘಟಿಕೋತ್ಸವದಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟ ವನಿತೆಯರ ಯಶೋಗಾಥೆ


**ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು:** ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ಪಡೆದ (ಎಡದಿಂದ) ಭೂಮಿಕ, ಕಾವ್ಯಶ್ರೀ, ಸೀಮಾ ಹೆಗಡೆ, ಕಾವ್ಯ, ವಿವಿನಾ ಅವರನ್ನು ಕಾಣಬಹುದು.

ಮೈಸೂರು, ಜ.18(ಬಿಎಲ್‌ಯು)–ಕಣ್ಣು ಕತ್ತಲಾದರೂ ಕೈ ಹಿಡಿದ ಅಕ್ಷರ, ಬಡತನದ ಸವಾಲು ಮೆಟ್ಟಿ ನಿಂತು ಸಾಧನೆ, ಶಿಕ್ಷಣಕ್ಕಾಗಿ ಬದುಕು ಮುಡುಪಾಗಿಡುವ ಶಪಥ, ಸಂಸ್ಕೃತದ ಸಂಸ್ಕೃತಿ ಸಾಧನೆಗೆ ಮೆಟ್ಟಿಲು, ಚಿನ್ನದ ಪದಕದಲ್ಲಿ ಮಹಿಳೆಯರಿಗೆ ಸಿಂಹಪಾಲು.ಮೈಸೂರು ವಿಶ್ವವಿದ್ಯಾನಿಲಯದ 105 ನೇ ಘಟಿಕೋತ್ಸವ ಸಮಾರಂಭದಲ್ಲಿ ಇಂದು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳ ಸಾಧನೆಯ ಹೆಗ್ಗುರುತು ಇದು.

**ವಿಶೇಷ ಸಾಧನೆ:** ಹುಟ್ಟಿನಿಂದ ಅಂಧ ಳಾಗಿರುವ ವಿಶೇಷ ಚೇತನ ಬಸಮ್ಮ ಗುರಯ್ಯ ಮಠದ್ ಅವರು ಮೂಲತಃ ಬೆಳಗಾವಿಯವರು. ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಲು ಮೈಸೂರಿಗೆ ಬಂದ ಬಸಮ್ಮ ಮಾನಸ ಗಂಗೋತ್ರಿಯ ಹಾಸ್ಟೆಲ್‌ನಲ್ಲಿ ದಾಖಲಾಗಿದ್ದರು. ಅತೀ ಹೆಚ್ಚು ಅಂಕ ಗಳಿಸುವ ಮೂಲಕ ಬಸಮ್ಮ ಇಂದು ಒಂದು ಚಿನ್ನದ ಪದಕ ಗಳಿಸಿದ್ದಾರೆ. ಅಂಧತ್ವಕ್ಕೆ ಸವಾಲು ಹಾಕಿರುವ ಬಸಮ್ಮ ಈಗ ಪಿಹೆಚ್‌ಡಿ ಪಡೆಯುವ ತಯಾರಿಯಲ್ಲಿದ್ದಾರೆ. ತರುವಾಯ ಉನ್ನತ ಶಿಕ್ಷಣಕ್ಕಾಗಿ ಅಮೇರಿಕಾಗೆ ಹೋಗುತ್ತೇನೆ ಎಂದು ತಿಳಿಸಿದರು. ■6ನೇ ಪುಟಕ್ಕೆ

# ಸಹಿ ನಕಲು ಮಾಡಿ ಪುತ್ರನ ಆಸ್ತಿ ಕಬಳಿಕೆ ಆರೋಪ; ಬೆಳವಾಡಿ ಗ್ರಾಪಂ ಮಾಜಿ ಅಧ್ಯಕ್ಷನ ವಿರುದ್ಧ ಕೇಸ್

ಮೈಸೂರು, ಜ.18– ತಮ್ಮ ದಿವಂಗತ ಪುತ್ರನ ಸಹಿ ನಕಲು ಮಾಡಿ ಮರಣ ಶಾಸನ ಪತ್ರ (ವಿಲ್) ಸೃಷ್ಟಿ ಮಾಡುವ ಮೂಲಕ ಕೋಟ್ಯಾಂತರ ರೂ. ಮೌಲ್ಯದ 39 ಆಸ್ತಿಗಳನ್ನು ಕಬಳಿಸಿದ್ದಾರೆ ಎಂದು ಗ್ರಾಪಂ ಮಾಜಿ ಅಧ್ಯಕ್ಷ ಬೆಳವಾಡಿ ಶಿವಮೂರ್ತಿ ವಿರುದ್ಧ ಅವರ ಸೊಸೆ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಶಿವಮೂರ್ತಿಯವರ ದಿವಂಗತ ಪುತ್ರ ಬಿ.ಎಸ್.ಪ್ರತೀಪ್ ಅವರ ಪತ್ನಿ (ಶಿವಮೂರ್ತಿ ಸೊಸೆ) ಕೆ.ಎಸ್.ಸ್ನೇಹ ನೀಡಿದ ದೂರಿನ ಮೇರೆಗೆ ವಿಜಯನಗರ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 120ಬಿ, 420, 465, 468, 471, 34ರಡಿ ಬೆಳವಾಡಿ ಶಿವಮೂರ್ತಿ, ಅವರ ಪುತ್ರಿಯರಾದ ಪದ್ಮಿನಿ, ಕವಿತಾ, ಸಂಬಂಧಿಕ ರವಿಕಿರಣ್ (ಈಗ ಇವರು ಜೀವಂತ ವಿಲ್ಲ) ಮತ್ತು ವಕೀಲ ಹೆಚ್.ಎಸ್. ಕುಮಾರ್ ಸೇರಿದಂತೆ ಐವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

**ವಿವರ:** ಬೆಳವಾಡಿ ಶಿವಮೂರ್ತಿ ಅವರ ಪುತ್ರ ಬಿ.ಎಸ್.ಪ್ರತೀಪ್, 2021ರ ಡಿಸೆಂಬರ್ 24ರಂದು ಆತ್ಮಹತ್ಯೆಗೆ ಶರಣಾಗಿದ್ದರು. ಅವರು ಜೀವಿತ ಕಾಲದಲ್ಲಿ ತಂದೆ ಶಿವಮೂರ್ತಿಯವರಿಂದ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಪತ್ರದ ಮೂಲಕ ಪಡೆದಿದ್ದಲ್ಲದೇ, 2019ರ ಅ.30ರಂದು ನೋಂದಾಯಿತ ದಾನಪತ್ರದ ಮೂಲಕ ಅವರಿಗೆ ಕೆಲ ಆಸ್ತಿಗಳು ಬಂದಿದ್ದವು. ಪೆಟ್ರೋಲ್ ಬಂಕ್ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದ ಅವರು, ಈ ಎಲ್ಲಾ ಆಸ್ತಿಗಳ ಸ್ವಾಧೀನಾನುಭವ ದಲ್ಲಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಹೊರಗಿನ ಒತ್ತಡಕ್ಕೆ ಒಳಗಾಗಿ ತನ್ನ ಪತಿ 2021ರ ಡಿ.24ರಂದು ಆತ್ಮಹತ್ಯೆ ಮಾಡಿಕೊಂಡ ನಂತರ ಅವರ ಪತ್ನಿಯಾದ ತನಗೆ ಹಾಗೂ ನಮ್ಮ ಇಬ್ಬರು ಪುತ್ರಿಯರಿಗೆ ಮೋಸ ಮಾಡುವ ಉದ್ದೇಶದಿಂದ ಪತಿಗೆ ಸೇರಿದ ಚಿತ್ರದುರ್ಗದಲ್ಲಿರುವ 5 ಆಸ್ತಿಗಳು ಸೇರಿದಂತೆ ಒಟ್ಟು 39 ಆಸ್ತಿಗಳನ್ನು 2021ರ ಡಿ.20ರಂದು ಅಂದರೆ ಪತಿ ಆತ್ಮಹತ್ಯೆ ಮಾಡಿಕೊಳ್ಳುವ 4 ದಿನದ ಮುನ್ನ ಶಿವಮೂರ್ತಿ ಅವರ ಹೆಸರಿಗೆ ಮರಣ ಶಾಸನ ಪತ್ರ (ವಿಲ್) ಬರೆದು ಕೊಟ್ಟಂತೆ ದಾಖಲೆ ಸೃಷ್ಟಿಸಿ ಅದಕ್ಕೆ ನನ್ನ ಪತಿಯ ನಕಲಿ ಸಹಿ ಮಾಡಿದ್ದಾರೆ. ಈ ಪತ್ರಕ್ಕೆ ಶಿವಮೂರ್ತಿ ಪುತ್ರಿಯರಾದ ಕವಿತಾ, ಪದ್ಮಿನಿ ಮತ್ತು ರವಿಕಿರಣ್ ಸಾಕ್ಷಿದಾರರಾಗಿ ಸಹಿ ಮಾಡಿದ್ದು, ಈ ಪತ್ರವನ್ನು ತಯಾರಿಸಿದ ವಕೀಲ ಹೆಚ್.ಎಸ್.ಕುಮಾರ್ ಎಂಬುವರು ಕಾರ್ಯನಿರ್ವಾಹಕರೆಂದು ಸ್ವತಃ ತಾವೇ ನಮೂದಿಸಿಕೊಂಡಿದ್ದಾರೆ.

ಈ ಸೃಷ್ಟಿತ ಮರಣ ಶಾಸನ ಪತ್ರವನ್ನು ಬಳಸಿಕೊಂಡು 2022ರ ಏ.7ರಂದು ಮೈಸೂರು ಉತ್ತರ ಹಿರಿಯ ಉಪನೋಂದಣಾಧಿಕಾರಿಯವರ ಕಚೇರಿಯಲ್ಲಿ ತಮ್ಮ ಪತಿಯ ಹೆಸರಿನಲ್ಲಿ ಎಲ್ಲಾ ಆಸ್ತಿಗಳನ್ನೂ ಅವರ ತಂದೆ ಶಿವಮೂರ್ತಿ ತಮ್ಮ ಹೆಸರಿಗೆ ನೋಂದಾಯಿಸಿಕೊಂಡಿದ್ದಲ್ಲದೇ, ಅದೇ ಸೃಷ್ಟಿತ ಮರಣ ಶಾಸನ ಪತ್ರವನ್ನು ಮೈಸೂರು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಹಾಜರುಪಡಿಸಿ, ಅದರಲ್ಲಿ ದಿವಂಗತ ಪ್ರತೀಪ್ ಅವರ ಕಾನೂನುಬದ್ಧ ವಾರಸುದಾರರಾದ ನನ್ನ ಹಾಗೂ ಮಕ್ಕಳನ್ನು ಎದುರುದಾರರಾಗಿ ಕೂಡ ನಮೂದಿಸದೇ ಪ್ರೊಬೇಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಎದುರುದಾರರು ಇಲ್ಲದ ಕಾರಣ ನ್ಯಾಯಾಲಯದಿಂದ ಶಿವಮೂರ್ತಿ ಹೆಸರಿಗೆ 2023ರ ಮಾ.9ರಂದು ಪ್ರೊಬೇಟ್ ದೊರೆತಿದ್ದು, ನಂತರ ಶಿವಮೂರ್ತಿಯವರು ನನ್ನ ಪತಿಯ ಆಸ್ತಿಗಳನ್ನು ಬೇರೆ ಬೇರೆಯವರಿಗೆ ವಿಲೇ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿದ್ದ ವಿಚಾರ 2024ರ ಜೂನ್‌ನಲ್ಲಿ ನನಗೆ ತಿಳಿಯಿತು ಎಂದು ದೂರಿನಲ್ಲಿ ಹೇಳಿರುವ ಸ್ನೇಹ, ಇದಕ್ಕೆ ಸಂಬಂಧಿಸಿದ ದಾಖಲೆಗಳ ದೃಢೀಕೃತ ನಕಲುಗಳನ್ನು ಪಡೆದ ನಂತರ ದೂರು ನೀಡುತ್ತಿದ್ದು, ನನ್ನ ಪತಿಯ ಸಹಿ ನಕಲು ಮಾಡಿ ಮರಣ ಶಾಸನ ಪತ್ರ ಸೃಷ್ಟಿಸಿ ನನಗೆ ಹಾಗೂ ಮಕ್ಕಳಿಗೆ ಮೋಸ ಮಾಡಿರುವ ಮಾವ ಶಿವಮೂರ್ತಿ ಸೇರಿದಂತೆ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**19.01.2025 ಭಾನುವಾರ, ಮಳೆ ನಕ್ಷತ್ರ: ಉತ್ತರಾಷಾಢ 11.01.2025ರಿಂದ 23.01.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ**

■ **ಸಂಡೇ ಸ್ಪೋರ್ಟ್ಸ್ ಕ್ಲಬ್:** ವಿದ್ಯುತ್ ಸುರಕ್ಷತಾ ಓಟ, ಚಾಲನೆ: ಮಾಜಿ ಭಾರತೀಯ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್, ಮುಖ್ಯ ಅತಿಥಿಗಳು: ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ತಾಂತ್ರಿಕ ನಿರ್ದೇಶಕ ಕೆ.ಎಂ. ಮುನಿಗೋಪಾಲರಾಜು, ಜಿ.ರೇಣುಕಾ, ಲಿಂಗರಾಜಮ್ಮ, ಸ್ಥಳ: ಓವಲ್ ಮೈದಾನ, ಬೆಳಗ್ಗೆ 6ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿನೋವು, ಕೀಲುನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ಮೈಸೂರು ವಿವಿ ಎನ್‌ಎಸ್‌ಎಸ್ ಯೋಜನೆ :** ನ್ಯಾಷನಲ್ ಎನ್‌ಎಸ್‌ಎಸ್ ಶಿಬಿರ, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಬ್ರೈಡಲ್ ಜ್ಯೂವೆಲ್ಲರಿ ಶೋ, ಸ್ಥಳ: ಮೈಸೂರು ಶೋರೂಮ್, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ಲಿಟರರಿ ಅಸೋಸಿಯೇಷನ್ :** ಮೈಸೂರು ಲಿಟರರಿ ಫೆಸ್ಟ್, ಉದ್ಘಾಟನೆ: ಅಂಕಣಕಾರ ಡಾ.ಪಿ. ಸಾಯಿನಾಥ್, ಮುಖ್ಯ ಅತಿಥಿ: ರಾಜೀವ್ ಗಾಂಧಿ ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ, ಆಂಕಾಲಜಿಸ್ಟ್ ಡಾ.ಬಿ.ಎಸ್.ಅಜಯ್‌ಕುಮಾರ್ ಅವರಿಂದ 'ಡಾಕ್ಟರ್ ಪ್ರಿನರ್ಸ್ ಜರ್ನಿ: ಡಿಕೇಡ್ಸ್ ಅಕ್ರಾಸ್ ಕಂಟ್ರೀಸ್ ಅಂಡ್ ಕಲ್ಚರ್ಸ್'; ಹಿರಿಯ ವಿಜ್ಞಾನಿ ಪ್ರೊಎಸ್.ಎಂ.ಶಿವಪ್ರಸಾದ್ ಅವರಿಂದ 'ರೀಇಮ್ಯಾಜಿನಿಂಗ್ ಇಂಡಿಯನ್ ಎಜುಕೇಷನ್ ಫಾರ್ ಎ ಟೆಕ್ನಾಲಜಿಕಲಿ ಚೇಂಜಿಂಗ್ ವರ್ಲ್ಡ್'; ವೃತ್ತಿಪರ ಕಥೆಗಾರ ಪ್ರೊರಾಜೇಂದ್ರ ಚೆನ್ನಿ ಅವರಿಂದ ವಾಟ್ಸ್ ಯುವರ್ ಸ್ಟೋರಿ? ಕುರಿತು ವಿಚಾರ ಮಂಡನೆ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10ರಿಂದ.

■ **ಸಪ್ತಗಿರಿ ಕ್ಷೇಮಾಭಿವೃದ್ಧಿ ಸಂಘ :** ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತರಿಗೆ ಸನ್ಮಾನ ಸಮಾರಂಭ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಸೇವಾಯಾನ ಟ್ರಸ್ಟ್:** ಸಂಸ್ಥಾಪನಾ ದಿನಾಚರಣೆ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಶಂಕರಗೌಡ ಪಾಟೀಲ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ್, ಲಯನ್ ಎಂ.ಎನ್.ಜೈಪ್ರಕಾಶ್, ಜ್ಯೋತಿಲಕ್ಷ್ಮಿ ಭಟ್, ಪತ್ರಕರ್ತ ರಾಜಕುಮಾರ್ ಭಾವಸಾರ್ ಅವರಿಗೆ ಸೇವಾ ವಿಭೂಷಣ ಪ್ರಶಸ್ತಿ ಪ್ರದಾನ, ಸ್ಥಳ: ಟ್ರಸ್ಟ್ ಆವರಣ, ವಿಜಯನಗರ 4ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಆದಿತ್ಯ ಲೋಕೇಶ್ ಕ್ರಿಯೇಷನ್ಸ್, ಸಮಾನ ಮನಸ್ಕರ ಬಳಗ:** ದಿನ ಭವಿಷ್ಯ ತಂದ ಆಪತ್ತು, ಕಾಲ್ಪನಿಕ ಮನರಂಜನ ಕಿರುಚಿತ್ರ, ಹಿನ್ನೆಲೆ ಸಂಗೀತ: ಗಣೇಶ್ ಭಟ್, ಸ್ಥಳ: ಬಳಗದ ಆವರಣ, ಬೆಳಗ್ಗೆ 10.30ಕ್ಕೆ.

■ **ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್:** ಬೆಳಗ್ಗೆ 10.30ಕ್ಕೆ ಯೋಗ ಕೇಂದ್ರದ 25ನೇ ವಾರ್ಷಿಕೋತ್ಸವ ಅಂಗವಾಗಿ ರಾಷ್ಟ್ರಮಟ್ಟದ ಮುಕ್ತಯೋಗಾಸನ ಛಾಂಪಿಯನ್‌ಶಿಪ್–2025, ಸಾನ್ನಿಧ್ಯ: ರಾಮಕೃಷ್ಣ ಆಶ್ರಮದ ಶ್ರೀ ಮಹಾಮೇಧಾನಂದಜಿ ಮಹಾರಾಜ್, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್, ಚೈತನ್ಯ ಸಂಪದ ಸವಿ ಸಂಚಿಕೆ ಬಿಡುಗಡೆ: ಜೆಎಸ್‌ಎಸ್ ಯೋಗಿಕ್ ರಿಸರ್ಚ್ ಫೌಂಡೇಷನ್ ಸಂಸ್ಥಾಪಕ ಶ್ರೀಹರಿ; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ: ಡಾ.ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಹೆಚ್.ಎಂ.ಮಂಜುನಾಥ್, ಜಲೇಂದ್ರ ಕುಮಾರ್, ಅಂಶಿಪ್ರಸನ್ನಕುಮಾರ್, ಡಾ.ಬಿ.ಲಕ್ಷ್ಮೀ ನಾರಾಯಣ್ ಶೆಣೈ, ಸ್ಥಳ: ಜಗನ್ಮೋಹನ ಅರಮನೆ.

■ **ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ, ನೃಪತುಂಗ ಕನ್ನಡ ಶಾಲೆ:** ಪ.ಮಲ್ಲೇಶ್ ಸ್ಮರಣಾರ್ಥ ಸ್ಥಾಪಕರ ದಿನಾಚರಣೆ, ಅಧ್ಯಕ್ಷತೆ: ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಮುಖ್ಯ ಅತಿಥಿಗಳು: ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ, ಸ್ಥಳ: ರಮಾಗೋವಿಂದ ರಂಗಮಂದಿರ, ನೃಪತುಂಗ ಕನ್ನಡ ಶಾಲೆ ಆವರಣ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಎಸ್.ವಿ.ಪಾಟೀಲ್ ಗುಂಡೂರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಮೃತಾ ನಿತಿನ್ ಶಾಸ್ತ್ರಿ, ಸಿ.ವಿಶ್ವನಾಥ್, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.35 ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.40 ನಮ್ಮ ಆರೋಗ್ಯ 'ಚಿಕ್ಕ ವಯಸ್ಸಿನವರಲ್ಲಿ ಹೃದಯಾಘಾತ–ಕಾರಣಗಳು ಮತ್ತು ಪರಿಹಾರ' ಕುರಿತು ಹಿರಿಯ ಹೃದ್ರೋಗ ತಜ್ಞರು ಹಾಗೂ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೃದ್ರೋಗ ವಿಜ್ಞಾನಗಳ ವಿಭಾಗದ ನಿರ್ದೇಶಕ ಡಾ.ಕೇಶವಮೂರ್ತಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸು ತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH- TRISH and Balty boy ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕು ಚೆಲ್ಲುವ ಬಾನುಲಿ ಸರಣಿ', 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮನದ ಮಾತು, 11.30 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ ಮಧ್ಯಾಹ್ನ; 12.05 ವನಿತಾ ವಿಹಾರ–ಮಹಿಳೆಯರ ಬಾಳಿಗೆ ಬಲ ತುಂಬುವ NRLM ಯೋಜನೆಯ ಫಲಾನುಭವಿ–ಪೂರ್ಣಿಮಾ ಅವರೊಂದಿಗೆ ಸಂದರ್ಶನ, 12.35 ದೇವರನಾಮ–ಡಿ.ಪುರುಷೋತ್ತಮ್, 12.45 ಜನಪದ ಸಂಗೀತ–ಚಾಮ ರಾಜನಗರ ಜಿಲ್ಲೆ ರಾಮಸಮುದ್ರದ ಚಿನ್ನಮ್ಮ ಮತ್ತು ಸಂಗಡಿಗರಿಂದ ಜೋಗುಳದ ಹಾಡು ಮತ್ತು ರಾಮ ಸಮುದ್ರದ ತಿಬ್ಬಳ್ಳಿ ಮಾರಮ್ಮನ ಹಾಡು, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಸಂಗೊಳ್ಳಿ ರಾಯಣ್ಣ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ದಾಶರಥಿ ದರ್ಶನ, ಪ್ರಸ್ತುತಿ–ಮಂಗಳೂರು ಕದ್ರಿಯ ಯಕ್ಷ ಮಂಜುಳಾ ಮಹಿಳಾ ತಾಳಮದ್ದಲೆ ಬಳಗದ ಕಲಾವಿದರು, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಶಬ್ದ ಮೀರಿದ ಆಲಿಸುವಿಕೆ? ಏಕೆ? ಹೇಗೆ?, ಮಾತನಾಡುತ್ತಾರೆ–ಹೆಚ್.ಎಸ್.ಮಧುರಾಣಿ, 8.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು–ಸಂಪೂರ್ಣ ರಾಮಾಯಣ ನಾಟಕ, 9.30 ರಾಷ್ಟ್ರೀಯ ನಾಟಕ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ ವಿದ್ವಾನ್ ಮಲ್ಲಾಡಿ ನಾರಾಯಣ್ ಶರ್ಮ–ಹಾಡುಗಾರಿಕೆ

■ **ಶ್ರೀ ಭಗೀರಥ ಉಪ್ಪಾರ ಸೇವಾ ಸಂಘ :** ಸಂಘದ ಉದ್ಘಾಟನೆ ಮತ್ತು 2025ನೇ ಇಸವಿ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಅಯ್ಯನ ಸರಗೂರು ಮಠದ ಶ್ರೀ ಮಹಾದೇವ ಸ್ವಾಮೀಜಿ, ಸ್ಥಳ: ಹೋಟೆಲ್ ಗೋವರ್ಧನ್ ಸಭಾಂಗಣ, ಬೆಳಗ್ಗೆ 11ರಿಂದ.

■ **ಸ್ವರಾಲಯ ಸಂಗೀತ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀ ತ್ಯಾಗರಾಜ ಹಾಗೂ ಶ್ರೀ ಪುರಂದರ ದಾಸರ ಆರಾಧನಾ ಮಹೋತ್ಸವ, ಉದ್ಘಾಟನೆ : ನಿವೃತ್ತ ಎಸ್‌ಬಿಎಂ ವ್ಯವಸ್ಥಾಪಕ ಹಾಗೂ ವಕೀಲ ಎಂ.ವೈ.ಕುಮಾರ್, ಅಧ್ಯಕ್ಷತೆ : ಸ್ವರಾಲಯ ಸಂಗೀತ ಸಂಸ್ಥೆ ಅಧ್ಯಕ್ಷೆ ಹಾಗೂ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ವಿದುಷಿ ಡಾ.ಸುಮ ಹರಿನಾಥ್, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಎಜುಕೇಷನ್ ಸೊಸೈಟಿ ಅಲ್ಯೂಮ್ನಿ ಅಸೋಸಿಯೇಷನ್ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ:** ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್ –2025, ಬೆಳಗ್ಗೆ 11ರಿಂದ ಪ್ಯಾನಲಿಸ್ಟ್‌ಗಳು: ದಾವಣಗೆರೆ ಜಿಪಂ ಗ್ರೂಪ್ ನಿರ್ದೇಶಕ ಅನಿತ್ ಸಿದ್ದೇಶ್ವ, ಮಲ್ಲಪ್ಪ ಹಿಟ್ಟಿನ ಅಂಗಡಿ ಸಂಸ್ಥಾಪಕ ಎಂ.ಎಸ್.ಮೋಹನ್, ವಿಜಯ್ ಕರದಂಟ್ ಮಾಲೀಕ ಸುನೀಲ್ ನಗಾತನ್, ಐಟಿಸಿ ಫುಡ್ಸ್ ಲಿ. ಉಪಾಧ್ಯಕ್ಷ ಕಲ್ಯಾಣ್ ಮುಖರ್ಜಿ, ಮಧ್ಯಾಹ್ನ 12ರಿಂದ ಮುರುಗೇಶ್ ಆರ್.ನಿರಾಣಿ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಎಂ.ನಿರಾಣಿ ಅವರಿಂದ ಕಬ್ಬು ಉದ್ಯಮದಲ್ಲಿ ವಿನೂತನ ಅವಕಾಶಗಳು, ಮಧ್ಯಾಹ್ನ 2.30ರಿಂದ ಭಾಮೀಸ್ ಗ್ರೂಪ್ ಆಫ್ ಕಂಪನೀಸ್ ಸಂಸ್ಥಾಪಕ ನಿರ್ದೇಶಕ ಡಿ.ಎಸ್.ಮಲ್ಲಿಕಾರ್ಜುನ, ಜೆಎಸ್‌ಎಸ್ ಸಿಇಒ ಬಿ.ಶಿವಶಂಕರ್, ಹಿರಿಯ ಲೀಗಲ್ ಅಡ್ವೈಸರ್ ಡಾ.ಎಂ.ಎನ್.ಭೀಮೇಶ್ ಅವರಿಂದ ಮುಂದಿನ ಪೀಳಿಗೆಯ ನಾಯಕರ ಸಬಲೀಕರಣ ಕುರಿತು ಭಾಷಣ; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ವಿಜಯಾನಂದ ಕಾಶಪ್ಪನವರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಶೋಕ್ ಐರನ್ ಗ್ರೂಪ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಜಯಂತ್ ಹುಂಬರವಾಡಿ, ಎಂಎಲ್‌ಸಿ ಕೆ.ಎಸ್.ನವೀನ್, ಸಂಜೆ 7ರಿಂದ ಹಿನ್ನೆಲೆ ಗಾಯಕಿ ಅನನ್ಯ ಭಟ್ ಅವರಿಂದ ಸಂಗೀತ ರಸಸಂಜೆ, ಸ್ಥಳ: ಮಹಾರಾಜ ಕಾಲೇಜು ಮೈದಾನ.

■ **ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಭಕ್ತಿಗಾನ ನಮನ, ಭಗವಾನ್ ಸದ್ಗುರು ಶ್ರೀಧರ ಸ್ವಾಮಿಗಳ ಭಕ್ತಿಗೀತೆಗಳ ಗಾಯನ ಹಾಗೂ ಗುರು ಚರಿತ್ರೆ ಸ್ಮರಣೆ, ಶ್ರೀಧರರ ಪೂಜೆ, 108 ನಮಃ ಶಾಂತಾಯ ಜಪ, ತೀರ್ಥ, ಮಂತ್ರಾಕ್ಷತೆ ವಿತರಣೆ, ಭಕ್ತಿಗಾನ ನಮನ, ಗುರುಚರಿತ್ರೆ ವ್ಯಾಖ್ಯಾನ, ಪ್ರಸಾದ ವಿತರಣೆ, ಸ್ಥಳ: ಯೋಗ ಸಂಸ್ಕೃತಿ ಕಲಾಭವನ, ಕುವೆಂಪುನಗರ, ಸಂಜೆ 4 ರಿಂದ.

■ **ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ, ನೃಪತುಂಗ ಕನ್ನಡ ಶಾಲೆ, ಸಪ್ತಸ್ವರ ಬಳಗ ಟ್ರಸ್ಟ್ :** ಭಾರತರತ್ನ ಪಂಡಿತ್ ಭೀಮಸೇನ್ ಜೋಷಿ ಅವರ ಶಿಷ್ಯ ಪಂಡಿತ್ ಹರೀಶ್ ತಿವಾರಿ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ವೀರಭದ್ರಯ್ಯ ಹಿರೇಮಠ್–ಹಾರ್ಮೋನಿಯಂ, ರಮೇಶ್ ಧನೂರ್–ತಬಲ, ಸ್ಥಳ: ರಮಾಗೋವಿಂದ ರಂಗಮಂದಿರ, ನೃಪತುಂಗ ಕನ್ನಡ ಶಾಲೆ ಆವರಣ, ರಾಮಕೃಷ್ಣನಗರ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ನಾದಬ್ರಹ್ಮ ಸಂಗೀತ ಸಭಾ :** ಸಂಗೀತ ಕಲಾನಿಧಿ, ಸಂಗೀತ ರತ್ನ ಮೈಸೂರು ಪಿಟೀಲು ಚೌಡಯ್ಯ ಸಂಸ್ಮರಣೆ ಅಂಗವಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ ಡಾ. ಎಲ್. ಸುಬ್ರಹ್ಮಣ್ಯಂ ಅವರಿಗೆ ಧನುರ್ ವೈಣಿಕಬ್ರಹ್ಮ ಪದವಿ ಪ್ರದಾನ, ಡಾ. ಎಲ್. ಸುಬ್ರಮಣ್ಯಂ ಅವರಿಂದ ಕರ್ನಾಟಕ ಶಾಸ್ತ್ರೀಯ ಪಿಟೀಲು ವಾದನ, ವಿದ್ವಾನ್ ಡಿ.ಎಸ್.ಆರ್. ಮೂರ್ತಿ–ಮೃದಂಗ, ವಿದ್ವಾನ್ ಸಾಯಿ ಚರಣ್–ಮೋರ್ಚಿಂಗ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

### ರಂಗಾಯಣ, ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

**ವನರಂಗ :** ಕೇರಿ ಹಾಡು (ಕನ್ನಡ), ತಂಡ : ಸಾವಿತ್ರಿ ಬಾಪುಲೆ ಸ್ತ್ರೀಶಕ್ತಿ ತಂಡ, ದಿಂಡಿಗನೂರು, ಹಾಸನ, ನಿರ್ದೇಶನ : ಕೆ. ಚಂದ್ರಶೇಖರ, ಸಂಜೆ 7ಕ್ಕೆ

**ಭೂಮಿಗೀತ :** ಊಂಚಾಯಿ (ಹಿಂದಿ), ತಂಡ : ಸೀಗಲ್ ಥಿಯೇಟರ್, ಅಸ್ಸಾಂ, ರಂಗರೂಪ, ನಿರ್ದೇಶನ : ಬಹರುಲ್ ಇಸ್ಲಾಂ, ಸಂಜೆ 6.30ಕ್ಕೆ.

**ಕಿರುರಂಗಮಂದಿರ:** ಸಂಜೆ 7ಕ್ಕೆ ಅಯಾನ್ ಶಾಂತಿ ಕುಟೀರ (ಕನ್ನಡ), ತಂಡ: ಸಮತೆಂತೋ, ಮೈಸೂರು, ರಚನೆ: ಡಾ.ನ.ರತ್ನ, ನಿರ್ದೇಶನ: ಹೆಚ್.ಎಸ್. ಉಮೇಶ್, ಸಂಜೆ 7ಕ್ಕೆ; ವರ್ಣ ಚಿತ್ರಕಲಾ ಪ್ರದರ್ಶನ, ಕುಮಾರಿ ಅಭಿರಾಮಿ ಕೊಟ್ಟಾಯಂ, ಕೇರಳ; ಶಿಲ್ಪಕಲಾ ಪ್ರದ ರ್ಶನ, ಸ್ಮೃದುಲ್ ಇ, ಕಣ್ಣೂರು ಕೇರಳ; ಛಾಯಾಚಿತ್ರ ಪ್ರದರ್ಶನ, ನವೀನ್‌ಕುಮಾರ್, ಪುತ್ತೂರು; ರಂಗಾಯಣ ನಾಟಕಗಳ ಭಿತ್ತಿಚಿತ್ರಗಳ ಪ್ರದರ್ಶನ.

**ರಂಗಾಯಣ ಆವರಣ:** ಮೈಸೂರು ಸ್ವರಪಾನ ತಂಡದಿಂದ ರಂಗಗೀತೆಗಳು, ಸಂಜೆ 5 ರಿಂದ.

**ಮಕ್ಕಳ ಚಲನಚಿತ್ರೋತ್ಸವ :** ಬೆಳಗ್ಗೆ 10.30 ರಿಂದ ದ ಸೈಲೆಂಟ್ ಚೈಲ್ಡ್, ನಿರ್ದೇಶನ : ಕ್ರಿಸ್ ಓವರ್ಟನ್; ಸಿಂಗ್–ಸಿನಿಮಾ; ಮಧ್ಯಾಹ್ನ 12 ರಿಂದ ಕ್ಲಾಸ್ ಡಿವೈಡ್, ನಿರ್ದೇಶನ : ಮಾರ್ಕ್ ಲೆವಿನ್; ಮಧ್ಯಾಹ್ನ 2 ರಿಂದ ಸೆವನ್ ಇಯರ್ಸ್ ಇನ್ ಟಿಬೆಟ್, ನಿರ್ದೇಶನ : ಜೀನ್–ಜಾಕ್ವೆಸ್ ಅನೌಡ್.

**ಕಿಂದರಿ ಜೋಗಿ ಆವರಣ :** ಉಡುಪಿ ನವೋದಯ ಸಾಂಸ್ಕೃತಿಕ ಕಲಾಮೇಳದಿಂದ ತುಳು ಸಾಂಸ್ಕೃತಿಕ ನೃತ್ಯ, ಶಿವಮೊಗ್ಗ ಶೋಭಾ ಮತ್ತು ತಂಡದಿಂದ ಲಂಬಾಣಿ ನೃತ್ಯ, ಸ್ಯಾಕ್ಸೋಫೋನ್ ವಾದನ, ಸಂಜೆ 5.30ಕ್ಕೆ

**ಕರ್ನಾಟಕ ಕಲಾ ಮಂದಿರ :** ಮಕ್ಕಳ ಬಹುರೂಪಿ ನಾಟಕೋತ್ಸವ, ಸಂಜೆ 7.30ಕ್ಕೆ ಮೈ ಫ್ಯಾಮಿಲಿ, ಕನ್ನಡ ನಾಟಕ, ಸಂಜೆ 7.30ಕ್ಕೆ.

**ಬಿ.ವಿ.ಕಾರಂತ ರಂಗಚಾವಡಿ :** ಸಾಮಾಜಿಕ ನ್ಯಾಯ–ಚಳವಳಿಗಳು ಮತ್ತು ರಂಗಭೂಮಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಬೆಳಗ್ಗೆ 10ರಿಂದ ವಿವಿಧ ಗೋಷ್ಠಿಗಳು.

ಐದನೇ ಪುಟದಿಂದ

## ಸಿಇಓ ತಯಾರು ಮಾಡುವ ಕಾರ್ಖಾನೆ ಇದ್ದಂತೆ...

ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ ಪ್ರೊ.ಸಿಂಗ್, ಇದನ್ನು ವಿವೇಕಪೂರ್ಣವಾಗಿ ಧೈರ್ಯದಿಂದ ರೂಪಿಸುತ್ತೀರೆಂಬ ಭರವಸೆ ನಮಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಂದು ರಾಷ್ಟ್ರದ ಆರ್ಥಿಕ ಬೆಳವಣಿಗೆಯಲ್ಲಿ ವಿಶ್ವವಿದ್ಯಾನಿಲಯದ ಪಾತ್ರ ಮಹತ್ವದ್ದಾಗಿದೆ. ಈ ಕಾರಣದಿಂದ ವಿಶ್ವವಿದ್ಯಾನಿಲಯಗಳ ಮೇಲೆ ಬಂಡವಾಳ ಹೂಡಿದರೆ ಭವಿಷ್ಯದಲ್ಲಿ ಹೆಚ್ಚು ಲಾಭ ಗಳಿಸಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಭಾರತದ ಹಳೆಯ ಹಾಗೂ ಪ್ರಸಿದ್ಧ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಅನುದಾನ ನೀಡಬೇಕು. ಬೋಧಕರ ಸಂಖ್ಯೆ ಹೆಚ್ಚಿಸಬೇಕು. ಅದೃಷ್ಟವಶಾತ್ ಇತ್ತೀಚಿಗೆ ಸಾಕಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿದ್ದು, ಉತ್ತಮ ಫಲಿತಾಂಶ ದೊರೆಯುತ್ತಿದೆ. ಇದರಿಂದ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ನಮ್ಮ ಜಾಗತಿಕ ಸ್ಥಾನಮಾನ ಉತ್ತಮವಾಗಿದೆ ಎಂದು ಪ್ರೊ. ಟಿ.ಪಿ.ಸಿಂಗ್ ಪ್ರಶಂಸೆ ವ್ಯಕ್ತಪಡಿಸಿದರು.

ಭವಿಷ್ಯದಲ್ಲಿ ಆರ್ಥಿಕತೆಯು ಸುಶಿಕ್ಷಿತ ಹಾಗೂ ತರಬೇತಿ ಹೊಂದಿದ ಯುವ ಜನತೆ ಮೇಲೆ ಅವಲಂಬಿಸಲಿದೆ ಈ ಹಿನ್ನೆಲೆ ಸರ್ಕಾರ ಮಾನವ ಸಂಪನ್ಮೂಲ ಹಾಗೂ ವಿಶ್ವವಿದ್ಯಾನಿಲಯಗಳ ಮೇಲೆ ಹೆಚ್ಚು ಬಂಡವಾಳ ತೊಡಗಿಸಬೇಕಿದೆ ಎಂದು ಸಲಹೆ ನೀಡಿದರು.

ಸಾಫ್ಟ್‌ವೇರ್ ಸಂಬಂಧ ಸೇವೆಗಳ ವಿಷಯದಲ್ಲಿ ಮೊದಲ ಸ್ಥಾನದಲ್ಲಿರಬೇಕಾದ ಭಾರತ ನಾಲ್ಕನೆ ಸ್ಥಾನದಲ್ಲಿದೆ. ಹಾಗೆಂಯೇ ಔಷಧಗಳ ರಫ್ತಿನಲ್ಲಿ ಜಗತ್ತಿನಲ್ಲೇ 9ನೇ ಸ್ಥಾನದಲ್ಲಿದೆ. ಹಾಗಾಗಿ ಈ ವಲಯಗಳಿಗೆ ಸರ್ಕಾರ ಹೆಚ್ಚಿನ ಹೂಡಿಕೆಯ ಅಗತ್ಯವಿದೆ ಎಂದರು.

ಘಟಿಕೋತ್ಸವ ಸಮಾರಂಭದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಸುಧಾಮೂರ್ತಿ, ಸಂಶೋಧನಾ ಕ್ಷೇತ್ರದ ಗಣನೀಯ ಸೇವೆಗೆ ಷಹೀನ್ ಮಜ್ಜೀದ್, ಶಿಕ್ಷಣ ಹಾಗೂ ಸಾಮಾಜಿಕ ಸೇವಾ ಕ್ಷೇತ್ರದ ಸೇವೆಗೆ ಡಾ.ಎ.ಸಿ.ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು.

ಇದೇ ವೇಳೆ 31,689 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು. ವಿವಿಧ ವಿಷಯಗಳಲ್ಲಿ 304 ಪಿಹೆಚ್‌ಡಿ ಪದವಿ, 413 ಪದಕ ಹಾಗೂ 208 ನಗದು ಬಹುಮಾನ ನೀಡಲಾಯಿತು. 6,300 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ ಹಾಗೂ 25,085 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ರಿಜಿಸ್ಟ್ರಾರ್‌ಗಳಾದ ವಿ.ಆರ್.ಶೈಲಜಾ, ಪ್ರೊ. ಎನ್.ನಾಗರಾಜ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಪದಕಕ್ಕೆ ಮುತ್ತಿಟ್ಟ ವನಿತೆಯರ ಯಶೋಗಾಥೆ

**ತಂದೆ ಆಸೆ ಈಡೇರಿಸಿದೆ:** ಭೂಮಿಕಾಗೆ 18 ಚಿನ್ನದ ಪದಕ ಹಾಗೂ 5 ನಗದು ಬಹುಮಾನ ದೊರೆತಿದೆ. ಬಾಲ್ಯದಲ್ಲಿ ತನ್ನ ತಂದೆ ಜೊತೆ ಇದೇ ವಿಶ್ವವಿದ್ಯಾನಿಲಯದ ಮುಂದೆ ಹೋಗುವ ಸಂದರ್ಭದಲ್ಲಿ ಮಗಳೇ, ಮುಂದೊಂದು ದಿನ ಇಲ್ಲಿ ನೀನು ಅಭಿನಂದನೆಗೆ ಪಾತ್ರವಾಗು ತ್ತೀಯಾ ಎಂದು ಭವಿಷ್ಯ ನುಡಿದಿದ್ದ ರಂತೆ. ನನ್ನ ತಂದೆಯ ಆಸೆ ಇಂದು ಪೂರೈಸಿರುವೆ ಎಂದು ಹೆಮ್ಮೆಯಿಂದ ಹೇಳಿದ ಭೂಮಿಕಾ, ಪ್ರತಿದಿನ ರಾತ್ರಿ 7 ಗಂಟೆಗೆ ಮಲಗುತ್ತಿದ್ದೆ. ಮುಂಜಾನೆ 3 ಗಂಟೆಗೆ ಎದ್ದು ಓದುತ್ತಿದ್ದೆ. ಇದರಿಂದ ಹೆಚ್ಚು ಅಂಕ ಪಡೆಯಲು ಸಾಧ್ಯವಾಯಿತು ಎಂದರು.

**ಸಂಸ್ಕೃತದಲ್ಲಿ 13 ಚಿನ್ನ:** ಉತ್ತರ ಕನ್ನಡದ ಯಲ್ಲಾಪುರ ಬಳಿಯ ಕಳಜೆ ಎಂಬ ಕುಗ್ರಾಮದಿಂದ ಬಂದು 13 ಚಿನ್ನದ ಪದಕ ಹಾಗೂ ಒಂದು ನಗದು ಬಹುಮಾನ ಪಡೆದಿರುವ ಸೀಮಾ ಹೆಗಡೆ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕಾಗಿ ಪ್ರತಿದಿನ 5 ಕಿಲೋ ಮೀಟರ್ ನಡೆದು ಹೋಗುತ್ತಿದ್ದರಂತೆ. ಕಾಲೇಜು ಶಿಕ್ಷಣಕ್ಕಾಗಿ ಮೈಸೂರಿಗೆ ಬಂದಿರುವ ಸೀಮಾ ಹೆಗಡೆ ಈಗ 13 ಚಿನ್ನದ ಪದಕ ಗಳಿಸಿದ್ದು, ಪಿಹೆಚ್‌ಡಿ ಪದವಿ ಪಡೆಯುವುದಾಗಿ ತಿಳಿಸಿದರು. ನನ್ನ ಮನೆಯವರೆಲ್ಲಾ ಸಂಸ್ಕೃತದಲ್ಲಿ ಅಧ್ಯಯನ ಮಾಡಿ ದ್ದರಿಂದ ನಾನು ಕೂಡ ಸ್ನಾತಕೋತ್ತರದಲ್ಲಿ ಸಂಸ್ಕೃತ ಆಯ್ಕೆ ಮಾಡಿಕೊಂಡೆ ಎಂದರು.

**ಅಧ್ಯಾಪಕ ಆಸೆ:** ಮೈಸೂರಿನ ಹೆಚ್.ಡಿ. ಕೋಟೆ ತಾಲೂಕು ಕುಣಿಗಲ್ಲು ಗ್ರಾಮದ ಸಿ.ಕಾವ್ಯ 11 ಚಿನ್ನದ ಪದಕ ಗಳಿಸಿದ್ದು, ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಸರ್ಕಾರಿ ಶಾಲಾ ಕಾಲೇಜನಲ್ಲೇ ವಿದ್ಯಾಭ್ಯಾಸ ಮಾಡಿದ್ದು, ಅಧ್ಯಾಪಕ ವೃತ್ತಿ ಆಯ್ಕೆ ಮಾಡಿಕೊಳ್ಳುವುದಾಗಿ ತಿಳಿಸಿದರು.

**ಜನರಿಗಾಗಿ ಯೋಜನೆ:** ಯು.ಎ.ಕಾವ್ಯಶ್ರೀ ಅವರು ಮೂಲತಃ ಮಂಗಳೂರಿನವರಾಗಿದ್ದು, 16 ಚಿನ್ನದ ಪದಕ ಪಡೆದಿದ್ದಾರೆ. ಮಳೆಗಾಲದಲ್ಲಿ ಮಂಗಳೂರು ಸುತ್ತಮುತ್ತ ನೆರೆ ಎದುರಾಗುವ ಕಾರಣ ಇದನ್ನು ತಪ್ಪಿಸಲು ನಗರ ಯೋಜನೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವುದಾಗಿ ತಿಳಿಸಿದರು. ಉನ್ನತ ಶಿಕ್ಷಣದ ತರುವಾಯ ಮಂಗಳೂರು ಸುತ್ತಮುತ್ತಲಿನ ಗ್ರಾಮಗಳನ್ನು ನೆರೆ ಮುಕ್ತವಾಗಿ ಮಾಡುವ ಯೋಜನೆ ಹೊಂದಿರುವುದಾಗಿ ಕಾವ್ಯಶ್ರೀ ಹೇಳಿದರು.

**ಶಿಕ್ಷಣಕ್ಕೆ ಧಾರೆ:** ಕೊಡಗು ಜಿಲ್ಲೆ ಗೋಣಿಕೊಪ್ಪದ ವಿವಿನಾ ಅವರು ಸಸ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, 10 ಚಿನ್ನದ ಪದಕ ಹಾಗೂ 2 ನಗದು ಬಹುಮಾನ ಪಡೆದಿದ್ದಾರೆ. ಸದ್ಯ ಕೇರಳದ ಕಣ್ಣಾನೂರಿನಲ್ಲಿ ಕ್ರೈಸ್ತ ಸನ್ಯಾಸಿಯಾಗಿರುವ ವಿವಿನಾ, ತಾನು ಕಲಿತ ವಿದ್ಯೆಯನ್ನು ಶಿಕ್ಷಣ ಕ್ಷೇತ್ರಕ್ಕೆ ಧಾರೆ ಎರೆಯಬೇಕೆಂದು ನಿರ್ಧರಿಸಿದ್ದಾರೆ. ಈ ಹಿನ್ನೆಲೆ ಈಗ ಪಿಹೆಚ್ ಡಿ ಪದವಿ ಪಡೆಯಲು ಕಾರ್ಯಮಗ್ನನಾಗುತ್ತೇನೆ ಎಂದು ಹೇಳಿದರು.

### ಪಿ.ಹೆಚ್‌ಡಿ ಪ್ರದಾನ



ಪ್ರೊ.ವಿಶ್ವನಾಥ್ ಅವರ ಮಾರ್ಗದರ್ಶನದಲ್ಲಿ ಮೈಸೂರಿನ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಅವರು ಮಂಡಿಸಿದ 'ಮಳವಳ್ಳಿ ತಾಲೂಕಿನ ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಮೈಸೂರು ವಿವಿ ಘಟಕೋತ್ಸವ ಸಮಾರಂಭದಲ್ಲಿ ಪಿ.ಹೆಚ್‌ಡಿ ನೀಡಿ ಗೌರವಿಸಲಾಯಿತು.

## ವಿಶ್ವವಿದ್ಯಾನಿಲಯದ ಬೆಳವಣಿಗೆಯಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪ

### ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಆರೋಪ

ವಿಶ್ವವಿದ್ಯಾನಿಲಯಗಳ ಬೆಳವಣಿಗೆಯಲ್ಲಿ ರಾಜ್ಯ ಸರ್ಕಾರದ ಅಧಿಕಾರವನ್ನು ಕೇಂದ್ರ ಸರ್ಕಾರ ಮೊಟಕುಗೊಳಿಸಲು ಯತ್ನಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಆರೋಪಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಈ ಧೋರಣೆಯನ್ನು ರಾಜ್ಯ ಸರ್ಕಾರ ಜನರ ಮುಂದಿಡುತ್ತಿದೆ ಎಂದು ಹೇಳಿದರು.

ನಮ್ಮ ಸರ್ಕಾರದ ಉದ್ದೇಶ ಕೇವಲ ಶಿಕ್ಷಣ ಅಥವಾ ಪದವಿ ನೀಡುವುದಲ್ಲ. ವಿದ್ಯೆ ಕಲಿತವರ ಜ್ಞಾನದ ಆಧಾರದ ಮೇಲೆ ಪ್ರತಿಯೊಬ್ಬರಿಗೂ ಉದ್ಯೋಗ ನೀಡುವುದು ನಮ್ಮ ಧ್ಯೇಯ. ಈ ಹಿನ್ನೆಲೆ ನಾವು ಕೌಶಲ್ಯಕ್ಕೆ ಪ್ರಥಮ ಆದ್ಯತೆ ನೀಡಿದ್ದೇವೆ ಎಂದರು. ನಮ್ಮಲ್ಲಿ ಬೋಧಕ ಕೊರತೆ ಇದ್ದು, ಇದಕ್ಕೆ ಪರಿಹಾರ ಕಂಡು ಹಿಡಿಯಬೇಕಿದೆ ಎಂದರು.

## ಸಿದ್ದರಾಮಯ್ಯ ರಾಜೀನಾಮೆ ನೀಡಲಿ

ಪ್ರಕರಣವು ಮಹತ್ವದ ತಿರುವು ಪಡೆದುಕೊಂಡಿದೆ. ಮುಡಾದಿಂದ ಮುಖ್ಯಮಂತ್ರಿಗಳ ಕುಟುಂಬ ಅಕ್ರಮವಾಗಿ 14 ನಿವೇಶನಗಳನ್ನು ಪಡೆದುಕೊಂಡಿದೆ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದ್ದು, ಮುಡಾಕ್ಕೆ ಕೋಟಿಗಟ್ಟಲೆ ಆದಾಯ ನಷ್ಟವಾಗಿದೆ ಎಂದರು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಬಡವರಿಗೆ ಮಂಜೂರು ಮಾಡಬೇಕಿದ್ದ ನಿವೇಶನಗಳನ್ನು ರಿಯಲ್ ಎಸ್ಟೇಟ್ ಉದ್ಯಮಿಗಳು, ದಲ್ಲಾಳಿಗಳಿಗೆ ನೀಡಿದ್ದು ಬಹಿರಂಗವಾಗಿದೆ. ಇ.ಡಿ. ಕೈಗೊಂಡ ಕ್ರಮಗಳಿಂದ ಸಿದ್ದರಾಮಯ್ಯ ಮತ್ತೊಮ್ಮೆ ಅಪರಾಧಿ ಸ್ಥಾನದಲ್ಲಿ ನಿಲುವಂತಾಗಿದೆ, ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದನ್ನು ಕೆಲವು ಸಚಿವರು ಅಪರಾಧ ಎಂಬಂತೆ ಬಿಂಬಿಸಲು ಯತ್ನಿಸಿದ್ದರು.

ರಾಜ್ಯಪಾಲರು ಪ್ರಾಸಿಕ್ಯೂಶನ್‌ಗೆ ಅನುಮತಿ ಕೊಟ್ಟ ನಿರ್ಧಾರವನ್ನು ರಾಜ್ಯ ಹೈಕೋರ್ಟ್ ಸಹ ಎತ್ತಿಹಿಡಿಯಿತಲ್ಲದೆ, ಮುಖ್ಯಮಂತ್ರಿಗಳ ಕುಟುಂಬಕ್ಕೆ 14 ನಿವೇಶನ ನೀಡಿರುವುದರಲ್ಲಿ ಮೇಲ್ನೋಟಕ್ಕೆ ಅಕ್ರಮ ನಡೆದಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ ಎಂದರು. ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ನಮಗೆ ಸಿದ್ದರಾಮಯ್ಯ ಅವರ ಮೇಲೆ ದ್ವೇಷವಿಲ್ಲ, ಅಕ್ರಮ ಆಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ರಾಜೀನಾಮೆ ನೀಡಿ ಸ್ವಯಂಪ್ರೇರಿತರಾಗಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕಿತ್ತು ಎಂದಿದ್ದಾರೆ.

**ಕೇಂದ್ರಗಳ ಅಭಿವೃದ್ಧಿಗೆ ಹಣ ನೀಡಿ:** ಶಾಸಕರ ಕ್ಷೇತ್ರ ಅಭಿವೃದ್ಧಿಗೆ ತಲಾ 10 ಕೋಟಿ ರೂ. ನೀಡುವ ಮೂಲಕ ಸಿದ್ದರಾಮಯ್ಯ ಉಪಕಾರ ಮಾಡಿದಂತೆ ಆಗುವುದಿಲ್ಲ, ಕ್ಷೇತ್ರಗಳ ಅಭಿವೃದ್ಧಿಗೆ ಹಣ ಕೊಡುವುದು ಸರ್ಕಾರದ ಕರ್ತವ್ಯ.

ಅನೇಕ ಶಾಸಕರು ಅಭಿವೃದ್ಧಿ ಕಾರ್ಯಗಳಿಗೆ ಅನುದಾನವಿಲ್ಲದೆ ಹತಾಶರಾಗಿದ್ದಾರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದು 2 ವರ್ಷಗಳಾಗಿದೆ, ಕ್ಷೇತ್ರ ಅಭಿವೃದ್ಧಿಗೆ ಕನಿಷ್ಟ ಹತ್ತಿಪ್ಪತ್ತು ಕೋಟಿ ರೂ. ನೀಡುವ ಯೋಗ್ಯತೆ ಇಲ್ಲವೆಂದಾದರೆ ರಾಜ್ಯದಲ್ಲಿನ ಆಡಳಿತ ಹೇಗಿದೆ ಎಂಬುದನ್ನು ಊಹಿಸಬಹುದಾಗಿದೆ. ಈ ಕೂಡಲೇ ಹಣ ಬಿಡುಗಡೆ ಮಾಡಬೇಕು ಎಂದರು.

## ಬಹುತೇಕ ಬೇನಾಮಿ 'ರಿಯಲ್' ಉದ್ಯಮಿಗಳವು!

ನೂರಾರು ಕೋಟಿ ರೂ. ಕಪ್ಪು ಹಣ ಚಲಾವಣೆ ಆಗಿದೆ. ಇದರಲ್ಲಿ ರಾಜಕಾರಣಿಗಳು ಮತ್ತು ಅವರ ಕುಟುಂಬ ಹಾಗೂ ಅಧಿಕಾರಿಗಳೂ ಶಾಮೀಲಾಗಿದ್ದಾರೆ ಎಂಬುದನ್ನು ಬಹಿರಂಗಪಡಿಸಿದೆ.

ಮುಡಾದಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂಬುದಾಗಿ ಆಡಳಿತ ಪಕ್ಷದ ಪ್ರಮುಖ ರಾಜಕಾರಣಿಗಳು ತಿಪ್ಪೇ ಸಾರಿಸುವ ಪ್ರಯತ್ನದಲ್ಲಿದ್ದಾಗಲೇ ಇಡಿ ಈ ಮಾಹಿತಿಯನ್ನು ಬಿಡುಗಡೆ ಮಾಡುವ ಮೂಲಕ ಇದರ ಹಿಂದಿರುವವರನ್ನು ಬಯಲಿಗೆಳೆಯಲು ವೇದಿಕೆ ಸಿದ್ಧಪಡಿಸಿ ಕೊಟ್ಟಿದೆ. ಮುಡಾ ಹಿಂದಿನ ಆಯುಕ್ತರ ಸಂಬಂಧಿ ಮಂಡ್ಯದ ರಿಯಲ್ ಎಸ್ಟೇಟ್ ಉದ್ಯಮಿ, ಅಲ್ಲದೆ, ಇಬ್ಬರು ಸಚಿವರ ಆಪ್ತ ವಲಯದಲ್ಲಿ ಕಾಣಿಸಿಕೊಳ್ಳುವ ಬೆಂಗಳೂರು, ಮೈಸೂರಿನ ನಾಲ್ವರು ರಿಯಲ್ ಎಸ್ಟೇಟ್ ಉದ್ದಿಮೆದಾರರು ಬಿಡಿ ನಿವೇಶನಗಳನ್ನು ಬೇನಾಮಿ ಹೆಸರುಗಳಲ್ಲಿ ಪಡೆದು ವ್ಯಾಪಾರ ಮಾಡಿರುವುದನ್ನು ದಾಖಲೆ ಸಹಿತ ಪತ್ತೆ ಹಚ್ಚಲಾಗಿದೆ. ಈ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ಇಡಿ ಮುಂದಿನ ದಿನಗಳಲ್ಲಿ ಮತ್ತಷ್ಟು ಭ್ರಷ್ಟಾಚಾರ ಹಗರಣಗಳನ್ನು ಬಯಲಿಗೆಳೆಯುವ ಸಾಧ್ಯತೆ ಇದೆ. ಮುಖ್ಯಮಂತ್ರಿ ಕುಟುಂಬದವರು 14 ಬಿಡಿ ನಿವೇಶನಗಳನ್ನು ಮುಡಾದಿಂದ ಪಡೆದುಕೊಂಡಿರುವ ಅಂಶ ಬೆಳಕಿಗೆ ಬರುತ್ತಿದ್ದಂತೆ ಅಲ್ಲಿ ಸಾವಿರಾರು ಬಿಡಿ ನಿವೇಶನಗಳನ್ನು ಬೇನಾಮಿ ಹೆಸರಿನಲ್ಲಿ ಪಡೆದಿರುವುದು ಬಹಿರಂಗವಾಗಿದೆ. ಹದಿನಾಲ್ಕು ಬಿಡಿ ನಿವೇಶನ ಪಡೆದ ಸಂಬಂಧ'ದ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನ್ಯಾಯಾಲಯದ ಬಾಗಿಲು ತಟ್ಟಿದ್ದಾರೆ. ವಿಚಾರಣೆ ಕೈಗೆತ್ತಿಕೊಂಡಿರುವ ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಇದೇ 27ಕ್ಕೆ ನಿಗದಿಪಡಿಸಿದೆ. ಮುಡಾದಲ್ಲಿ ಕೋಟ್ಯಾಂತರ ರೂ. ಮನಿ ಲ್ಯಾಂಡ್ರಿಂಗ್ (ಹಣದ ಅಕ್ರಮ ವಹಿವಾಟು) ನಡೆದಿದೆ ಎಂಬುದನ್ನು ಇಡಿ ಬಹಿರಂಗ ಪಡಿಸಿದೆ.

## ಅಧ್ಯಕ್ಷ ಸ್ಥಾನಕ್ಕೆ ಯೋಗ್ಯನಲ್ಲ

ಓಡಾಡಿದ್ದೀನಿ ಎಂದು ಹೇಳಬೇಡಿ ಅದರ ಎರಡು ಪಟ್ಟು ಲಾಭ ಪಡೆದುಕೊಂಡಿದ್ದೀರಿ ಎಂದರು. ಪಕ್ಷಕ್ಕೆ ಬಂದು ಮೂರು ವರ್ಷ ಆಯ್ತು ಅಂತೀಯಾ. ನಾನು ನಿಮ್ಮ ಅಪ್ಪನನ್ನು ಸಿಎಂ ಮಾಡಲು ಬಂದಿದ್ದೆ. ನೀನು ಅದೇ ಹರಾಮಿ ದುಡ್ಡಲ್ಲಿ ಓಡಾಡ್ತಿದ್ದಿಯಾ ಎಂದು ವಾಗ್ದಾಳಿ ನಡೆಸಿದರು. ಒಬ್ಬ ಬಹುಸಂಖ್ಯಾತ ಯತ್ನಾಳ್ ಇದ್ದಾರೆ ಅದಕ್ಕಾಗಿ ಅವರನ್ನು ಒಪ್ಪಿಕೊಂಡಿದ್ದೇನೆ. ಲಿಂಗಾಯತರಲ್ಲಿ ಇನ್ನೂ ಸಾಕಷ್ಟು ನಾಯಕರಿದ್ದಾರೆ. ನೀನು ಸಣ್ಣ ಹುಡುಗ, ನಿನಗೆ ಅಧ್ಯಕ್ಷ ಸ್ಥಾನ ಸಿಗುವುದಿಲ್ಲ. ಹೈಕಮಾಂಡ್ ನಿನ್ನನ್ನೇ ಮುಂದುವರೆಸಿದರೆ ಆಗಲಿ ಪಕ್ಷದ ನಿರ್ಣಯ ನಾನು ಸ್ವಾಗತ ಮಾಡುತ್ತೇನೆ. 2028ಕ್ಕೆ ಪಕ್ಷ ಅಧಿಕಾರಕ್ಕೆ ತರಲು ಕೆಲಸ ಮಾಡುತ್ತೀನಿ. ನನ್ನಿಂದ ತಪ್ಪಾಗಿದ್ದರೆ ಕ್ಷೇತ್ರದ ಜನರಲ್ಲಿ ಕ್ಷಮೆ ಕೇಳುತ್ತೇನೆ ಎಂದರು.

## ಈಗ ಟೂರ್ ಪಾಲಿಟಿಕ್ಸ್

ಎಂಬ ಸತೀಶ್ ಜಾರಕಿಹೊಳಿ ಆಪ್ತ ಶಾಸಕ ಆಸೀಫ್ ಸೇಠ್ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಭಾರೀ ಸಂಚಲನವನ್ನು ಮೂಡಿಸಿದೆ. ಸತೀಶ್ ಜಾರಕಿಹೊಳಿ ಆಪ್ತರಾಗಿರುವ ಬೆಳಗಾವಿ ಶಾಸಕ ಆಸೀಫ್ ಸೇಠ್ ನೇತೃತ್ವದಲ್ಲಿ ಉತ್ತರ ಕರ್ನಾಟಕದ ಶಾಸಕರೆಲ್ಲ ಸೇರಿ ಪ್ರವಾಸ ಹೊರಟಿರುವುದು ಸಹಜವಾಗಿ ಅನುಮಾನ ಹುಟ್ಟಿಸಿದೆ. ಈ ಬಗ್ಗೆ ಮಾತನಾಡಿದ ಆಸೀಫ್ ಸೇಠ್, ಶೀಘ್ರವೇ 15 ಮಂದಿ ಶಾಸಕರು ದುಬೈ ಪ್ರವಾಸ ಹೊರಟಿದ್ದೇವೆ. ಆದರೆ ನಮ್ಮ ನಾಯಕರಾದ ಸತೀಶ್ ಜಾರಕಿಹೊಳಿ ಪ್ರವಾಸಕ್ಕೆ ಬರಲ್ಲ, ಟಿಕೆಟ್ ಬುಕ್ ಮಾಡಿದ್ದೇವೆ, ಬುಕ್ ಆದ ಬಳಿಕ ಹೊರಡುತ್ತೇವೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ, ಅಸಮಾಧಾನ ಇಲ್ಲ, ಮುಖ್ಯವಾಗಿ ನಮ್ಮ ಪ್ರವಾಸಕ್ಕೂ ಮತ್ತು ಸತೀಶ್ ಜಾರಕಿಹೊಳಿ ಅವರಿಗೂ ಯಾವ ಸಂಬಂಧವೂ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

## ಮಾಹಿತಿ ಕೇಳಿದ ಇಡಿ!

ಎಸ್ಕೇಪ್ ಆಗಿದ್ದರು. ರಿಯಲ್ ಎಸ್ಟೇಟ್ ಏಜೆಂಟ್ ನಡೆಸುತ್ತಿದ್ದ ಗೃಹನಿರ್ಮಾಣ ಸಹಕಾರ ಸಂಘದಲ್ಲಿ ದಿನೇಶ್ ಕುಟುಂಬಸ್ಥರು ನಿರ್ದೇಶಕರಾಗಿದ್ದಾರೆ ಎನ್ನಲಾಗಿದೆ.

**ಮುಡಾ ಅಕ್ರಮಕ್ಕೆ 'ಕೋಕನಟ್' ಕೋಡ್‌ವರ್ಡ್:** ಬೇನಾಮಿ ಡೀಲ್ ವಹಿವಾಟಿಗೆ ರಿಯಲ್ ಎಸ್ಟೇಟ್ ಏಜೆಂಟ್ ಇಟ್ಟಿದ್ದ ಹೆಸರು 'ಕೋಕನಟ್'. ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಕೋಕನಟ್ ಹೆಸರಿನಲ್ಲೇ ಆತ ದುಡ್ಡು ಕಳುಹಿಸುತ್ತಿದ್ದನಂತೆ. ಆತನ ವಾಟ್ಸಪ್ ಚಾಟ್‌ನಲ್ಲಿ ಮಹತ್ತರ ವಿಚಾರ ಇಡಿಗೆ ಸಿಕ್ಕಿದೆ. ಒಂದು ಕೋಕನಟ್ ಎಂದರೆ ಒಂದು ಲಕ್ಷ. 50 ಕೋಕನಟ್ ಎಂದರೆ 50 ಲಕ್ಷ 100 ಕೋಕನಟ್ ಎಂದರೆ 1 ಕೋಟಿ. ಹೀಗೆ ಹಲವು ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಕೋಕನಟ್ ಹೆಸರಿನಲ್ಲಿ ರಿಯಲ್ ಎಸ್ಟೇಟ್ ಏಜೆಂಟ್ ಹಣ ಕಳುಹಿಸಿದ್ದ ಎನ್ನಲಾಗುತ್ತಿದ್ದು, ಎಲ್ಲಾ ದಾಖಲೆಗಳನ್ನು ಇಡಿ ಜಪ್ತಿ ಮಾಡಿದೆ ಎನ್ನಲಾಗಿದೆ.




ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರು ನಿಮ್ಮ ನೆನಪಿನಲ್ಲಿರುವ ಕುಟುಂಬ ವರ್ಗದವರು ಕೆ.ಜಿ ಕೊಪ್ಪಲು ಮೈಸೂರು

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು.
ಉಪ ನಿರ್ದೇಶಕರರವರ ಕಛೇರಿ,

ಸಂಖ್ಯೆ: ಎಂವೈಜೆಡ್/ಟೆಂಡರ್/2024–25 ದಿನಾಂಕ:17.01.2025

**Shop No 1 & Restaurant Complex ಮಳಿಗೆಗಳ ಟೆಂಡರ್**
**(ಇ ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)**

ಈ ಕಛೇರಿ ಟೆಂಡರ್ ಪ್ರಕಟಣೆ 1) Shop No 4 (Amphitheatre Complex) on the monthly license fee basis inside Sri Chamarajendra Zoological gardens Mysuru **Indent No. SE0043/24-25 Dt 17.01.25** 2) Selection of Agency/Bidder/Company/Firm for developing and running Modern Restaurant in Commercial Space available at Restaurant inside Sri Chamarajendra Zoological gardens Mysuru **Indent No. SE0044/24-25 Dt 17.01.25** ಅನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕವನ್ನು ಹಾಗೂ, ಇತರೆ ವಿವರಗಳನ್ನು ಇ-ಪೋರ್ಟಲ್ (https://kppp.karnataka.gov.in) ನಲ್ಲಿ ಪಡೆಯಬಹುದು.

ಸಹಿ/– ಉಪನಿರ್ದೇಶಕರು
ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

DIPR/DDMYS/1131/KSMCA/766/2024-25








**BEFORE THE KARNATAKA STATE CONSUMER DISPUTES REDRESSAL COMMISSION, BASAVA BHAVAN, BANGALORE: 560 001**

**APPEAL No. 2091/2024**

APPELLANT

1. Smt. Margareetha Castelino W/o Late A.E. Castelino, Residing at No.2, HIG, New Kantharaja Urs Road, Sharadadevinagar, Mysuru-570022.

(By Shri / Smt. R. George Lazarus)

RESPONDENT

1. Mis Ananda Housing Co-Operative Society Ltd., No.P/1, 11th Cross, 4" Stage, T.K.Layout, Saraswthipuram, Mysore. Represented by its Vice President Sri Lakshmikanth, S/o Gopala Jetti, aged about 43 years, Residing at No. 130, "Simhadri", 2nd Main Road, A-1 Block, Vijayanagara 3rd Stage. Mysore Also at:- No.7, Kuvempu Trust Board, Kalidasa Road, Mysuru. (By Shri/Smt)

To,

M/s. Ananda Housing Co-Operative Society Ltd., No. P/1, 11th Cross, 4th Stage, T.K.Layout, Saraswthipuram, Mysore. Represented by its Vice President Sri Lakshmikanth, S/o Gopala Jetti, aged about 43 years, Residing at No. 130, "Simhadri", 2nd Main Road, A-1 Block. Vijayanagara 3rd Stage. Mysuru. Also at:- No. 7, Kuvempu Trust Board, Kalidasa Road, Mysuru.

NOTICE TO THE RESPONDENT FOR HEARING OF APPEAL IN KANNADA DAILY NEWS PAPER MYSURU MITHRA"

Whereas the Appellant has filed the above appeal Challenging the order passed by the District Consumer Commission Mysore in EA.No.19/2016 Pronounced by an order dated: 20/05/2024. You are hereby notified to appear before this Hon'ble Commission in person or through a pleader or person authorized as per law to answer all the material question of facts and law relating to the Appeal on 17th Day of February Two Thousand and Twenty Five (17/02/2025) at 11.00 AM.

Take notice that in case of default of your appearance on the day mentioned above Appeal will be heard and determined in your absence.

Given under the hand and seal of this Commission on this 2nd day of January Two Thousand and Twenty Five (02/01/2025).

By order of the Commission
Sd/- Asst. Registrar cum Asst. Admn. Officer, K.S.C.D.R.C.
BANGALORE: 560001
Advocate for Appelant.





**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತನ್ನು ಸದರಿ ಸ್ವತ್ತಿನ ಮಾಲೀಕರಿಂದ ಶುದ್ಧ ಕ್ರಯಕ್ಕೆ ಪಡೆದುಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಈ ಸಂಬಂಧ ನಮ್ಮ ಕಕ್ಷಿದಾರರು ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಹತ್ತು (10) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

**ಷೆಡ್ಯೂಲ್ ಸ್ವತ್ತಿನ ವಿವರ**

ಮೈಸೂರು ಸಿಟಿ, ಖಿಲ್ಲೆ ಮೊಹಲ್ಲಾ, ನಾಚನಹಳ್ಳಿ ಕುಪ್ಪಲೂರು ಬಡಾವಣೆ, 3ನೇ ಹಂತ, ಎ ವಲಯದಲ್ಲಿರುವ ನಿವೇಶನ ಸಂಖ್ಯೆ 183 ರ ವಿಸ್ತೀರ್ಣ ಪೂರ್ವಪಶ್ಚಿಮ: 12.00 ಮೀಟರ್‌ಗಳು ಮತ್ತು ದಕ್ಷಿಣೋತ್ತರ: 9.00 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108.00 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ:– ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: 190 ನೇ ನಂಬರ್ ಸ್ವತ್ತು, ಉತ್ತರಕ್ಕೆ: 184 ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ: 182 ನೇ ನಂಬರ್ ಸ್ವತ್ತು.

JAYAKUMAR
Advocate
Office: No. 565/A, 20th Cross, 4th Main, 1st Stage, Vidyaranyapuram, Mysore-570 008
Mob.: 98445 39729
Place: Mysore
Date: 18-01-2025






















# ಅಪ್ರಾಪ್ತೆ ಮೇಲೆ ಅತ್ಯಾಚಾರ: ಆರೋಪಿಗೆ 20 ವರ್ಷ ಕಠಿಣ ಸಜೆ

ಸುಂಟಿಕೊಪ್ಪ, ಜ.18– ಅಪ್ರಾಪ್ತೆ ಮೇಲೆ ಅತ್ಯಾಚಾರವೆಸಗಿದ್ದ ವ್ಯಕ್ತಿಗೆ 20 ವರ್ಷ ಕಠಿಣ ಸಜೆ ಮತ್ತು 5 ಸಾವಿರ ರೂ. ದಂಡ ವಿಧಿಸಿ ಇಲ್ಲಿನ ನ್ಯಾಯಾಲಯ ತೀರ್ಪು ನೀಡಿದೆ.



ರಮೇಶ್ ಎಂ.ವಿ.

ಸುಂಟಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಹರದೂರು ಗ್ರಾಮದ ಮುತ್ತಿನ ತೋಟ ನಿವಾಸಿ ರಮೇಶ್ ಎಂ.ವಿ. ಎಂಬಾತನೇ ಶಿಕ್ಷೆಗೆ ಗುರಿಯಾದವನಾಗಿದ್ದಾನೆ. ಈತ 2021ರ ಆಗಸ್ಟ್ 5ರಂದು ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದು ಬಾಲಕಿಯ ಪೋಷಕರು ನೀಡಿದ ದೂರಿನ್ವಯ ಪೋಕ್ಸೊ ಕಾಯ್ದೆ ಅಡಿಯಲ್ಲಿ ಮೊಕದ್ದಮೆ ದಾಖಲಿಸಲಾಗಿತ್ತು.

ಆರೋಪಿಯ ವಿರುದ್ಧ ತನಿಖೆ ಕೈಗೊಂಡ ಸುಂಟಿಕೊಪ್ಪ ಪೊಲೀಸರು ದೋಷರೋಪಣಾ ಪಟ್ಟಿಯನ್ನು 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸಿ.ಕೆ. ಬಸವರಾಜು ಅವರು ಆರೋಪ ಸಾಭೀತಾದ ಹಿನ್ನೆಲೆಯಲ್ಲಿ ಆರೋಪಿಗೆ 20 ವರ್ಷಗಳ ಕಠಿಣ ಶಿಕ್ಷೆ ಹಾಗೂ 5 ಸಾವಿರ ರೂ. ದಂಡ ವಿಧಿಸಿದ್ದಾರೆ. ದಂಡವನ್ನು ಪಾವತಿಸಲು ವಿಫಲನಾದಲ್ಲಿ ಮತ್ತೆ 3 ತಿಂಗಳ ಜೈಲು ಶಿಕ್ಷೆಯನ್ನು ವಿಧಿಸಿ ತೀರ್ಪು ನೀಡಿದ್ದಾರೆ. ಪ್ರಕರಣದಲ್ಲಿ ಸರಕಾರಿ ಅಭಿಯೋಜಕರಾದ ಬಿ.ಎಸ್. ರುದ್ರಪ್ರಸನ್ನ ವಾದ ಮಂಡಿಸಿದರು.

# ಕೊಡಗು ಸಹಕಾರ ಸಂಘದಲ್ಲಿ ಯಶಸ್ವಿನಿ ಯೋಜನೆ ಸದಸ್ಯತ್ವ ನೋಂದಣಿ ಆರಂಭ

ಮೈಸೂರು, ಜ.18–ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಕೊಡಗು ಸಹಕಾರ ಸಂಘದಲ್ಲಿ ಕರ್ನಾಟಕ ಸರ್ಕಾರದ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಸದಸ್ಯತ್ವ ನವೀಕರಣ ಮತ್ತು ಹೊಸ ಸದಸ್ಯರ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಯೋಜನೆ ನವೀಕರಿಸಲು ಹಾಗೂ ಹೊಸದಾಗಿ ಸೇರ್ಪಡೆಯಗಲು ಜ.31ರಂದು ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಘದ ಕಚೇರಿಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

## ಲಿಲ್ಲಿ ಡಿಸೋಜ ನಿಧನ



ಲಿಲ್ಲಿ ಡಿಸೋಜ

**ನಾಪೋಕ್ಲು:** ಮಡಿಕೇರಿಯ ಮಂಗಳಾದೇವಿ ನಗರದ ನಿವಾಸಿ ಲಾರೆನ್ಸ್ ಡಿಸೋಜ ಅವರ ಧರ್ಮಪತ್ನಿ ಲಿಲ್ಲಿ ಡಿಸೋಜ(78) ಶುಕ್ರವಾರ ನಿಧನರಾದರು. ಮೃತರು ಪತಿ ಲಾರೆನ್ಸ್ ಡಿಸೋಜ ಹಾಗೂ ಮೂವರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಡಿಕೇರಿಯ ಸಂತ ಮೈಕೆಲರ ದೇವಾಲಯದ ಕ್ರೈಸ್ತ ಸಮಾಧಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀ ಮಹಾ ಮೃತ್ಯುಂಜಯ ದೇವಾಲಯದ ಭಿನ್ನಾಭಿಪ್ರಾಯ ಪ್ರಕರಣ

# ಜಿಲ್ಲಾಡಳಿತದ ಶಾಂತಿ ಸಭೆಗೆ ಅಖಿಲ ಕೊಡವ ಸಮಾಜ ಬೆಂಬಲ

## ಪರಸ್ಪರ ಪ್ರತಿಭಟನೆ ಕೈಬಿಡಲು ಮನವಿ

ಮಡಿಕೇರಿ,ಜ.18– ಕಟ್ಟೆಮಾಡು ಶ್ರೀ ಮಹಾ ಮೃತ್ಯುಂಜಯ ದೇವಾಲಯದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ನಡೆಸುವ ಶಾಂತಿ ಸಂಧಾನ ಪ್ರಕ್ರಿಯೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿರುವ ಅಖಿಲ ಕೊಡವ ಸಮಾಜ, ಎರಡೂ ಜನಾಂಗದವರು ಪರಸ್ಪರ ಪ್ರತಿಭಟನೆ ನಡೆಸದಂತೆ ಮನವಿ ಮಾಡಿದೆ.



ಸುದ್ದಿಗೋಷ್ಠಿಯಲ್ಲಿ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಮಾತನಾಡುತ್ತಿರುವುದು.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಕಹಿ ಘಟನೆಯನ್ನು ಮರೆತು ಶಾಂತಿಯನ್ನು ಕಾಪಾಡಬೇಕಾಗಿದೆ. ದೇವಾಲಯದಲ್ಲಿ ನಡೆದ ಘಟನೆಯ ಬಗ್ಗೆ ಎರಡೂ ಕಡೆಯವರಲ್ಲಿ 'ಹೀಗಾಗಬಾರದಾಗಿತ್ತು' ಎನ್ನುವ ಬೇಸರವಿದೆ. ಒಬ್ಬರು ಪ್ರತಿಭಟನೆ ನಡೆಸಿದರೆ, ಮತ್ತೊಬ್ಬರು ಪ್ರತಿಭಟನೆಗೆ ಮುಂದಾಗುತ್ತಾರೆ. ಇದರಿಂದ ಯಾರಿಗೂ ಲಾಭವಿಲ್ಲ. ಆದ್ದರಿಂದ ಆದಷ್ಟು ಬೇಗ ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಸಂಧಾನಕ್ಕೆ ವೇದಿಕೆ ಸಿದ್ಧಗೊಳಿಸಬೇಕು ಎಂದು ಒತ್ತಾಯಿಸಿದರು.

ಕೊಡವರಿಗೆ ಎಲ್ಲಾ ಜನಾಂಗದವರ ಮೇಲೆ ಗೌರವವಿದೆ. ಹಲವು ದೇವಸ್ಥಾನಗಳಲ್ಲಿ ಭಂಡಾರ ತಕ್ಕರಾಗಿ ಅರೆಭಾಷಿಕ ಜನಾಂಗ ಬಾಂಧವರು ಕೊಡವ ಜನಾಂಗದವರೊಂದಿಗೆ ಸೇರಿ ಶಾಂತಿಯುತವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕೊಡಗಿನ ಜನ ಜೀವನದಲ್ಲಿ ಅವರು ಕೂಡ ಅವಿಭಾಜ್ಯ ಅಂಗವಾಗಿದ್ದಾರೆ. ಒಂದಿಬ್ಬರು ಮಾಡಿದ ತಪ್ಪಿಗೆ ಇಡೀ ಜನಾಂಗವನ್ನು ಅವಹೇಳನ ಮಾಡುವುದು ಅಥವಾ ದೂಷಿಸುವುದು ಸರಿಯಲ್ಲ ಮತ್ತು ಸಮಂಜಸವಲ್ಲ ಎಂದು ಅಭಿಪ್ರಾಯಪಟ್ಟರು.

ಒಂದು ಜನಾಂಗದವರು ಪ್ರತಿಭಟನೆಯನ್ನು ಶಾಂತಿಯುತವಾಗಿ ಮಾಡಿದರೂ ಅದಕ್ಕೆ ಪ್ರತಿಯಾಗಿ ಇನ್ನೊಂದು ಸಮುದಾಯ ಪ್ರತಿಭಟನೆ ನಡೆಸುವುದು ಸ್ವಾಭಾವಿಕವಾಗಿದೆ. ಇದು ಕೊಡಗು ಜಿಲ್ಲೆಯ ಸ್ವಾಸ್ಥ್ಯದ ದೃಷ್ಟಿಯಿಂದ ಆರೋಗ್ಯಕರವಲ್ಲ. ಕೊಡವರು, ಕೊಡವ ಭಾಷಿಕ ಜನಾಂಗದವರು ಹಾಗೂ ಕೊಡವ ಭಾಷೆಯ ಅಭಿಮಾನಿಗಳು ಬೃಹತ್ ಪ್ರತಿಭಟನೆ ಆಯೋಜಿಸುವುದಕ್ಕೆ ತಯಾರಿ ನಡೆಸಬಹುದು. ಇದರಿಂದ ಯಾರಿಗೂ ಲಾಭವಿಲ್ಲವೆಂದು ಬೇಸರ ವ್ಯಕ್ತಪಡಿಸಿದ ಪರದಂಡ ಸುಬ್ರಮಣಿ, ಶಾಂತಿ ಸಂಧಾನದ ಮೂಲಕ ಕಾರ್ಮೋಡದ ನಡುವೆ ಬೆಳ್ಳಿಗೆರೆ ಮೂಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಶ್ರೀ ಮಹಾ ಮೃತ್ಯುಂಜಯ ದೇವಾಲಯದಲ್ಲಿ ಡಿ.27ರಂದು ಸಂಜೆ ಎದುರಾದ ಭಿನ್ನಾಭಿಪ್ರಾಯದ ಸಂದರ್ಭ ಕೊಡವರ ಮೇಲೆ ಕೆಲವರು ಹಲ್ಲೆ ನಡೆಸಿದ್ದು, ಇವರ ವಿರುದ್ಧ ದೂರು ನೀಡಿದ್ದರೂ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಅಖಿಲ ಕೊಡವ ಸಮಾಜದ ಕಾರ್ಯದರ್ಶಿ ಕೀತಿಯಂಡ ವಿಜಯ ಕುಮಾರ್ ಮಾತನಾಡಿ, ಶಾಂತಿ ಸಂಧಾನಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಆದರೆ ಹಲ್ಲೆ ನಡೆಸಿದವರ ವಿರುದ್ಧ ಯಾವ ರೀತಿಯ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎನ್ನುವುದನ್ನು ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕೊಡವ ಸಮಾಜದ ಸದಸ್ಯ ಚಿನ್ನಪಂಡ ದರ್ಶನ್ ಹಾಗೂ ಕನೆಕ್ಟಿಂಗ್ ಕೊಡವಾಸ್ ಸಂಘಟನೆಯ ಅಧ್ಯಕ್ಷ ಶಾಂತೆಯಂಡ ನಿರನ್ ಉಪಸ್ಥಿತರಿದ್ದರು.

# ಗೇಟ್‌ನಲ್ಲಿ ಸಿಲುಕಿಕೊಂಡಿದ್ದ ಆನೆಯ ತಲೆ ಬಿಡಿಸಿದ ಮತ್ತೊಂದು ಆನೆ

ಮಡಿಕೇರಿ,ಜ.18– ಕಬ್ಬಿಣದ ಗೇಟ್‌ನಲ್ಲಿ ಸಿಲುಕಿಕೊಂಡಿದ್ದ ಆನೆಯ ತಲೆಯನ್ನು ಮತ್ತೊಂದು ಆನೆ ಹರ ಸಾಹಸ ಪಟ್ಟು ಅದರಿಂದ ಬಿಡಿಸಿದ ಘಟನೆ ತಿತಿಮತಿ ಬಳಿಯ ಅರಣ್ಯ ಇಲಾಖೆಯ ಟಿಂಬರ್ ಯಾರ್ಡ್‌ನಲ್ಲಿ ನಡೆದಿದೆ.

ಮನೆಯಪಂಡ ಮಾಯಾ ರಾಮ್‌ದಾಸ್ ಅವರ ಭದ್ರಗೋಳ ಎಸ್ಟೇಟ್‌ನ ಮುಂಬದಿಯ ಅರ್ಣ್ಯ ಡಿಪೋದ ಟಿಂಬರ್ ಯಾರ್ಡ್‌ನ ಗೇಟ್‌ನಲ್ಲಿ ರೆಡಿಯೋ ಕಾಲರ್ ಅಳವಡಿಸಿದ್ದ ಕಾಡಾನೆಯೊಂದರ ತಲೆ ಸಿಲುಕಿಕೊಂಡಿದ್ದು, ಗೇಟ್‌ನಿಂದ ತಲೆಯನ್ನು ಬಿಡಿಸಿಕೊಳ್ಳಲು ಕಾಡಾನೆ ಹರಸಾಹಸಪಡುತ್ತಿತ್ತು.

ಇದನ್ನು ಕಂಡ ಐದು ಕಾಡಾನೆಗಳ ಹಿಂಡಿನಲ್ಲಿದ್ದ ಕಾಡಾನೆಯೊಂದು ಸಹಾಯಕ್ಕೆ ಬಂದು, ಗೇಟ್‌ನಲ್ಲಿ ಸಿಲುಕಿ ಪರದಾಡುತ್ತಿದ್ದ ಆನೆಯ ತಲೆಯನ್ನು ಬಿಡಿಸುವ ಮೂಲಕ ಬಚಾವ್ ಮಾಡಿದೆ. ಕೆಲ ಕ್ಷಣದಲ್ಲಿಯೇ ಗೇಟ್‌ನಲ್ಲಿ ಸಿಲುಕಿದ್ದ ತಲೆಯನ್ನು ಬಿಡಿಸಿಕೊಂಡ ಕಾಡಾನೆ ಅಲ್ಲಿಂದ ಕಾಲ್ಕಿತ್ತಿದೆ. ಕಾಡಾನೆಯ ಈ ಪಡಿಪಾಟಲಿನ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.



ಗೇಟಿಗೆ ಸಿಲುಕಿಕೊಂಡಿರುವ ತಲೆಯನ್ನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಆನೆ.


## ಇಂದು ಮಹಾಯೋಗಿ ಶ್ರೀ ವೇಮನ ಜಯಂತಿ

**ಮಡಿಕೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಮಹಾಯೋಗಿ ಶ್ರೀ ವೇಮನ ಜಯಂತಿ ಕಾರ್ಯಕ್ರಮವು ಜ.19 ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್‌ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇತರರು ಪಾಲ್ಗೊಳ್ಳಲಿದ್ದಾರೆ.

# ಅಂಬೇಡ್ಕರ್ ಕೊಟ್ಟ ಸಂವಿಧಾನವನ್ನು ಅನುಸರಿಸಿ ಉಳಿಸಿಕೊಳ್ಳಬೇಕಾಗಿದೆ

## ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಕರೆ



ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಮಾತನಾಡುತ್ತಿರುವುದು.

ಮಂಡ್ಯ, ಜ.18– ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಹಿರಿಯರು ದೇಶದ ಬೆಳವಣಿಗೆಗೆ ನೀಡಿದ ಸಂವಿಧಾನವನ್ನು ಅನುಸರಿಸಿ ಉಳಿಸಿಕೊಳ್ಳುವ ಜವಾಬ್ದಾರಿ ಯುವಕರ ಮೇಲಿದೆ ಎಂದು ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 'ಸಂವಿಧಾನ ಓದು ಅಧ್ಯಯನ ಶಿಬಿರ'ವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತದ ಸಂವಿಧಾನವು ಜಗತ್ತಿನ ಅತಿ ದೊಡ್ಡ ಸಂವಿಧಾನವಾಗಿದ್ದು, ಸಂವಿಧಾನ ರಚನೆಯಾಗಿ ಹಲವಾರು ವರ್ಷಗಳಾದರೂ ಅನೇಕರಿಗೆ ಸಂವಿಧಾನದ ರಚನೆ ಮತ್ತು ಅದರ ಮೂಲ ತತ್ವಗಳು ಬಗ್ಗೆ ತಿಳಿದೇ ಇಲ್ಲ ಎಂಬುದು ಯೋಚಿಸುವ ವಿಷಯವಾಗಿದೆ ಎಂದರು.

ಸಾರ್ವಜನಿಕರಿಗೆ ಉಪಯುಕ್ತವಾಗಲೆಂದು 2018ರಲ್ಲಿ ನಾನು 'ಸಂವಿಧಾನ ಓದು' ಎಂಬ ಪುಸ್ತಕ ರಚಿಸಿದ್ದೇನೆ, ಕಳೆದ 6 ವರ್ಷದಲ್ಲಿ 2000ಕ್ಕೂ ಹೆಚ್ಚು ಉಪನ್ಯಾಸವನ್ನು ಸಂವಿಧಾನದ ಬಗ್ಗೆ ನೀಡಿದ್ದೇನೆ. ಇಷ್ಟಾದರೂ ರಾಜ್ಯದ ಒಂದಿಷ್ಟು ಜನರನ್ನು ತಲುಪಲು ವಿಫಲರಾಗಿದ್ದೇವೆ. ಜಿಲ್ಲೆಯ ಯುವ ಜನರಿಗೆ ಸಂವಿಧಾನದ ಮಹತ್ವ ಮೂಲ ತತ್ವಗಳನ್ನು ತಿಳಿಸುವುದೇ ಈ ಶಿಬಿರದಲ್ಲಿ ಮೂಲ ಉದ್ದೇಶ, ಜೊತೆಗೆ ನಾವು ಅಭಿವೃದ್ಧಿಯತ್ತ ಸಾಗಲು ಇರುವ ಒಂದೇ ದಾರಿ ಎಂದರೆ ಅದು ಹಿರಿಯರು ಕೊಟ್ಟ ನಮ್ಮ ಸಂವಿಧಾನ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಮಾತನಾಡಿದರು.

ಸಭೆಯಲ್ಲಿ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ಪುಟ್ಟಮಾಧು, ನಗರಸಭೆ ಮಾಜಿ ಅಧ್ಯಕ್ಷ ಸಿದ್ಧರಾಜು,ಮಹಿಳಾ ರೈತ ಮುಖಂಡರಾದ ಸುನಂದ ಜೈರಾಮ್, ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಕೃಷ್ಣ.ಆರ್, ಕಾರ್ಮಿಕ ಮುಖಂಡರಾದ ಸಿ.ಕುಮಾರಿ ಮತ್ತು ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

## ಬೋರಲಿಂಗೇಗೌಡ ನಿಧನ

ಕೆ.ಆರ್.ಪೇಟೆ,ಜ.18– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಮಿಲ್ ಬೋರಲಿಂಗೇಗೌಡ(90) ಇಂದು ನಿಧನ ಹೊಂದಿದ್ದಾರೆ.



ಮೃತರು ಪತ್ನಿ ಜಯಮ್ಮ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಭಾನುವಾರ ಬೆಳಿಗ್ಗೆ 10 ಗಂಟೆಗೆ ಸ್ವಗ್ರಾಮ ಅಗ್ರಹಾರ ಬಾಚಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಗಾಂಧಿನಗರದಲ್ಲಿ ಹೈಮಾಕ್ಸ್ ಕಾಮಗಾರಿಗೆ ಚಾಲನೆ



ಶ್ರೀರಂಗಪಟ್ಟಣದ ಗಾಂಧಿನಗರದಲ್ಲಿ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅನುದಾನದಲ್ಲಿ 7 ಕಡೆಗಳಲ್ಲಿ ನಿರ್ಮಿಸುತ್ತಿರುವ ಹೈ ಮಾಕ್ಸ್ ಲೈಟ್ ಕಾಮಗಾರಿಗೆ ಪುರಸಭೆ ಸದಸ್ಯ ಎಸ್.ಪ್ರಕಾಶ್ ಚಾಲನೆ ನೀಡಿದರು. ಈ ವೇಳೆ ಯಜಮಾನ್ ಸುಬ್ಬಣ್ಣ, ಅಶೋಕ್, ಹರೀಶ್, ಸತೀಶ್, ಕುಮಾರ್, ರಾಣಿ, ನಾಗಮಣಿ ಸೇರಿದಂತೆ ಇತರರು ಇದ್ದರು.

## ರಸ್ತೆ ಅಪಘಾತ; ಹಸೆಮಣೆ ಏರಬೇಕಾಗಿದ್ದ ಯುವತಿ ದುರ್ಮರಣ



**ಹಲಗೂರು:** ಮುಂದಿನ ತಿಂಗಳು ಹಸೆಮಣೆ ಏರಬೇಕಾಗಿದ್ದ ವಧು ಶನಿವಾರ ಬೆಳಿಗ್ಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ದುರ್ಘಟನೆ ಹೆಚ್.ಬಸಾಪುರ ಗೇಟಿನ ಬಳಿ ಜರುಗಿದೆ.

ಬಾಳೆ ಹೊನ್ನಿಗ ಗ್ರಾಮದ ವಾಸಿ ಕೃಷ್ಣೇಗೌಡರ ಪುತ್ರಿ ಬಿ.ಕೆ.ಶರಣ್ಯ(26) ಮೃತ ದುರ್ದೈವಿ. ಕಾರ್ಯನಿಮಿತ್ತ ಹಲಗೂರಿಗೆ ತಮ್ಮ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಸಂದರ್ಭದಲ್ಲಿ ಮಳವಳ್ಳಿ ಕಡೆಯಿಂದ ಅತಿ ವೇಗವಾಗಿ ಬಂದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ಬಿ.ಕೆ.ಶರಣ್ಯ ಕನಕಪುರ ತಾಲೂಕು ಕಾಡನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ನರೇಗಾ ಯೋಜನೆಯಡಿ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಫೆಬ್ರವರಿ 18ರಂದು ಇವರ ವಿವಾಹ ನಿಶ್ಚಯವಾಗಿತ್ತು. ದುರಾದೃಷ್ಟ ಹಸೆಮಣೆ ಏರಬೇಕಾಗಿದ್ದ ಇವರು ಮಸಣ ಸೇರಿರುವುದು ದುರಾದೃಷ್ಟಕರ ಸಂಗತಿ. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಸಬ್‌ಇನ್ಸ್‌ಪೆಕ್ಟರ್ ಬಿ. ಮಹೇಂದ್ರ ಮುಂದಿನ ತನಿಖೆ ಕೈಗೊಂಡಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದರು.

# ಬಿದಿರಕೆರೆ ಅಂಚೆ ಕಚೇರಿಯಲ್ಲಿ ನಕಲಿ ಸಹಾಯಕ ಪೋಸ್ಟ್ ಮಾಸ್ಟರ್; ಭಾರೀ ಗೋಲ್ ಮಾಲ್

## ಹತ್ತು ಲಕ್ಷಕ್ಕೂ ಹೆಚ್ಚು ಹಣ ಗುಳುಂ



ಬಿದಿರಕೆರೆ ಅಂಚೆಕಚೇರಿಯ ಮುಂದೆ ಜಮಾಯಿಸಿರುವ ವಂಚನೆಗೊಳಗಾದವರು.

ನಾಗಮಂಗಲ, ಜ.18– ತಾಲೂಕಿನ ಬಿದಿರಕೆರೆ ಗ್ರಾಮದಲ್ಲಿ ನಕಲಿ ಪೋಸ್ಟ್ ಮಾಸ್ಟರ್ ಒಬ್ಬ 10 ಲಕ್ಷಕ್ಕೂ ಹೆಚ್ಚು ಹಣ ಗುಳುಂ ಮಾಡಿ ಪರಾರಿಯಾಗಿರುವ ಆರೋಪ ಕೇಳಿಬಂದಿದೆ.



ದೊರೆಸ್ವಾಮಿ@ರಾಜು

ಅಂಚೆ ಕಛೇರಿಯ ಸಹಾಯಕ ಪೋಸ್ಟ್ ಮಾಸ್ಟರ್ ಸುನಂದಮ್ಮ ಅವರ ಪುತ್ರ ದೊರೆಸ್ವಾಮಿ ಅಲಿಯಾಸ್ ರಾಜು ಎಂಬಾತನೇ ಗ್ರಾಮಸ್ಥರಿಗೆ ಪಂಗನಾಮ ಹಾಕಿ ಪರಾರಿಯಾದ ಆರೋಪ ಎದುರಿಸುತ್ತಿರುವವನಾಗಿದ್ದು, ತನ್ನ ತಾಯಿ ಬದಲಾಗಿ ಈತನೇ ಸಹಾಯಕ ಪೋಸ್ಟ್ ಮಾಸ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಎನ್ನಲಾಗಿದೆ

**ವಿವರ:** ಬಿದಿರಕೆರೆ ಗ್ರಾಮದಲ್ಲಿ ಪುಟ್ಟಸ್ವಾಮಿ ಮುಖ್ಯ ಪೋಸ್ಟ್ ಆಫೀಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಇವರ ನಿಧನದ ನಂತರ 5ನೇ ತರಗತಿ ಓದಿರುವ ಪತ್ನಿ ಸುನಂದಮ್ಮ ತಮ್ಮ ಪ್ರಭಾವ ಬಳಸಿ ಸಹಾಯಕ ಪೋಸ್ಟ್ ಮಾಸ್ಟರ್ ಹುದ್ದೆಯನ್ನು ಪಡೆದುಕೊಂಡಿದ್ದಾರೆ ಎನ್ನಲಾಗಿದೆ. ಓದಲು, ಬರೆಯಲು ಬಾರದ ಇವರು ತಮ್ಮ ಮಗನಾದ ದೊರೆಸ್ವಾಮಿ ಅಲಿಯಾಸ್ ರಾಜುಗೆ ಪೋಸ್ಟ್ ಆಫೀಸ್ ಕೆಲಸವನ್ನು ನಿರ್ವಹಿಸಲು ಬಿಟ್ಟಿದ್ದಾರೆ. ಇದನ್ನು ದುರುಪಯೋಗ ಮಾಡಿಕೊಂಡ ರಾಜು ಗ್ರಾಮೀಣ ಪ್ರದೇಶದ ವಯೋವೃದ್ಧ ಪುರುಷ ಮತ್ತು ಮಹಿಳೆಯರಿಗೆ ಬರೋಬ್ಬರಿ 10 ಲಕ್ಷಕ್ಕೂ ಹೆಚ್ಚು ಹಣವನ್ನು ವಂಚಿಸಿ ಪರಾರಿಯಾಗಿದ್ದಾನೆ.

ಬಿದರಿಕೆರೆ ಗ್ರಾಮದ ಮಂಜಮ್ಮ 4 ಲಕ್ಷ, ಕೆಂಪಮ್ಮ 1.5 ಲಕ್ಷ, ಜಯಮ್ಮ 22 ಸಾವಿರ, ನಿಂಗಪ್ಪ 50 ಸಾವಿರ, ಪಂಕಜ 25 ಸಾವಿರ, ಲಕ್ಷ್ಮಮ್ಮ 20 ಸಾವಿರ, ಶಾಂತಮ್ಮ 40 ಸಾವಿರ, ವರಲಕ್ಷ್ಮಿ 14 ಸಾವಿರ, ಬಸವರಾಜು 40 ಸಾವಿರ, ಲೈಲಾ 10 ಸಾವಿರ, ಕೆಂಪಣ್ಣ 45 ಸಾವಿರ ಹಣ ಕಳೆದುಕೊಂಡು ವಂಚನೆಗೆ ಒಳಗಾಗಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

# ಅಮಿತ್ ಶಾ ಹೇಳಿಕೆ ಖಂಡಿಸಿ ಬಿಎಸ್‌ಐ ಪ್ರತಿಭಟನೆ

ಚಾಮರಾಜನಗರಜ.18– ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ವಿರುದ್ಧ ಸಂಸತ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಭಾರತೀಯ ಬೌದ್ಧ ಮಹಾಸಭಾದ (ಬಿಎಸ್‌ಐ) ಮಹಿಳಾ ವಿಭಾಗದ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.





ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಭಾರತೀಯ ಬೌದ್ಧ ಮಹಾಸಭಾದ ಮಹಿಳಾ ವಿಭಾಗದ ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಉಪಾಧ್ಯಕ್ಷೆ ನಾಗಶಿಲ್ಪ ಉಮೇಶ್ ಕುದರ್ ಹಾಗೂ ರಮಾಬಾಯಿ ಅಂಬೇಡ್ಕರ್ ಸಂಘದ ಅಧ್ಯಕ್ಷೆ ಪುಷ್ಪ ಮರಿಸ್ವಾಮಿ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಪ್ರತಿಭಟನೆ ನಡೆಸಿದರು. ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ನಾಗಶಿಲ್ಪ ಉಮೇಶ್ ಕುದರ್ ಮಾತನಾಡಿ, ವಿಶ್ವಜ್ಞಾನಿ ಡಾ. ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರ ಬಗ್ಗೆ ಮನುವಾದಿ ಅಮಿತ್ ಶಾರವರು ಕೇಂದ್ರ ಗೃಹ ಸಚಿವರಾಗಿ ಸಂಸತ್ ಭವನದಲ್ಲಿ ಅಂಬೇಡ್ಕರ್ ಅಂತ ಹೇಳುವುದು ಈಗ ಫ್ಯಾಷನ್ ಆಗಿದೆ ಎಂದು ಹೇಳಿರುವುದು ನಮಗೆ ತೀವ್ರನೋವು ಉಂಟಾಗಿದೆ. ಆದ್ದರಿಂದ ಅವರು ನೈತಿಕ ಹೊಣೆ ಹೊತ್ತು ತಮ್ಮ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಬೇಕು ಒತ್ತಾಯಿಸಿದರು.

ಅಂಬೇಡ್ಕರ್ ಅವರು ಬರೆದ ಸಂವಿಧಾನ ಇಡೀ ಪ್ರಪಂಚಕ್ಕೆ ಮಾದರಿಯಾಗಿದೆ. ಪ್ರಸ್ತುತ ಅಂಬೇಡ್ಕರ ಅವರ ಹೆಸರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಿದೆ. ಕೂಡಲೇ ಅಮಿತ್ ಶಾ ಅವರು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಅಮಿತ್ ಶಾ ಅವರು ಹೇಳಿಕೆ ನೀಡಿ ಹಲವು ದಿನಗಳು ಕಳೆದರೂ ಅಂಬೇಡ್ಕರ್ ಅನುಯಾಯಿಗಳು ಅಮಿತ್ ಶಾ ವಿರುದ್ಧ ದೇಶಾದ್ಯಂತ ಹಲವು ಪ್ರತಿಭಟನೆಗಳು ನಡೆದರೂ ಅವರ ವಿರುದ್ಧ ಕ್ರಮ ಜರುಗಿಸದಿರುವುದು ವಿಪರ್ಯಾಸ ಎಂದರು.

ಪ್ರಧಾನಿ ನರೇಂದ್ರಮೋದಿ ಹಾಗೂ ಬಿಜೆಪಿ ಪಕ್ಷ ಅಮಿತ್ ಶಾ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಿರುವುದು ಸರಿಯಲ್ಲ. ಕೂಡಲೇ ಅಮಿತ್ ಶಾ ಅವರು ಸಚಿವ ಸಂಪುಟದಿಂದ ವಜಾಗೊಳಿಸಬೇಕು. ಅಮಿತ್ ಶಾ ದೇಶದ ಜನರಲ್ಲಿ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ದೇಶಾದ್ಯಂತ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಭಾರತೀಯ ಭೌದ್ದ ಮಹಾ ಸಭಾ ಜಿಲ್ಲಾ ಉಪಾಧ್ಯಕ್ಷ ನಾಗಶಿಲ್ಪ, ರಮಾಬಾಯಿ ಅಂಬೇಡ್ಕರ್ ಸಂಘದ ಅಧ್ಯಕ್ಷೆ ಪುಷ್ಪಾ ಮರಿಸ್ವಾಮಿ, ಗೌರವ ಅಧ್ಯಕ್ಷೆ ಮಂಜುಳಾ ಬಸವರಾಜು, ಖಜಾಂಚಿ ಮಂಗಳಮ್ಮ, ಮಹಿಳಾ ಒಕ್ಕೂಟದ ಅಧ್ಯಕ್ಷೆ ಎ.ನಾಗಮಣಿ, ಪ್ರಧಾನ ಕಾರ್ಯದರ್ಶಿ ಶಾಹಿದಾಬಾನು, ನಗರಸಭಾ ಮಾಜಿ ಉಪಾಧ್ಯಕ್ಷೆ ವಹೀದಾ ಬಾನು, ವುಮೆನ್ಸ್ ಇಂಡಿಯಾ ಮೂಮೆಂಟ್ ಆಯಿಶಾಹುದಾ ಭೌದ್ಧ ಉಪಾಸಕರಾದ ಮಲ್ಲಿಕ, ರೇಣುಕಾ, ವೀಣಾ, ಶ್ವೇತ, ನಾಗಮಣಿ, ಪಾರ್ವತಿ, ಪವಿತ್ರ ಭಾಗವಹಿಸಿದ್ದರು.

# ಕೃಷಿಕ ದಂಪತಿಗೆ ದೆಹಲಿ ಗಣರಾಜ್ಯೋತ್ಸವಕ್ಕೆ ಆಹ್ವಾನ

**ಚಾಮರಾಜನಗರ:** ಜ.26ರಂದು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವಕ್ಕೆ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ವಡ್ಡಗೆರೆ ಗ್ರಾಮದ ಕೃಷಿಕ ಚಿನ್ನಸ್ವಾಮಿ ಹಾಗೂ ಪತ್ನಿ ಕೆ.ಎಸ್. ಗಿರಿಕನ್ಯೆ ಅವರಿಗೆ ಕೇಂದ್ರ ಸರ್ಕಾರ ಆಹ್ವಾನ ನೀಡಿದೆ. ಈ ಬಾರಿ ದೆಹಲಿಯಲ್ಲಿ ಗಣರಾಜ್ಯೋತ್ಸವ ಪೆರೇಡ್ ಅತ್ಯಂತ ವಿಶೇಷವಾಗಿರಲಿದ್ದು, ಇದರಲ್ಲಿ ದೇಶದ 1500ಕ್ಕೂ ಅಧಿಕ ರೈತರನ್ನು ಆಹ್ವಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ವಡ್ಡಗೆರೆ ಗ್ರಾಮದ ಕೃಷಿಕ ದಂಪತಿ ಚಿನ್ನಸ್ವಾಮಿ ಹಾಗೂ ಗಿರಿಕನ್ಯೆ ಅವರು ದೆಹಲಿಯ ಕರ್ತವ್ಯ ಪಥದಲ್ಲಿ ಆಯೋಜಿಸಲಾಗಿರುವ 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.



ಚಿನ್ನಸ್ವಾಮಿ




ಕೆ.ಎಸ್.ಗಿರಿಕನ್ಯೆ

ಕೇಂದ್ರ ಸರ್ಕಾರ ನಡೆಸುತ್ತಿರುವ ವಿವಿಧ ಕೃಷಿ ಮತ್ತು ರೈತ ಕಲ್ಯಾಣ ಯೋಜನೆ ಲಾಭ ಪಡೆಯುತ್ತಿರುವ ರೈತರನ್ನು ಈ ವಿಶೇಷ ಕಾರ್ಯಕ್ರಮಕ್ಕೆ ಆಹ್ವಾನಿಸಿರುವುದು ವಿಶೇಷವೆನಿಸಿದೆ.

ಈ ಹಿನ್ನೆಲೆಯಲ್ಲಿ ಜ.25ರಂದು ಪತ್ನಿ ಸಮೇತ ದೆಹಲಿಗೆ ಕೇಂದ್ರ ಸರ್ಕಾರದ ಜಲಶಕ್ತಿ ಸಚಿವಾಲಯವು ಚಿನ್ನಸ್ವಾಮಿ ಹಾಗೂ ಪತ್ನಿಯನ್ನು ಆಹ್ವಾನಿಸಿದೆ. ರಾಜ್ಯದಿಂದ ಆಯ್ಕೆಯಾಗಿರುವ ಈ ಕೃಷಿಕ ದಂಪತಿ ಅಂದು ವಿಮಾನದ ಮೂಲಕ ದೆಹಲಿಗೆ ತೆರಳಲಿದ್ದು, ಜ.28ರಂದು ರಾಜ್ಯಕ್ಕೆ ವಾಪಸ್ ಆಗಲಿದ್ದಾರೆ.

# ಇತರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ನಿರುದ್ಯೋಗಿಗಳು ಕಡಿಮೆ

**ಚಾಮರಾಜನಗರ:** ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಕಡಿಮೆ ಇದೆ ವಿದ್ಯಾಭ್ಯಾಸ ಮತ್ತು ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಕೌಶಲ ತರಭೇತಿ ಸಂಸ್ಥೆಗಳು ಸಹಕಾರಿಯಾಗಿವೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬಿ. ಹೀರಾಲಾಲ್ ತಿಳಿಸಿದರು.



ಸಂತೇಮರಹಳ್ಳಿಯಲ್ಲಿ ಕಂಪ್ಯೂಟರ್ ಹಾಗೂ ವಿವಿಧ ಕೌಶಲಗಳ ತರಬೇತಿ ಪಡೆದ ಯುವಕ, ಯುವತಿಯರಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸುತ್ತಿರುವುದು.

ತಾಲೂಕಿನ ಸಂತೇಮರಹಳ್ಳಿಯಲ್ಲಿ ಡಿ.ಎಂ. ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಕಂಪ್ಯೂಟರ್ ಹಾಗೂ ವಿವಿಧ ಕೌಶಲಗಳ ತರಬೇತಿ ಪಡೆದ ಯುವಕ, ಯುವತಿಯರಿಗೆ ಪ್ರಮಾಣ ಪತ್ರ ವಿತರಣೆ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಣೆ ಸಮಾರಂಭವನ್ನು ಉದ್ಘಾಟಿಸಿ, ಕೌಶಲ ತರಭೇತಿ ಪಡೆದವರಿಗೆ ಪ್ರಮಾಣಪತ್ರಗಳನ್ನು ನೀಡಿ ಅವರು ಮಾತನಾಡಿದರು.

ದೇಶದ ಒಟ್ಟು 120 ಕೋಟಿ ಜನಸಂಖ್ಯೆಯ ಪೈಕಿ ಕರ್ನಾಟಕದಲ್ಲಿ 6.6 ಕೋಟಿ ಜನರು ಇದ್ದಾರೆ. ನಮ್ಮ ರಾಜ್ಯದಲ್ಲಿ ಇಷ್ಟು ಜನರು ಜೀವನ ಮತ್ತು ಉದ್ಯೋಗ ಪಡೆಯುವ ನಿಟ್ಟಿನಲ್ಲಿ ಹೆಚ್ಚಿನ ಪ್ರಮಾಣವನ್ನು ಹೊಂದಿದೆ. ಇತರೇ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ದೊಡ್ಡ ಮಟ್ಟದಲ್ಲಿ ನಿರುದ್ಯೋಗ ಸಮಸ್ಯೆ ಕಾಡುತ್ತಿಲ್ಲ. ಸರ್ಕಾರಿ ಉದ್ಯೋಗ, ಖಾಸಗಿ ಉದ್ಯೋಗ ಹಾಗೂ ಸ್ವಾವಲಂಬನೆ ಜೀವನ ನಡೆಸುವ ಕೌಶಲ್ಯವನ್ನು ಕಲಿತು ಜೀವನ ರೂಪಿಸಿಕೊಂಡಿದ್ದಾರೆ. ಇದಕ್ಕೆ ಕಾರಣ ಇಂಥ ಕೌಶಲ ತರಬೇತಿ ಕೇಂದ್ರಗಳು ನಿರುದ್ಯೋಗಿ ಯುವಕ ಯುವತಿಯರಿಗೆ ತರಬೇತಿ ನೀಡಿ, ಅವರು ಯಾವುದಾದರು ಒಂದು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತಿದ್ದಾರೆ. ಇದಕ್ಕೆ ಹೆಚ್ಚಿನ ಉತ್ತೇಜವನ್ನು ಸಹ ಸರ್ಕಾರಗಳು ನೀಡುತ್ತಿವೆ ಎಂದರು.

ಎಸ್ಪಿ ಡಾ.ಬಿ.ಕವಿತಾ ಮಾತನಾಡಿ, ಉನ್ನತ ಹುದ್ದೆಗಳನ್ನು ಪಡೆದುಕೊಳ್ಳಬೇಕಾದರೆ ಹೆಚ್ಚಿನ ಜ್ಞಾನವನ್ನು ಹೊಂದಬೇಕು. ಕಠಿಣ ಪರಿಶ್ರಮ ಮತ್ತು ಏಕಾಗ್ರತೆ ಗುರಿ ಇದ್ದರೆ ಜೀವನದಲ್ಲಿ ಯಶಸ್ಸು ಪಡೆಯಲು ಸಾಧ್ಯ. ಮಕ್ಕಳು ದುರಾಭ್ಯಾಸ ಹಾಗೂ ಇತರೇ ದುಷ್ಚಟಗಳಿಂದ ದೂರ ಇರಬೇಕು. ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಇಂಥ ಕೌಶಲ ತರಬೇತಿ ಸಂಸ್ಥೆಗಳು ಸಹಕಾರಿಯಾಗುತ್ತಿದೆ. ಜೊತೆಗೆ ತಾವೆಲ್ಲರು ಜೀವನದಲ್ಲಿ ಒಳ್ಳೆಯ ಗುರಿಯನ್ನು ಇಟ್ಟುಕೊಂಡು ಮುನ್ನಡೆಯಬೇಕು. ಮೊಬೈಲ್‌ಗಳಿಂದ ಹೆಚ್ಚಿನ ಉಪಯುಕ್ತ ಮಾಹಿತಿಗಳು ದೊರೆಯುತ್ತದೆ. ಇದನ್ನು ತಮ್ಮ ಜೀವನಕ್ಕೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ರಂಗಭೂಮಿ ಹಿರಿಯ ಕಲಾವಿದ ಎಂ.ಪಿ. ರಾಜಪ್ಪ, ಸಬ್‌ಇನ್ಸ್‌ಪೆಕ್ಟರ್ ಟಿ.ಎಂ. ತಾಜಾವುದ್ದೀನ್, ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಸಮಾಜ ಸೇವಕರಾದ ಕೊಳ್ಳೇಗಾಲದ ಪ್ರೇಮಲತಾ ಕೃಷ್ಣಮೂರ್ತಿ, ಟ್ರಸ್ಟ್‌ನ ಗೌರವ ಸಲಹೆಗಾರ ಜಯಶಂಕರ್, ಶಿವಕುಮಾರ್ ಬೆಳ್ಳಿತಟ್ಟೆ, ಸಿಬ್ಬಂದಿಗಳು ಇತರರು ಇದ್ದರು.

■ಬನ್ನೂರು ಕೆ.ರಾಜು
ಸಾಹಿತಿ-ಪತ್ರಕರ್ತ


# ಸಂಗೀತ ರತ್ನ ಪಿಟೀಲು ಟಿ.ಚೌಡಯ್ಯ




'ಪಿಟೀಲು ಟಿ.ಚೌಡಯ್ಯ' ಇವತ್ತಿಗೂ ಕನ್ನಡ ನಾಡಿನಲ್ಲಷ್ಟೆ ಅಲ್ಲದೆ ದೇಶದ ಸಂಗೀತ ಲೋಕದಲ್ಲಿ 'ಪಿಟೀಲು' ಎಂದ ತಕ್ಷಣ ಥಟ್ಟನೆ ನೆನಪಿಗೆ ಬರುವ ಹೆಸರಿದು. ಚೌಡಯ್ಯನವರ ಇನಿಷಿಯಲ್ 'ಟಿ' ಎಂದರೆ ತಿರುಮಕೂಡಲು ನರಸೀಪುರ. ಪಿಟೀಲು ನುಡಿಸುವುದಕ್ಕೆಂದೇ ಹುಟ್ಟಿದಂತಿದ್ದ ಕರ್ನಾಟಕದ ತಿರುಮಕೂಡಲು ನರಸೀಪುರದ ಸುಪುತ್ರರಾದ ಸಂಗೀತ ರತ್ನ ಟಿ.ಚೌಡಯ್ಯನವರು ತಮ್ಮ ಕಲಾಪ್ರೌಢಿಮೆ, ಸಂಗೀತ ಪ್ರತಿಭೆಯನ್ನು ಕನ್ನಡನಾಡು ಹಾಗೂ ಭಾರತದಾದ್ಯಂತ, ಅಷ್ಟೇ ಏಕೆ ಜಗತ್ತಿನಾದ್ಯಂತ ಪ್ರಸಿದ್ದರು.

ಅವರು 'ಸರಸ್ವತಿಯ ಅವತಾರ'. ಪಿಟೀಲು ವಾದನದಲ್ಲಿ 'ನಭೊತೋನ ಭವಿಷ್ಯತಿ' ಇತಿಹಾಸ ನಿರ್ಮಿಸಿದ ಸಿದ್ಧಿ ಪುರುಷರು. ಅವರ ಅಭೂತ ಪೂರ್ವ ಸಂಗೀತ ಸಿದ್ಧಿ ಲೋಕವನ್ನೇ ಬೆರಗುಗೊಳಿಸಿದೆ. ಇಂಥ ನಾದ ಪ್ರಪಂಚದ 'ಧ್ರುವತಾರೆ' ಕರ್ನಾಟಕದ ಹಾಗೂ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಅಮರತ್ವ ಪಡೆದಿದ್ದಾರೆ. ದೇಶದ ಕೋಟಿ ಕೋಟಿ ಕಲಾರಸಿಕರ ಹೃನ್ಮನಗಳಲ್ಲಿ ವಿರಾಜಿಸಿದ್ದಾರೆ. ಪಿಟೀಲು ವಾದನದಲ್ಲಿ ಇವರ ಮಟ್ಟಕ್ಕೆ ಇನ್ನೊಬ್ಬರನ್ನು ಹೆಸರಿಸುವುದು ಅಷ್ಟು ಸುಲಭವಲ್ಲ. ಅಂಥ ಸಾಟಿಯಿಲ್ಲದ ಪಿಟೀಲು ಸಾರ್ವಭೌಮರಿವರು, ನರಸೀಪುರದ ಪಿಟೀಲು ನಾದಕ್ಕೆ ಜಾಗತಿಕ ಮನ್ನಣೆಯನ್ನು ತಂದುಕೊಟ್ಟವರು.

ಪಿಟೀಲು ವಾದನಕ್ಕೆ ಹೊಸ ಆಯಾಮಗಳನ್ನು ಸೃಷ್ಟಿಸಿದ ಚೌಡಯ್ಯನವರು ಜನಿಸಿದ್ದು 1894ರ ಜನವರಿ 1 ರಂದು. ಚೌಡಯ್ಯನವರ ಜನ್ಮ ಸ್ಥಳ ಮೈಸೂರು ಜಿಲ್ಲೆಯ ಚಾರಿತ್ರಿಕ ನೆಲ ತಿರುಮಕೂಡಲು ನರಸೀಪುರ. ತಂದೆ ಆಗಸ್ತೇಗೌಡರು. ವೃತ್ತಿಯಲ್ಲಿ ಕೃಷಿಕರು. ತಾಯಿ ಸುಂದರಮ್ಮ, ಮಹಾ ಸಂಸ್ಕೃತಿ ಚಿಂತಕರು. ತಂದೆ-ತಾಯಿಯರಿಬ್ಬರೂ ಸಂಗೀತ ಪ್ರಿಯರಾಗಿದ್ದರು. ಚೌಡಯ್ಯನವರಿಗೆ ಬಾಲ್ಯದಿಂದಲೇ ಹಾಡಿನ ಗೀಳು. ಪುಸ್ತಕದ ಓದಿಗಿಂತ ಪದಗಳನ್ನು ಹಾಡುವ ಹುಮ್ಮಸ್ಸು. ತಂದೆ-ತಾಯಿಯರು ಹಾಡು ಹೇಳಿಕೊಳ್ಳುತ್ತಿದ್ದರೆ ಶ್ರದ್ಧೆಯಿಂದ ಕೇಳುವ ತಲ್ಲೀನತೆ. ಹೀಗೆ ಬಾಲಕ ಚೌಡಯ್ಯನವರ ಸಂಗೀತದ ಒಲವು ಹುಟ್ಟು ಗುಣವಾಗಿ ಬಂದಿತ್ತು. ಮುಂದೊಂದು ದಿನ ದೊಡ್ಡ ಸಂಗೀತಗಾರನಾಗಲು ಆಗಲೇ ಮುನ್ನಡಿ ಬರೆದಿತ್ತು. ಒಮ್ಮೆ ಬಾಲಕ ಚೌಡಯ್ಯ ನದಿ ತೀರದಲ್ಲಿ ದೋಣಿಯ ಆಗಮನದ ನಿರೀಕ್ಷೆಯಲ್ಲಿ ತನಗೆ ಬಂದಂತೆ ಹಾಡುತ್ತಿರುವಾಗ ಅಲ್ಲೇ ಇದ್ದ ಸೋಸಲೆ ವ್ಯಾಸರಾಯಮಠದ ಸ್ವಾಮಿಗಳೊಬ್ಬರು ಬಾಲಕನ ಕಂಠ ಸಿರಿಯನ್ನು ಕಂಡು ಬೆರಗಾಗುತ್ತಾರೆ. ಸಂಗೀತ ಕಲಿಯಲು ಬಾಲಕನನ್ನು ಪ್ರೋತ್ಸಾಹಿಸಿ, ಆತನ ತಂದೆ-ತಾಯಿಗಳಿಗೂ ಬಾಲಕ ಚೌಡಯ್ಯನಿಗೆ ಸಂಗೀತ ಕಲಿಕೆ ವಾತಾವರಣ ರೂಪಿಸಿಕೊಡಲು ಪ್ರೇರೇಪಿಸುತ್ತಾರೆ. ಬಾಲಕನಿಗೆ ಸಂಬಂಧಿಯೊಬ್ಬರ ಬಳಿ ಸಂಗೀತ ಕಲಿಕೆಗೆ ಏರ್ಪಾಡಾಗಿ ಮುಂದೆ ಆ ಕಾಲದ ಸಂಗೀತಗಾರರಾದ ಸುಬ್ಬಣ್ಣ, ರಾಮಣ್ಣ ಎಂಬ ಗುರುಗಳ ಬಳಿ ಸಂಗೀತ ಪಾಠ ಮುಂದು ವರಿಕೆಗೆ ವ್ಯವಸ್ಥೆಯಾಗುತ್ತದೆ. ಆ ವೇಳೆಗಾಗಲೇ ಮೈಸೂರಿನ ಬಿಡಾರಂ ಕೃಷ್ಣಪ್ಪನವರ ಖ್ಯಾತಿ ಸಂಗೀತ ಲೋಕದಲ್ಲಿ ನಾಡಿನಾದ್ಯಂತ ಹೆಸರಾಗಿತ್ತು.

ಯೋಗಾಯೋಗವೆಂಬಂತೆ ಬಾಲಕ ಚೌಡಯ್ಯ ಸಂಗೀತ ಕಲಿಯಲು ಅವತ್ತಿನ ಕಾಲದ ಸಂಗೀತ ದಿಗ್ಗಜ ಬಿಡಾರಂ ಕೃಷ್ಣಪ್ಪನವರ ಬಳಿ ಪಟ್ಟ ಶಿಷ್ಯನಾದ. ಆಗ ಆತನಿಗೆ ಕೇವಲ ಹದಿನಾರು ವರ್ಷ. ಗುರು ನಾದಬ್ರಹ್ಮ ಬಿಡಾರಂ ಕೃಷ್ಣಪ್ಪನವರ ಬಳಿ ಗುರುಕುಲ ವಾಸದಲ್ಲಿ 1910-1918ರ ಅವಧಿಯಲ್ಲಿ ಬಾಲಕ ಚೌಡಯ್ಯ ಸಂಗೀತಜ್ಞಾನ ಪಡೆದದ್ದು ಅಪಾರ, ಕಲಾಜ್ಞಾನನಿಧಿಗಾಗಿ, ಸಂಗೀತ ಸಿದ್ಧಿಗಾಗಿ ಬಾಲಕ ಚೌಡಯ್ಯ ನಡೆಸಿದ ಸಾಧನೆ ಅದ್ಭುತವಾದದ್ದು. ದಿನಕ್ಕೆ ಹನ್ನೆರಡು ಗಂಟೆಗಳಂತೆ ಎಂಟು ವರ್ಷಗಳ ಕಾಲ ಸತತವಾದ ಅಭ್ಯಾಸ. ಇದೇ ಅವರಿಗೆ ಸಂಗೀತ ಲೋಕದಲ್ಲಿ ನಡೆಯಲು ಹೆದ್ದಾರಿ ತೆರೆದುಕೊಟ್ಟಿತು.

ಬಿಡಾರಂ ಕೃಷ್ಣಪ್ಪನವರ ಬಳಿ ಶಿಷ್ಯವೃತ್ತಿಗೆ ಸೇರಿದ ವರ್ಷದಲ್ಲೇ ಶ್ರೀ ಶಿವಗಂಗೆ ಸ್ವಾಮೀಜಿಗಳ ಸನ್ನಿಧಿಯಲ್ಲಿ ಗುರುಗಳ ಹಾಡುಗಾರಿಕೆಗೆ ಶಿಷ್ಯನ ಪಿಟೀಲು ವಾದನ, ಸಭಿಕರ ಅಪಾರ ಮೆಚ್ಚುಗೆ. ಶಿಷ್ಯನ ಪ್ರವೀಣತೆಗೆ ಗುರು ನಿಬ್ಬೆರಗು. ಕನ್ನಡದ ಆಸ್ತಿ ಮಾಸ್ತಿಯವರ ಮನೆಯಲ್ಲಿ ನಡೆದ ಸಂಗೀತ ಕಚೇರಿಯಲ್ಲೂ ಟಿ. ಚೌಡಯ್ಯನವರು ವಿದ್ವನ್ಮಣಿಗಳ ಪ್ರಶಂಸೆಗೆ ಪಾತ್ರ, ಪ್ರತಿಯೊಬ್ಬ ಮಹನೀಯರಿಂದಲೂ ಶಹಭಾಶ್‌ಗಿರಿ. ನಿರ್ಲಿಪ್ತ ವ್ಯಕ್ತಿತ್ವ ಚೌಡಯ್ಯನವರದು.

ಗಾನಾನಂದ ದಲ್ಲಿ ಸಂತೃಪ್ತಿ ಪಡೆಯುತ್ತಿದ್ದ ಮಹಾಚೇತನ ಅವರು. ಪಿಟೀಲು ಹಿಡಿದು ತಂತಿ ಮೀಟುತ್ತಾ ಕುಳಿತರೆ ಸಾಕು ಜಗತ್ತನ್ನೇ ಮರೆತು ಬಿಡುತ್ತಿದ್ದರು. ಪಿಟೀಲಿಗೂ ಚೌಡಯ್ಯ ನವರಿಗೂ ಅಂಥಾ ಅವಿನಾಭಾವ ಸಂಬಂಧ. ಜಗತ್ತನ್ನೇ ಬೇಕಾದರೂ ಬಿಟ್ಟೇನು. ಆದರೆ ಪಿಟೀಲನ್ನು ಮಾತ್ರ ಬಿಡಲಾರೆ ಎಂಬ ಭಾವ ಅವರನ್ನು ಬದುಕಿನುದ್ದಕ್ಕೂ ಬಂಧಿಸಿತ್ತು. ಗುರು ಬಿಡಾರಂ ಕೃಷ್ಣಪ್ಪ ಹೋದೆಡೆಯಲ್ಲೆಲ್ಲಾ ಜೊತೆಗೂಡಿ ಸಂಗೀತ ಕಚೇರಿಗಳಲ್ಲಿ ಪಕ್ಕ ವಾದ್ಯಗಾರರಾಗಿ ಭಾಗವಹಿಸಿದ ಹಿರಿಮೆ ಚೌಡಯ್ಯನವರದು. ದಕ್ಷಿಣ ಭಾರತದ ಸುಪ್ರಸಿದ್ಧ ಸಂಗೀತಜ್ಞರ ಪರಿಚಯ ಲಾಭ. 1912ರಲ್ಲಿ ಪೊಲ್ಲಾಚಿಯಲ್ಲಿ ಟಿ. ಚೌಡಯ್ಯನವರು ಮುಸಿರಿ ಸುಬ್ರಹ್ಮಣ್ಯಂ ಅವರ ಗಮನ ಸೆಳೆದು ಪ್ರಶಂಸೆಗೆ ಪಾತ್ರ, ಮುಂದೆ ನೀನು ಸಂಗೀತ ಲೋಕದಲ್ಲಿ ಬಹಳ ಎತ್ತರದಲ್ಲಿ ಬೆಳೆಯುತ್ತಿಯೆ ಎಂಬ ಹಾರೈಕೆಯ ಶ್ಲಾಘನೆ. ಸಂಗೀತ ಕ್ಷೇತ್ರದಲ್ಲಿ ಪಿಟೀಲು ವಾದಕರು 1927ರವರಗೆ ಹಿಂದಿನಿಂದ ರೂಢಿಯಲ್ಲಿದ್ದ ನಾಲ್ಕು ತಂತಿಯ ಪಿಟೀಲು ನುಡಿಸುತ್ತಿದ್ದರು. ಆದರೆ ಚೌಡಯ್ಯನವರು ಪ್ರಯೋಗಶೀಲರಾಗಿ ಐದು ತಂತಿಯ ಪಿಟೀಲು ನುಡಿಸಿದಾಗ ಇಡೀ ಸಂಗೀತ ಲೋಕವೇ ಬೆಕ್ಕಸ ಬೆರಗಾಗಿ ನೋಡಿತು. ಮುಂದೆ ಏಳು ತಂತಿಗಳ ಪಿಟೀಲು ನುಡಿಸುವ ಪ್ರಯೋಗಕ್ಕೆ ಗುರುವಿನ ಪ್ರೋತ್ಸಾಹ. ಹೀಗೆಯೇ ಪ್ರಯೋಗ ಮುನ್ನಡೆದಂತೆ 19 ತಂತಿಗಳ ಪಿಟೀಲು ನುಡಿಸಿ ಅದುವರೆಗೆ ಸಂಗೀತ ಪ್ರಪಂಚ ಕಂಡು ಕೇಳರಿಯದಂತಹ ನೂತನ ಅವಿಷ್ಕಾರದ ಮಹದದ್ಭುತ ಸಾಧನೆ ಮಾಡಿದ ಕೀರ್ತಿ ಚೌಡಯ್ಯನವರದು.


ವಾಗ್ಗೇಯಕಾರರೂ ಆಗಿದ್ದ ಚೌಡಯ್ಯನವರು ಕನ್ನಡ, ತೆಲುಗು, ಸಂಸ್ಕೃತಗಳಲ್ಲಿ 'ತ್ರಿಮಕುಟವಾಸ' ಎಂಬ ಅಂಕಿತದಿಂದ ಹಲವು ಕೃತಿಗಳನ್ನೂ, ತಿಲ್ಲಾನಗಳನ್ನೂ ರಚಿಸಿದ ಹಿರಿಮೆಯಿಂದ ನಾದ ಲೋಕವನ್ನು ಶ್ರೀಮಂತಗೊಳಸಿದ್ದಾರೆ.

'ಭಾರತದ ಕೋಗಿಲೆ' ಎಂ.ಎಸ್. ಸುಬ್ಬಲಕ್ಷ್ಮಿ, ಸಿ.ಆರ್.ಮಣಿ ಅಯ್ಯರ್, ವಿ.ರಾಮರತ್ನಂ, ದೀಪಕ್‌ರಾಯ್ ಮೊದಲಾದ ಪ್ರಸಿದ್ಧ ಕಲಾವಿದರು ಚೌಡಯ್ಯನವರ ಮಾರ್ಗದರ್ಶನ ಪಡೆದ ಭಾಗ್ಯಶಾಲಿಗಳು. ಎಂ.ಎಸ್. ಸುಬ್ಬಲಕ್ಷ್ಮಿಯವರ ಹಾಡುಗಾರಿಕೆಗೆ ಪಕ್ಕವಾದ್ಯ ನುಡಿಸಿ ಸಂಗೀತ ಕ್ಷೇತ್ರದಲ್ಲಿ ಹೊಸ ದಾಖಲೆಯನ್ನೇ ನಿರ್ಮಿಸಿದ ಚೌಡಯ್ಯನವರು ಚಲನಚಿತ್ರ ನಟರಾಗಿಯೂ ಚರಿತ್ರೆ ನಿರ್ಮಿಸಿದವರು. ಸಾವಿರದೊಂಬೈನೂರ ಅರವತ್ತರ ದಶಕದಲ್ಲೇ 'ವಾಣಿ' ಎಂಬ ಕನ್ನಡ ಚಿತ್ರದಲ್ಲಿ ನಾಯಕನಟರಾಗಿ ಅದೂ ದ್ವಿಪಾತ್ರಧಾರಿಯಾಗಿ ಅಭಿನಯಿಸಿ ಸೈಎನಿಸಿಕೊಂಡದ್ದು ಈಗ ಇತಿಹಾಸ.


1967 ಜನವರಿ 19ರಂದು 'ನಾದಲೋಕದಲ್ಲಿ ಲೀನರಾದ ನಾದ ಋಷಿ ಚೌಡಯ್ಯನವರು ಅಸಂಖ್ಯಾತ ಪ್ರಶಸ್ತಿ, ಸನ್ಮಾನ, ಮನ್ನಣೆಗಳಿಗೆ ಪಾತ್ರರಾದವರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ 'ಸಂಗೀತ ರತ್ನ' ಬಿರುದು, ಅಂದಿನ ಮದರಾಸು ಸಂಗೀತ ಅಕಾಡೆಮಿಯ ಸಂಗೀತ ಸಮ್ಮೇಳನದ ಅಧ್ಯಕ್ಷತೆ. 'ಸಂಗೀತ ಕಲಾನಿಧಿ' ಗೌರವ, ರಾಜ್ಯ ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿಗಳ ಬಹುಮಾನ, ರಾಜ್ಯ ವಿಧಾನ ಪರಿಷತ್ತಿನ ಗೌರವ ಸದಸ್ಯತ್ವ, ಇದಲ್ಲದೆ 'ಗಾನಕಲಾ ಸಿಂಧು', ಸಂಗೀತ ರತ್ನಾಕರ' ಪ್ರಶಸ್ತಿಗಳು, 1962ರಲ್ಲಿ ಕಲ್ಕತ್ತದಲ್ಲಿ ಜರುಗಿದ 'ಟಿ. ಚೌಡಯ್ಯ ಸುವರ್ಣ ಮಹೋತ್ಸವ ಸಮಾರಂಭ'' ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಇವೆಲ್ಲವೂ ಇವರ ಮಹತ್ಸಾಧನೆಗೆ ಸಂದ ಮಹಾ ಗೌರವಗಳು. ಇದಿಷ್ಟೇ ಅಲ್ಲದೆ ಇದೆಲ್ಲಕ್ಕೂ ಕಳಶ ಪ್ರಾಯವಾಗಿ ಇವರ ಗೌರವಾರ್ಥ ರಾಜಧಾನಿ ಬೆಂಗಳೂರಿನಲ್ಲಿ ಪಿಟೀಲಿನ ಆಕಾರದಲ್ಲೇ ಚೌಡಯ್ಯ ಸ್ಮಾರಕ ಭವನ ನಿರ್ಮಿಸಲಾಗಿದೆ.

## ಮಕ್ಕಳ ಚಿತ್ರಕಥೆ: 'ನೀನೂ ಕೂಡ ಸತ್ಯ ಹೇಳಿದರೆ ಒಳಿತು..!'



■ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199


ಒಮ್ಮೆ ನಾಲ್ವರು ವ್ಯಾಪಾರಿಗಳು ಸೇರಿ ವ್ಯಾಪಾರಕ್ಕೆ ಹೊರಟರು. ಅವರಲ್ಲಿ ಓರ್ವ ವ್ಯಾಪಾರಿಗೆ ಆರೋಗ್ಯ ಹದಗೆಟ್ಟಿತು. ಕೊನೆಗೆ ಸಾವನ್ನಪ್ಪಿದನು. ಮೂವರೂ ಸೇರಿ ಮರುಭೂಮಿಯಲ್ಲೇ ಅವನ ಅಂತ್ಯಕ್ರಿಯೆ ಮಾಡಿ ಮುಗಿಸಿದರು. ಸಾವಿಗೀಡಾದ ಆ ವ್ಯಾಪಾರಿಯ ಸಂಪತ್ತನ್ನು ಮೂವರು ಹಂಚಿಕೊಂಡರು. ಆ ನಿರ್ಜನ ಮರುಭೂಮಿಯಲ್ಲಿ ಈ ರಹಸ್ಯ ನಮ್ಮನ್ನು ಬಿಟ್ಟರೆ ಯಾರಿಗೂ ತಿಳಿಯಲಾರದು ಎನ್ನುತ್ತಾ ವ್ಯಾಪಾರ ಮುಗಿಸಿ ಊರಿಗೆ ತೆರಳಿದರು.




ಸಾವಿಗೀಡಾದ ವ್ಯಕ್ತಿಯ ಮನೆಗೆ ಹೋಗಿ, ನಿಮ್ಮವರು ಖಾಯಿಲೆಗೊಂಡು ದಾರಿಯಲ್ಲಿ ತೀರಿಕೊಂಡರು. ನಾವೇ ಅವರ ಅಂತ್ಯಕ್ರಿಯೆಯನ್ನು ನೆರವೇರಿಸಿದೆವು. ಅವರ ಬಳಿ ಏನೂ ಸಂಪತ್ತಿರಲಿಲ್ಲ ಎಂದು ಹೇಳಿದರು. ಮನೆಯವರು ಇದಕ್ಕೆ ಒಪ್ಪಲಿಲ್ಲ. ಅವರ ಬಳಿ ಸಂಪತ್ತು ಇತ್ತು, ದಯವಿಟ್ಟು ಹಿಂತಿರುಗಿಸಿ ಎಂದು ಒತ್ತಾಯ ಮಾಡಿದರೂ ಅವರುಗಳು ಒಪ್ಪಲಿಲ್ಲ. ಅವರ ಬಳಿ ಏನೂ ಇರಲಿಲ್ಲವೆಂದೇ ವಾದಿಸಿಬಿಟ್ಟರು. ಕೊನೆಗೆ ಮೃತ ವ್ಯಕ್ತಿಯ ಮಗ ಆ ನಗರದ ರಾಜನ ಬಳಿ ಹೋಗಿ ಎಲ್ಲಾ ವಿಷಯವನ್ನು ಹೇಳಿದ.




ಈ ಪ್ರಕರಣವನ್ನು ರಾಜ ತನ್ನ ಚಾಣಾಕ್ಷ ಮಂತ್ರಿಗೆ ಒಪ್ಪಿಸಿದ. ಮಂತ್ರಿಯು ಆ ವ್ಯಾಪಾರಿಗಳನ್ನು ಕರೆದು ಕೇಳಿದಾಗ ನಾವು ಅವರ ಹಣವನ್ನು ತೆಗೆದುಕೊಂಡೇ ಇಲ್ಲಾ...! ಎಂದು ಪ್ರಮಾಣ ಮಾಡಿ ಹೇಳಿಬಿಟ್ಟರು. ಸರಿಯಾದ ಸಾಕ್ಷ್ಯಾದಾರಗಳು ಸಿಗುವ ತನಕ ತೀರ್ಮಾನ ಮುಂದೂಡಬೇಕೆಂದು ನಿಶ್ಚಯಿಸಿ ನಾವು ಹೇಳಿಕಳುಹಿಸಿದಾಗ ಬರಬೇಕೆಂದು ಆಜ್ಞಾಪಿಸಿ ಅವರನ್ನೆಲ್ಲಾ ಮಂತ್ರಿ ಕಳುಹಿಸಿಬಿಟ್ಟ.



ಸ್ವಲ್ಪ ದಿನಗಳ ನಂತರ ಮಂತ್ರಿಗೆ ಒಂದು ಉಪಾಯ ಹೊಳೆಯಿತು. ಮೂವರು ವ್ಯಾಪಾರಿಗಳನ್ನೂ ಮತ್ತೊಮ್ಮೆ ತನ್ನ ಬಳಿ ಕರೆಯಿಸಿಕೊಂಡು ಮೂವರನ್ನೂ ದೂರ ದೂರ ನಿಲ್ಲಿಸಿದನು. ಒಬ್ಬರು ಆಡಿದ ಮಾತು ಮತ್ತೊಬ್ಬರಿಗೆ ಕೇಳಿಸದಂತೆ ವಿಚಾರಣೆ ನಡೆಸಿದ, ಇದನ್ನು ನೋಡುತ್ತಿದ್ದ ಪ್ರತಿಯೊಬ್ಬ ವ್ಯಾಪಾರಿ ಎಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡುಬಿಟ್ಟಿದ್ದಾನೊ ಎಂದು ಶಂಕಿಸತೊಡಗಿದರು. ಮೂವರನ್ನೂ ಇದೇ ರೀತಿ ವಿಚಾರಣೆಗೆ ಒಳಪಡಿಸಲಾಯಿತು. ಒಬ್ಬರಿಗೊಬ್ಬರು ನ್ನೊಬ್ಬರು ಮಾತನಾಡಿಕೊಳ್ಳುವ ಅವಕಾಶ ಕಲ್ಪಿಸಲಿಲ್ಲ. ಈಗ ಅವರ ಶಂಕೆ ಇನ್ನೂ ಹೆಚ್ಚಾಗತೊಡಗಿತು. ಬಹುಶಃ ಆತ ಮಂತ್ರಿಯ ಮುಂದೆ ಸತ್ಯ ಹೇಳಿರಬಹುದೆಂದು ಮೂವರೂ ತಮ್ಮಲ್ಲೇ ಊಹಿಸಿಕೊಳ್ಳಲಾರಂಭಿಸಿದರು.



ಮಾರನೆಯ ದಿನ ವಿಚಾರಣೆ ಬಳಿಕ ಮೊದಲನೆಯವನನ್ನು ಕರೆದು "ಉಳಿದವರೆಲ್ಲಾ ಸತ್ಯ ಒಪ್ಪಿಕೊಂಡಿದ್ದಾರೆ... ನೀನೂ ಸತ್ಯ ಹೇಳಿದರೆ ಒಳಿತು..!" ಎಂದು ಮಂತ್ರಿ ಗದರಿಸಿದ, ಆದರೂ ಮೊದಲನೆಯವನು ನಿಜ ಹೇಳಲೇ ಇಲ್ಲ. ಅವನನ್ನು ಸೆರೆಮನೆಗೆ ತಳ್ಳುವಂತೆ ಆಜ್ಞಾಪಿಸಲಾಯಿತು.




ಇದನ್ನು ಕಂಡ ಉಳಿದವರಿಗೆ ಸತ್ಯ ಹೇಳದೆ ವಿಧಿ ಇರಲಿಲ್ಲ. ಹೀಗೆ ಎರಡನೇ ಬಾರಿಗೆ ಎರಡನೆಯವನನ್ನು ಕರೆಯುವ ಮೊದಲೇ ಆತ ತನ್ನೆರಡೂ ಕೈಗಳನ್ನು ಜೋಡಿಸುತ್ತಾ, ಅಳುತ್ತಾ ನಡೆದ ವಿಚಾರಗಳನ್ನೆಲ್ಲಾ ಹೇಳಿಬಿಟ್ಟ. ಬಳಿಕ ಉಳಿದವನೂ ತಪ್ಪೊಪ್ಪಿಕೊಂಡರು.



## ವಾರಭವಿಷ್ಯ

19.01.2025 ರಿಂದ 25.01.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ಕನ್ಯಾ, ತುಲಾ, ವೃಶ್ಚಿಕ, ಕುಜ-ಕಟಕ, ಮಿಥುನ, ಬುಧ-ಧನುಸ್ಸು, ಮಕರ, ಗುರು-ವೃಷಭ, ಶುಕ್ರ-ಕುಂಭ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.




ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಜೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720


### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಕರ್ಮ ಸ್ಥಾನದಲ್ಲಿ ರವಿ ಸಂಚಾರ ಇರುವ ಕಾರಣ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳ ಸಹಯೋಗ ದೊರೆತು ಗುರುತರವಾದ ಬದಲಾವಣೆಯನ್ನು ಕಾಣುವಿರಿ. ಧನಾದಾಯ ಉತ್ತಮವಿರುತ್ತದೆ. ಸ್ಥಿರಾಸ್ತಿ ಖರೀದಿಸುವ ಯೋಗವಿದೆ. ಉತ್ತಮ ಬಾಳ ಸಂಗಾತಿ ದೊರೆಯಲು ಗುರುಬಲವಿದೆ. ನಿರುದ್ಯೋಗಿಗಳಿಗೆ ಸಂತಸದ ಸುದ್ದಿ ಬರುವುದು. ಅಜೀರ್ಣದಿಂದ ಆರೋಗ್ಯ ಕೆಡುವ ಸಂಭವ.

ಶ್ರೀ ಗಜಾನನ ಅರ್ಚನೆ. ಶುಭ ಸಂಖ್ಯೆ-3

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನಿಮಗೆ ಸಂಬಂಧವಿಲ್ಲದ ವಿಷಯಕ್ಕೆ ತಲೆ ಹಾಕಿ ತೊಂದರೆಗೆ ಸಿಲುಕುವಿರಿ. ಯಾವುದೇ ಕೆಲಸವನ್ನು ಸುದೀರ್ಘವಾಗಿ ಯೋಚಿಸಿ ಮಾಡಿ. ಹೊಸ ಬಂಡವಾಳ ಹೂಡಿಕೆಗಳು ಸದ್ಯಕ್ಕೆ ಬೇಡ. ವಾರ ಮಧ್ಯಾನಂತರ ಹಣಕಾಸಿನ ಆದಾಯ ವೃದ್ಧಿಯಾಗುವುದು. ಮಿತವ್ಯಯಿಗಳಾಗಿರಿ. ಭವಿಷ್ಯಕ್ಕೆ ಅನುಕೂಲವಾಗುವುದು. ಸತ್ಸಂಗದಿಂದ ಮನಸ್ಸಿಗೆ ಭಾರ ಕಡಿಮೆಯಾಗುವುದು.

ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ-8

### ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಶುಭ ಕಾರ್ಯಕ್ಕೋಸ್ಕರ ಸಾಕಷ್ಟು ಹಣವನ್ನು ಖರ್ಚು ಮಾಡುವ ಸಾಧ್ಯತೆ ಇದೆ. ವೈಯಕ್ತಿಕ ವಿಷಯಗಳಲ್ಲಿ ಆಶಾವಾದಿಗಳಾಗಿರಿ. ನಿಮ್ಮ ಮನೋಕಾಮನೆ ಈಡೇರುವುದು. ಗೌರವಾನ್ವಿತ ಜನರೊಂದಿಗೆ ಸಂವಹನ ಉಂಟಾಗುವುದು. ಅಪರಿಚಿತ ಜನರಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಕೋಪ ನಡವಳಿಕೆಯಿಂದ ಕುಟುಂಬದಲ್ಲಿ ಅಸಮಾಧಾನ ಉದ್ಭವಿಸಬಹುದು. ನಿಮ್ಮ ಯೋಜನೆಗಳು ಅಸಫಲವಾದೀತು.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-4

### ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ವಾರದಲ್ಲಿ ಅನೇಕ ಗೌರವಾನ್ವಿತ ಜನರೊಂದಿಗೆ ಸಂಪರ್ಕ ದೊರೆಯಲಿದೆ. ನಿಮ್ಮ ಯೋಜನೆಗಳಿಗೆ ಸಾಕಾರ ರೂಪ ನೀಡುವ ಪ್ರಯತ್ನ ಮುಂದುವರೆಯಲಿ. ನೂತನ ಹಣ ಹೂಡಿಕೆ ಮಾಡಲು ಅಡ್ಡಿ ಇಲ್ಲ. ನಿಮ್ಮ ಹಳೆಯ ಹಾಗೂ ಆಪ್ತ ಸ್ನೇಹಿತರು ನಿಮ್ಮ ಕಷ್ಟ ಸಮಯಕ್ಕೆ ಸಹಾಯ ಮಾಡುವರು. ಕೆಲಸದ ಸ್ಥಳದಲ್ಲಿ ಅಸಮಾಧಾನಗಳು ಉದ್ಭವಿಸಬಹುದು. ನಿಮ್ಮ ಆರೋಗ್ಯ ಕಾಪಾಡಿಕೊಳ್ಳಿ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಶುಭ ಕಾರ್ಯಗಳ ಮೇಲೆ ಸಾಕಷ್ಟು ಹಣ ಖರ್ಚು ಮಾಡುವಿರಿ. ಎಲ್ಲಾ ವಿಷಯಗಳಲ್ಲಿ ಆಶಾವಾದಿಗಳಾಗಿ ಚಿಂತಿಸಿ. ಬರುವ ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಿ. ಕುಟುಂಬದವರೊಂದಿಗೆ ಸಾಮರಸ್ಯವಿರಲಿ. ಅವರ ಸಲಹೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ. ಕಟು ಮಾತಿನಿಂದ ಸಂಬಂಧಗಳು ಕೆಡುವುದು. ಸಮಾಜ ಸೇವೆಯಿಂದ ಖ್ಯಾತಿ ಹಾಗೂ ವಾರಕ್ಕೆ ತೆರೆ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-7

### ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಆರಂಭಕ್ಕೆ ಕೈಗೊಂಡ ಕೆಲಸ ಕಾರ್ಯಗಳು ಯಶಸ್ಸಿನ ಹಾದಿಯಲ್ಲಿ ಸಾಗುವುದು. ಎಷ್ಟು ವೇಗವಾಗಿ ಹಣ ನಿಮ್ಮ ಬಳಿ ಬರುತ್ತದೆಯೋ, ಅಷ್ಟೇ ವೇಗವಾಗಿ ಅದನ್ನು ಖರ್ಚು ಮಾಡಲು ಉತ್ಸುಕರಾಗಿರುತ್ತೀರಿ. ಹಠಾತ್ ಒಳ್ಳೆಯ ಸುದ್ದಿಗಳಿಂದ ಸಂತೋಷ ಹಾಗೂ ಗುರಿಯನ್ನು ಸಾಧಿಸಿಕೊಳ್ಳುವಿರಿ. ನಿಮ್ಮ ಸಾಮರ್ಥ್ಯಕ್ಕೆ ತಕ್ಕ ಕೆಲಸ ಹಾಗೂ ಜವಾಬ್ದಾರಿಗಳಲ್ಲಿ ಗುರಿ ಮುಟ್ಟುವಿರಿ.

ಶ್ರೀ ಇಂದ್ರಕೃತ ಲಕ್ಷ್ಮೀ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಜೀವನಕ್ಕೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ಸುಲಭವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ನೀವಿರುವಿರಿ. ಆರ್ಥಿಕ ಪರಿಸ್ಥಿತಿ ಈ ವಾರ ಸ್ವಲ್ಪ ಮಟ್ಟಿಗೆ ನೆಗೆಟಿವ್ ಆಗಿ ಇರುತ್ತದೆ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರಗಳು ನಷ್ಟಕ್ಕೆ ಹೇತುವಾಗುವುದು. ಬೆಳೆದು ನಿಂತ ಮಕ್ಕಳು ನಿಮ್ಮನ್ನು ವಿರೋಧಿಸುವರು. ವಾರಾಂತ್ಯಕ್ಕೆ ಶುಭ ವಾರ್ತೆ ಬಂದು ಉಲ್ಲಾಸದ ಕ್ಷಣಗಳನ್ನು ಅನುಭವಿಸುವಿರಿ.

ಶ್ರೀ ದೇವಿ ಪ್ರಾರ್ಥನೆ. ಶುಭ ಸಂಖ್ಯೆ-6

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

'ಕಬ್ಬಿಣ ಕಾದಾಗ ತಟ್ಟಿಕೊಳ್ಳಬೇಕು' ಎಂಬ ಗಾದೆಯಿದೆ. ಅದರಂತೆ ನಿಮ್ಮ ಜರೂರು ಕೆಲಸಗಳನ್ನು ಪೂರ್ಣಗೊಳಿಸಿಕೊಳ್ಳಲು ಗ್ರಹಗಳು ಅನುಕೂಲವಿದ್ದಾರೆ. ವ್ಯಾಪಾರ, ವ್ಯವಹಾರಗಳಲ್ಲಿ ನಿಮ್ಮ ನಿರೀಕ್ಷೆ ಮೀರಿ ಲಾಭ ಗಳಿಸುವಿರಿ. ದ್ವಿದಳ ಧಾನ್ಯ ವ್ಯಾಪಾರ ವ್ಯವಸ್ಥಿತವಾಗಿ ನಡೆಯುವುದು. ವಿವಾಹಯೋಗ್ಯರಿಗೆ ನಿಶ್ಚಿತಾರ್ಥಗಳು ಉಂಟಾದೀತು. ವಿದ್ಯುತ್ ಅವಘಡಗಳಿಂದ ಜಾಗೃತರಾಗಿರಿ.

ಶ್ರೀ ನರಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-4

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ನಿರೀಕ್ಷಿತ ಧನ ಕೈ ಸೇರುವುದು. ಉತ್ತಮ ಭೋಜನ, ಶಯನ, ಸುಖಗಳೂ ಉಂಟು. ನಿಪುಣತೆಯಿಂದ ಹಾಗೂ ಸಂದರ್ಭೋಚಿತ ಮಾತಿನಿಂದ ನಿಮ್ಮ ಕೆಲಸ ಕೈಗೂಡುವುದು. ಯಾರಲ್ಲೂ ದ್ವೇಷ ಕಟ್ಟಿಕೊಳ್ಳಬೇಡಿ. ಆಸ್ತಿ ವಿಭಾಗ ವಿಚಾರಗಳಲ್ಲಿ ಒಮ್ಮತ ಮೂಡದೆ ಎಳೆದಾಡುವುದು. ರೈತಾಪಿ ಜನರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರೆಯುವುದು. ಮನೆಗೆ ಹೊಸ ಬೆಲೆ ಬಾಳುವ ವಸ್ತು ಬರುವುದು.

ಶ್ರೀ ಗುರುಚರಿತ್ರೆ ಓದಿ. ಶುಭ ಸಂಖ್ಯೆ-8

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಗುರುಬಲವಿದೆ. ಎನ್‌ಕ್ಯಾಷ್ ಮಾಡಿಕೊಳ್ಳಲು ಹಿಂಜರಿಯದಿರಿ. ನಿಮ್ಮ ಐಚ್ಛಿಕ ವಿಷಯಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ಸರ್ಕಾರಿ ಅಧಿಕಾರಿಗಳು ಅಕ್ರಮ ಸಂಪಾದನೆಗೆ ತೊಡಗಿ ತೊಂದರೆಗೆ ಗುರಿಯಾಗುವರು. ಪ್ರಯಾಣ ಸಮಯದಲ್ಲಿ ಮಾರ್ಗ ಮಧ್ಯೆ ಸಂಕಷ್ಟಕ್ಕೆ ಗುರಿಯಾಗುವ ಸಾಧ್ಯತೆ ಇರುತ್ತದೆ. ವಾರಾಂತ್ಯಕ್ಕೆ ಅನಿರೀಕ್ಷಿತ ಖರ್ಚುಗಳು ಎದುರಾಗುವುದು.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ-3

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ವಾರದಲ್ಲಿ ಶುಕ್ರ ಸಂಚಾರ ಶುಭವಿದೆ. ಹಲವು ವಿದ್ಯೆ, ಶಾಸ್ತ್ರಗಳನ್ನು ಕಲಿಯುವ ಹಂಬಲ ಈಡೇರಲಿದೆ. ಶ್ರೀಮತಿಯ ಸಹಕಾರದಿಂದ ಕಷ್ಟ ನಿವಾರಣೆ. ಹೊಸ ಹೂಡಿಕೆಗಳನ್ನು ಮಾಡುವ ಮೊದಲು ಪರಿಣಿತ ಸಲಹೆ ಪಡೆಯಿರಿ. ಅಷ್ಟಮ ಕೇತುವಿನ ಕಾರಣ ವಿಷಾಹಾರ ಸೇವನೆಯಿಂದ ವೈದ್ಯರ ಭೇಟಿ ಅನಿವಾರ್ಯವಾಗಬಹುದು. ಸಂಚಾರಿ ನಿಯಮ ಪಾಲಿಸಿ, ವಾಹನ ಚಲಿಸಿ.

ಶ್ರೀ ಶ್ರೀನಿವಾಸ ದೇವರಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-2

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಸಾಮಾಜಿಕವಾಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ರಫ್ತು ವ್ಯಾಪಾರ ವ್ಯವಹಾರ ನಡೆಸುವವರಿಗೆ ಆದಾಯದಲ್ಲಿ ಹೆಚ್ಚಳವಾಗಲಿದೆ. ಪುಸ್ತಕ ಪ್ರಕಾಶಕರಿಗೆ ಉತ್ತಮ ಕ್ರಮವಾಗಿ ಧನಲಾಭವಾಗುವುದು. ವಾರ ಮಧ್ಯೆ ಮಾನಸಿಕ ಒತ್ತಡಕ್ಕೆ ಗುರಿಯಾಗುವಿರಿ. ವಿಚಾರ ಹೀನತೆಯಿಂದ ಗುರಿ ಸಾಧಿಸುವಲ್ಲಿ ವಿಫಲರಾಗುವಿರಿ. ಯಾವುದೇ ಜಾಮೀನು ಪತ್ರಕ್ಕೆ ಸಹಿ ಹಾಕುವ ಮುನ್ನ ವಕೀಲರ ಸಲಹೆ ಪಡೆಯಿರಿ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ಮೈಸೂರು ಮಿತ್ರ ಭಾನುವಾರ 19 ಜನವರಿ 2025

# ಕೆರೆ, ಸಾರ್ವಜನಿಕ ಸ್ಮಶಾನ ಒತ್ತುವರಿ ತೆರವುಗೊಳಿಸಿ

## ಕೆಡಿಪಿ ಸಭೆಯಲ್ಲಿ ತಹಸೀಲ್ದಾರ್‌ಗೆ ಶಾಸಕ ದರ್ಶನ್ ಸೂಚನೆ

ನಂಜನಗೂಡು, ಜ.18– ತಾಲೂಕಿನಲ್ಲಿ ಕೆರೆಗಳು, ಸಾರ್ವಜನಿಕ ಸ್ಮಶಾನಗಳ ಒತ್ತುವರಿ ತೆರವುಗೊಳಿಸಿ ಹಾಗೂ ಜಮೀನುಗಳಿಗೆ ಬಂಡಿದಾರಿ ಗುರ್ತಿಸಿ, ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ತಹಶೀಲ್ದಾರ್‌ಗೆ ಶಾಸಕ ದರ್ಶನ್ ಸೂಚಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ಶನಿವಾರ ನಡೆದ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನ ಬಹುತೇಕ ಕೆರೆಗಳು ಒತ್ತುವರಿಯಾಗಿವೆ. ಸರ್ಕಾರದ ಆದೇಶದಂತೆ ರೈತರ ಜಮೀನುಗಳಿಗೆ ತೆರಳಲು ಅಡ್ಡಿಯಾಗುತ್ತಿರುವ ಬಗ್ಗೆ, ಜಮೀನುಗಳ ಸರ್ವೇ ಕಾರ್ಯ ನನೆಗುದಿಗೆ ಬಿದ್ದಿರುವ ಬಗ್ಗೆ ಸಾಕಷ್ಟು ದೂರುಗಳಿವೆ. ಈ ಬಗ್ಗೆ ತಕ್ಷಣ ಕ್ರಮವಹಿಸಬೇಕು ಎಂದು ತಹಸೀಲ್ದಾರ್‌ಗೆ ತಾಕೀತು ಮಾಡಿದರು.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್ ಪ್ರತಿಕ್ರಿಯಿಸಿ ಹರತಲೆ, ಹೆಡತಲೆ ಗ್ರಾಮಗಳ ಕೆರೆಗಳ ಒತ್ತುವರಿ ತೆರವುಗೊಳಿಸಿ ಹದ್ದು ಬಸ್ತು ನಿರ್ಮಿಸಲಾಗಿದೆ. ತಾಲೂಕಿನ ಉಳಿದ ಗ್ರಾಮಗಳಲ್ಲಿ ಕೆರೆಗಳು, ಸಾರ್ವಜನಿಕ ಸ್ಮಶಾನಗಳ ಒತ್ತುವರಿ ತೆರವು ಹಾಗೂ ಜಮೀನುಗಳಿಗೆ ಬಂಡಿದಾರಿ ನಿರ್ಮಿಸಲು ಕ್ರಮವಹಿಸಲಾಗುವುದು ಎಂದರು.



ತಾಪಂ ಸಭಾಂಗಣದಲ್ಲಿ ಶಾಸಕ ದರ್ಶನ್ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ ನಡೆಯಿತು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೆ.ಎಸ್.ರವಿ ಮಾಹಿತಿ ನೀಡಿ ಈ ಸಾಲಿನಲ್ಲಿ ತಾಲೂಕಿನಲ್ಲಿ ಶೇ.15ರಷ್ಟು ಹೆಚ್ಚುವರಿ ಮಳೆಯಾಗಿದೆ. ಅತಿವೃಷ್ಟಿ ಹಾಗೂ ಸೈಕ್ಲೋನ್‌ನಿಂದ 50 ಹೆಕ್ಟೇರ್ ಪ್ರದೇಶದಲ್ಲಿದ್ದ ರೈತರ ಬೆಳೆಗಳಿಗೆ ಉಂಟಾದ ಹಾನಿ ಬಗ್ಗೆ ವರದಿ ನೀಡಲಾಗಿದೆ ಎಂದರು.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಚಂದ್ರು ಮಾತನಾಡಿ, ತಾಲೂಕಿನಲ್ಲಿ ಅಡಿಕೆ ಬೆಳೆಯುವ ಪ್ರದೇಶ 250 ಹೆಕ್ಟೇರ್‌ಗಳಷ್ಟು ಹೆಚ್ಚಳವಾಗಿದೆ. ಕೃಷಿಕರು ಅಡಿಕೆ ಜೊತೆಗೆ ಅಂತರ ಬೆಳೆಯಾಗಿ ಬಾಳೆ ಬೆಳೆದು ಯಶಸ್ವಿಯಾಗಿದ್ದಾರೆ. ತಾಲೂಕಿನಲ್ಲಿ 8 ಸಾವಿರ ಎಕರೆ ಜಮೀನಿಗೆ ತುಂತುರು ನೀರಾವರಿ ಯೋಜನೆ ಅಳವಡಿಸಲಾಗಿದ್ದು, ಇನ್ನೂ 7 ಸಾವಿರ ಎಕರೆ ಜಮೀನಿಗೆ ತುಂತುರು ನೀರಾವರಿ ಅಳವಡಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸಮನ್ವಯತೆ ಸಾಧಿಸಿ ಒಗ್ಗೂಡಿ ರೈತರಿಗೆ ಸರ್ಕಾರದ ಯೋಜನೆಗಳ ಪ್ರಯೋಜನ ಸಿಗುವಂತೆ ನೋಡಿಕೊಳ್ಳಬೇಕು. ಆಗಾಗ್ಗೆ ಮಣ್ಣು ಪರೀಕ್ಷೆ ನಡೆಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ ವಹಿಸಬೇಕು. ನಗರದ ಪ್ರವಾಸಿ ಮಂದಿರದಲ್ಲಿ 2014ರಲ್ಲಿ 23 ಎಕರೆ ಪ್ರದೇಶದಲ್ಲಿ 12 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿ ನಡೆಸಲು ಯೋಜನೆ ರೂಪಿಸಲಾಗಿತ್ತು. ಸರ್ಕಾರ ನೀಡಿದ 3 ಕೋಟಿ ಅನುದಾನದಲ್ಲಿ ನಡೆಸಲಾದ ಸಸ್ಯಕಾಶಿ ನಿರ್ಮಾಣ ಕಾಮಗಾರಿ ಅಪೂರ್ಣಗೊಂಡಿದೆ. ಅಲ್ಲಿನ ಅಪರೂಪದ ಸಸ್ಯಗಳನ್ನು ಪೋಷಿಸಿ ಸಂರಕ್ಷಿಸಬೇಕು. ಶೀಘ್ರ ಪೌತಿ ಖಾತೆ ಆಂದೋಲನ ಹಮ್ಮಿಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು. ವೃದ್ಧಾಪ್ಯ, ವಿಧವಾ, ಪಿಂಚಣಿ ಹಣ ಬರುತ್ತಿಲ್ಲ ಎಂಬ ದೂರುಗಳಿವೆ. ಸಾಮಾಜಿಕ ಭದ್ರತೆ ಯೋಜನೆಗಳಿಗೆ ತೊಂದರೆಯಾಗಬಾರದು. ಶೀಘ್ರ ಪರಿಹರಿಸಬೇಕು ಎಂದು ಶಾಸಕ ದರ್ಶನ್ ಅಧಿಕಾರಿಗಳಿಗೆ ಸೂಚಿಸಿದರು.

> ಸಸ್ಯಕಾಶಿ ಯೋಜನೆಗಾಗಿ 12 ಕೋಟಿ ಅಂದಾಜು ವೆಚ್ಚ ತಯಾರಿಸಲಾಗಿತ್ತು. 3 ಕೋಟಿಯಲ್ಲಿ ಕಾಮಗಾರಿ ನಡೆಸಲಾಗಿದೆ. ಅಪೂರ್ಣ ಕಾಮಗಾರಿ ವರದಿ ನೀಡಿ, ಸಸ್ಯಕಾಶಿ ನಿರ್ವಹಣೆಯನ್ನು ನಗರಸಭೆಗೆ ವಹಿಸಬೇಕು.
> -ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾಧಿಕಾರಿ.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್ ಮಾತನಾಡಿ, ತಾಲೂಕಿನಲ್ಲಿ ಮಳೆಯಿಂದ 199 ಮನೆಗಳಿಗೆ ಹಾನಿಯಾಗಿದೆ. ಸರ್ಕಾರ 1.2 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಸಂತ್ರಸ್ತರಿಗೆ ಪರಿಹಾರ ನೀಡಲಾಗಿದೆ. ಸರ್ವೇಯರ್‌ಗಳ ಕೊರತೆ ಇದ್ದು, ಹೊರಗಿನ ಸರ್ವೇಯರ್‌ಗಳ ಸೇವೆ ಪಡೆದು ಜಮೀನುಗಳ ಸರ್ವೇ ಕಾರ್ಯ ನಡೆಸಲಾಗುವುದು ಎಂದರು.

ಸಭೆಯಲ್ಲಿ ತಾಪಂ ಇಓ ಜೆರಾಲ್ಡ್ ರಾಜೇಶ್, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹೆನಾ ಬಾನು, ಟಿಎಪಿಸಿಎಂಎಸ್ ಅಧ್ಯಕ್ಷ ಮಹೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಡಿವೈಎಸ್ಪಿ ರಘು ಮತ್ತು ತಾಲೂಕಿನ ಎಲ್ಲಾ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಶ್ರೀರಾಮನ ಅದ್ದೂರಿ ತೆಪ್ಪೋತ್ಸವ



ಚುಂಚನಕಟ್ಟೆಯಲ್ಲಿ ಶ್ರೀರಾಮದೇವರ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು.

ಚುಂಚನಕಟ್ಟೆ, ಜ.18– ಇಲ್ಲಿನ ಕಾವೇರಿ ನದಿಯಲ್ಲಿ ಶ್ರೀರಾಮದೇವರ ತೆಪ್ಪೋತ್ಸವ ಶುಕ್ರವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು.

ರಾತ್ರಿ 7.45ರ ವೇಳೆಗೆ ಶ್ರೀರಾಮ ದೇವರ ದೇವಾಲಯದಿಂದ ಶ್ರೀರಾಮ, ಲಕ್ಷ್ಮಣ, ಸೀತಾ ಮಾತೆ ಉತ್ಸವ ಮೂರ್ತಿಗಳನ್ನು ಅದ್ದೂರಿ ಮೆರವಣಿಗೆ ಮೂಲಕ ಕರೆತಂದು ಕಾವೇರಿ ನದಿ ದಡದಲ್ಲಿರುವ ಆಂಜನೇಯ ಗುಡಿ ಬಳಿ ವಿದ್ಯುತ್ ದೀಪ ಮತ್ತು ಹೂವಿನ ಅಲಂಕಾರಗಳಿಂದ ಶೃಂಗಾರ ಗೊಂಡಿದ್ದ ತೆಪ್ಪದಲ್ಲಿ ಪ್ರತಿಷ್ಠಾಪಿಸಲಾಯಿತು. ನಂತರ ತೆಪ್ಪದಲ್ಲಿ ಉತ್ಸವ ಮೂರ್ತಿಗಳನ್ನು ಕಾವೇರಿ ನದಿ ಮಧ್ಯ ಭಾಗಕ್ಕೆ ಕರೆದೊಯ್ದು 3 ಬಾರಿ ತಿರುಗಿ ಸುತ್ತಿದ್ದಂತೆಯೇ ಅರ್ಚಕ ವಾಸುದೇವನ್ ಉತ್ಸವ ಮೂರ್ತಿಗಳಿಗೆ ಮಂಗಳಾರತಿ ಮಾಡಿದರು. ಈ ವೇಳೆ ನೆರೆದಿದ್ದ ಭಕ್ತರು ಶ್ರೀರಾಮನಿಗೆ ಜೈಕಾರ ಕೂಗಿದರು. ಬಳಿಕ ಕಾವೇರಿ ನದಿ ದಡದಲ್ಲಿ ಪೂಜೆ ಸಲ್ಲಿಸಲಾಯಿತು. ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ನಂತರ ಉತ್ಸವ ಮೂರ್ತಿಗಳನ್ನು ಮತ್ತೆ ದೇವಾಲಯಕ್ಕೆ ಕರೆದೊಯ್ಯಲಾಯಿತು. ಗುಂಡ್ಲುಪೇಟೆ ಆನಂದ್ ಕುಮಾರ್ ಎಂಬುವರು ಬಾರಿ ಪಟಾಕಿಗಳನ್ನು ಸಿಡಿಸುವ ಮೂಲಕ ತೆಪ್ಪೋತ್ಸವಕ್ಕೆ ಕಳೆ ತಂದರು.

ಸಾಲಿಗ್ರಾಮ ತಹಸೀಲ್ದಾರ್ ನರಗುಂದ, ಉಪ ತಹಸೀಲ್ದಾರ್ ಕೆ.ಜೆ.ಶರತ್, ಗ್ರಾಮ ಲೆಕ್ಕಿಗರಾದ ಮೇಘ, ಮೌನೇಶ್, ಕಾವೇರಿ, ಪ್ರಿಯಾ, ದೇವಾಲಯದ ಇಓ ಕೆ.ರಘು, ಪಾರುಪತ್ತೇದಾರ್ ಯತಿರಾಜ್ ಸೇರಿದಂತೆ ಸಾವಿರಾರು ಭಕ್ತರು ಹಾಜರಿದ್ದರು.

# ತಾಂತ್ರಿಕ ವಿಚಾರಗೋಷ್ಠಿ ಸದುಪಯೋಗಪಡಿಸಿಕೊಳ್ಳಿ

## ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್



ವಿಚಾರಗೋಷ್ಠಿಯನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಜ.18– ಹೈನುಗಾರಿಕೆಯಿಂದಾಗುವ ಉಪಯೋಗಗಳು, ಮನೆಮದ್ದು ತಯಾರಿಸಿಕೊಳ್ಳುವುದು ಹಾಗೂ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದು ಸೇರಿದಂತೆ ಇನ್ನಿತರ ವಿಚಾರಗಳ ಬಗ್ಗೆ ಪ್ರಗತಿಪರ ಹೈನುಗಾರರ ತಾಂತ್ರಿಕ ವಿಚಾರಗೋಷ್ಠಿಯಲ್ಲಿ ವೈದ್ಯರು ಸಲಹೆ ನೀಡಲಿದ್ದಾರೆ. ಅವುಗಳನ್ನು ಸದುಪಯೋಗಪಡಿಸಿ ಕೊಳ್ಳಬೇಕು ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ತಿಳಿಸಿದರು.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಜಯಮ್ಮ ಸಿದ್ದೇಗೌಡ ಕಲ್ಯಾಣ ಮಂಟಪದಲ್ಲಿ ಮೈಮುಲ್ ವತಿಯಿಂದ ನಡೆದ ಪ್ರಗತಿಪರ ಹೈನುಗಾರರ ತಾಂತ್ರಿಕ ವಿಚಾರಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಸಿಗದೇ ಕಂಗಾಲಾಗಿದ್ದು, ರೈತ ಕುಟುಂಬಗಳಿಗೆ ಹೈನುಗಾರಿಕೆ ಆರ್ಥಿಕ ಶಕ್ತಿಯಾಗಿ ನಿಲ್ಲಲಿದೆ ಎಂದರು.

ನಾನು ಅಧ್ಯಕ್ಷನಾದ ಮೇಲೆ ಮೈಸೂರು ಜಿಲ್ಲೆಯಲ್ಲಿ ಹೈನುಗಾರಿಕೆಯನ್ನು ಉದ್ಯಮವಾಗಿ ರೂಪಿಸುವ ಸಲುವಾಗಿ ಮೈಮುಲ್‌ನಿಂದ ವಿಶೇಷ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ರೈತರು ತಮ್ಮ ಬದುಕು ಹಸನಾಗಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಪರಿಶ್ರಮ ಮತ್ತು ಆಸಕ್ತಿ ಮುಖ್ಯ ಎಂದರು.

ಜಮೀನಿನಲ್ಲಿ ಬೆಳೆದ ಪ್ರತಿಯೊಂದು ಬೆಳೆಗೆ ಸಮರ್ಪಕ ಬೆಲೆ ಇಲ್ಲದೇ ರೈತರು ಕಂಗಾಲಾಗಿದ್ದಾರೆ. ಇಂತಹ ಸಂಕಷ್ಟಗಳ ನಡುವೆಯೂ ಮೈಮುಲ್ ಹೈನುಗಾರಿಕೆ ವಿಚಾರದಲ್ಲಿ ರೈತರ ಬೆನ್ನೆಲುಬು ಆಗಿ ಕೆಲಸ ಮಾಡುತ್ತಿದೆ. ಇಂತಹ ವಿಚಾರಗೋಷ್ಠಿಗಳಿಂದ ರೈತರು ಹೈನುಗಾರಿಕೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯವಾಗಲಿದೆ. ನಿತ್ಯ ಮನೆ ಮದ್ದುಗಳ ಮೂಲಕ ಹೈನುಗಾರಿಕೆ ಪರಿಣಾಮಕಾರಿಯಾಗಲಿದೆ ಎಂದರು.

ರೈತರಿಂದ ಖರೀದಿಸುವ ಹಾಲಿನ ದರ ಹೆಚ್ಚಿಸಲು ಸಿಎಂ ಕ್ರಮ ಕೈಗೊಳ್ಳಲಿದ್ದು, ಮಾರಾಟದ ಹಾಲಿನ ದರ ಹೆಚ್ಚಾದ ತಕ್ಷಣ ಸರ್ಕಾರದ ನಿರ್ದೇಶನದಂತೆ ಮೈಮುಲ್ ಕ್ರಮ ಕೈಗೊಳ್ಳಲಿದೆ ಎಂದರು.

ಯುವಕರು ನಿರುದ್ಯೋಗ ಹಿನ್ನಲೆಯಲ್ಲಿ ಉದ್ಯೋಗಕ್ಕಾಗಿ ನಗರಕ್ಕೆ ವಲಸೆ ಹೋಗುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಹೈನುಗಾರಿಕೆ ಅವಲಂಬಿಸಿ ಬದುಕು ಕಟ್ಟಿಕೊಳ್ಳಲು ಮುಂದಾಗಿದ್ದಾರೆ. ಮೈಮುಲ್‌ನಿಂದ ರೈತರ ಮಕ್ಕಳ ಶಿಕ್ಷಣಕ್ಕೆ ನೆರವು, ಜಾನುವಾರುಗಳಿಗೆ ವಿಮೆ, ಚಿಕಿತ್ಸೆ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ರೈತರು ಪಡೆಯಬಹುದಾಗಿದೆ ಎಂದರು.

ಇದೇ ವೇಳೆ ಪಾರಂಪರಿಕ ಔಷಧಿ ಬಗ್ಗೆ ಡಾ.ಎನ್.ಕುಮಾರ್, ಹಾಲಿನ ಗುಣಮಟ್ಟ ಸುಧಾರಣೆ ಬಗ್ಗೆ ಡಾ.ತಾರಾನಾಥ್ ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ ಬಸವರಾಜು, ಪ್ರಭುಶಂಕರ್, ಜಯಂತ್, ಯೋಗೇಶ್, ಮುಖಂಡರಾದ ಬಸವರಾಜಪ್ಪ ಮೈಮುಲ್ ವಿಸ್ತರಣಾಧಿಕಾರಿಗಳಾದ ಆರಿಫ್ ಇಕ್ಬಾಲ್, ಜಯಂತ್, ರಾಮಪ್ಪ, ಬಾರ್ಕಿ, ಯೋಗೇಶ್, ತಹೆರ, ಜಗದಾಂಬ, ಕೃಷಿ ಅಧಿಕಾರಿ ಪ್ರಭು ಶಂಕರ್, ಶೀತಲಿಕರಣ ಸಿಬ್ಬಂದಿ ಬಸವರಾಜು ಇತರರಿದ್ದರು.

# ಭಿನ್ನಾಭಿಪ್ರಾಯ ಮರೆತು ತಳಮಟ್ಟದಿಂದ ಪಕ್ಷ ಸಂಘಟಿಸಿ

## ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕರೆ



ಬಿ.ವೈ.ವಿಜಯೇಂದ್ರ ಅವರನ್ನು ವರುಣ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಸನ್ಮಾನಿಸಿದರು.

ನಂಜನಗೂಡು, ಜ.18– ವರುಣ ಕ್ಷೇತ್ರದ ಕಾರ್ಯಕರ್ತರು ಭಿನ್ನಾಭಿಪ್ರಾಯ ಮರೆತು ತಳಮಟ್ಟದಿಂದ ಪಕ್ಷ ಸಂಘಟಿಸಿ ಮುಂಬರುವ ತಾಪಂ ಮತ್ತು ಜಿಪಂ ಚುನಾವಣೆಗೆ ಸಜ್ಜಾಗಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕರೆ ನೀಡಿದರು.

ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದ ವೇಳೆ ವರುಣ ಕ್ಷೇತ್ರಕ್ಕೆ ಭೇಟಿ ನೀಡಿ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಪಕ್ಷದ ಕಾರ್ಯಕರ್ತರು ಮೋದಿ ಅವರ ಸಾಧನೆಗಳನ್ನು ಮತ್ತು ಕಾಂಗ್ರೆಸ್ ಸರ್ಕಾರದ ದುರಾಡಳಿತ, ವೈಫಲ್ಯಗಳನ್ನು ಜನರಿಗೆ ಮನಮುಟ್ಟುವಂತೆ ತಿಳಿಸಿ ಪಕ್ಷವನ್ನು ತಳಮಟ್ಟದಿಂದ ಸಂಘಟನೆಗೊಳಿಸಿ, ಮುಂಬರುವ ತಾಪಂ ಮತ್ತು ಜಿಪಂ ಚುನಾವಣೆಯಲ್ಲಿ ಪಕ್ಷದಿಂದ ಅತಿ ಹೆಚ್ಚು ಸದಸ್ಯರು ಚುನಾಯಿತರಾಗುವಂತೆ ಕಾರ್ಯಕರ್ತರು ಶ್ರಮಿಸಬೇಕು ಎಂದರು.

ವರುಣ ಮಂಡಲ ನೂತನ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಮಾತನಾಡಿ, ಪ್ರಧಾನಿ ಮೋದಿ ಅವರ ಕೈ ಬಲಪಡಿಸಲು ಮತ್ತು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಶಕ್ತಿ ತುಂಬುವ ಸಲುವಾಗಿ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆಗೊಳಿಸಬೇಕು ಎಂದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಗುರುಸ್ವಾಮಿ, ಮುಖಂಡರಾದ ವೆಂಕಟರಮಣ ಶೆಟ್ಟಿ, ಜಯಕುಮಾರ್, ಮಹದೇವ, ಮಹೇಶ್, ಮಹೇಶ್, ತಾಪಂ ಮಾಜಿ ಸದಸ್ಯ ಶಂಕರ್, ವಿಜಯ್ ಕುಮಾರ್, ಸಂತೋಷ್ ಸೇರಿದಂತೆ ಇತರರಿದ್ದರು.

## ಡಿಟಿಎನ್ ಅವರಿಗೆ ಶ್ರದ್ಧಾಂಜಲಿ



ಇತ್ತೀಚೆಗೆ ನಿಧನರಾದ ನಿವೃತ್ತ ಮುಖ್ಯ ಶಿಕ್ಷಕ, ಹಿರಿಯ ರಂಗಭೂಮಿ ಕಲಾವಿದ ದೊಡ್ಡ ತಮ್ಮನಾಯಕ (ಡಿಟಿಎನ್) ಅವರಿಗೆ ಹುಣಸೂರು ನಗರದ ಬಾಲಕಿಯರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವ, ನಿಕಟಪೂರ್ವ ಅಧ್ಯಕ್ಷ ಸೋಮಶೇಖರ, ಗೌರವ ಕಾರ್ಯದರ್ಶಿ ಟಿ.ಲೋಕೇಶ್, ಉಪಾಧ್ಯಕ್ಷ ಸಿ.ಎಸ್.ಮಹೇಶ್, ರಂಗಭೂಮಿ ಕಲಾವಿದ ಎಸ್.ಜಯರಾಮು, ನಟೇಶ್, ಚಿತ್ರನಟ ಕುಮಾರ್ ಅರಸೇಗೌಡ ಮತ್ತಿತರರಿದ್ದರು.

# ಕಾನೂನು ಬಾಹಿರವಾಗಿ ಮೀಸಲಾತಿ ಬದಲಾವಣೆ: ಆರೋಪ




ಸುದ್ದಿಗೋಷ್ಠಿಯಲ್ಲಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಸವರಾಜೇ ಅರಸ್ ಮಾತನಾಡಿದರು.

ಪಿರಿಯಾಪಟ್ಟಣ, ಜ.18– ಕಾನೂನು ಬಾಹಿರವಾಗಿ ಪಿಎಲ್‌ಡಿ ಬ್ಯಾಂಕ್ ಚುನಾವಣೆಯ ಅಭ್ಯರ್ಥಿಗಳ ಮೀಸಲಾತಿಯನ್ನು ಅಧ್ಯಕ್ಷರು ಹಾಗೂ ವ್ಯವಸ್ಥಾಪಕರು ಬದಲಾವಣೆ ಮಾಡಿದ್ದಾರೆ ಎಂದು ಬ್ಯಾಂಕ್ ನಿರ್ದೇಶಕ ಬಸವರಾಜೇ ಅರಸ್ ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.9ರಂದು ಪಿಎಲ್‌ಡಿ ಬ್ಯಾಂಕ್ ಚುನಾವಣೆ ನಡೆಯಲಿದ್ದು, ಈ ಹಿಂದೆ ನಡೆದ ವಾರ್ಷಿಕ ಸಭೆಯಲ್ಲಿ ಸರ್ವ ಸದಸ್ಯರ ಸಮ್ಮುಖದಲ್ಲಿ ಪಿಎಲ್‌ಡಿ ಬ್ಯಾಂಕ್‌ನ 13 ಕ್ಷೇತ್ರಗಳಿಗೂ ಮೀಸಲಾತಿ ನಿಗದಿಪಡಿಸಿ ಒಮ್ಮತದಿಂದ ಒಪ್ಪಿಗೆ ಪಡೆಯಲಾಗಿತ್ತು. ಆದರೆ ಇತ್ತೀಚೆಗೆ ಅಧ್ಯಕ್ಷ ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿ ತುರ್ತು ಸಭೆ ಕರೆದು ದುರುದ್ದೇಶ ಪೂರ್ವಕವಾಗಿ ಮೀಸಲಾತಿ ಬದಲಾವಣೆ ಮಾಡಿದ್ದಾರೆ. ಇದು ಕಾನೂನು ಉಲ್ಲಂಘನೆಯಾಗಿದೆ. ಸಭೆಯಲ್ಲಿ ಹಲವು ನಿರ್ದೇಶಕರು ವಿರೋಧ ವ್ಯಕ್ತಪಡಿಸಿದರೂ ಬೆಲೆ ನೀಡಲಿಲ್ಲ ಎಂದು ದೂರಿದರು.

ನಿರ್ದೇಶಕ ಶ್ರೀನಿವಾಸ್ ಮಾತನಾಡಿ, ನನಗೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದರೆ ಕ್ಷೇತ್ರ ಮೀಸಲಾತಿ ಬದಲಾವಣೆ ಮಾಡುವುದಿಲ್ಲ ಎಂದು ಕಾಂಗ್ರೆಸ್‌ನವರು ಆಮಿಷ ಒಡ್ಡುತ್ತಿದ್ದಾರೆ ಎಂದು ಆರೋಪಿಸಿದರು.


ಟಿಎಪಿಸಿಎಂಎಸ್ ಅಧ್ಯಕ್ಷ ರಾಮು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಟಿಎ ಸಿಎಂಎಸ್ ಉಪಾಧ್ಯಕ್ಷ ತಿಮ್ಮನಾಯಕ, ನಿರ್ದೇಶಕ ಗಿರೀಶ್, ಮುಖಂಡರಾದ ರಾಜು, ಕುಮಾರ್, ಸಿ.ಎನ್.ರವಿ, ವಿದ್ಯಾ ಶಂಕರ್, ಎ.ಟಿ.ರಂಗಸ್ವಾಮಿ ಹಾಜರಿದ್ದರು.

# ಮಡಿವಾಳ ಸಮುದಾಯ ಭವನ ನಿರ್ಮಾಣಕ್ಕೆ ಸಹಕರಿಸುವೆ

## ಶಾಸಕ ಜಿ.ಡಿ.ಹರೀಶ್‌ಗೌಡ

ಹುಣಸೂರು, ಜ.18– ತಾಲೂಕಿನಲ್ಲಿ ಮಡಿವಾಳದಂತಹ ಸಣ್ಣ ಸಮುದಾಯಗಳಿಗೆ ಪ್ರಾತಿನಿಧ್ಯ ಸಿಗದೇ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸೇರಿದಂತೆ ಸರ್ಕಾರಿ ಸೌಲಭ್ಯ ಸಿಗದಂತಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ತಾಲೂಕು ಮಡಿವಾಳ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಮಾಜದ ಮುಖಂಡರ ಕೋರಿಕೆಯಂತೆ ತಾಲೂಕಿನಲ್ಲಿ ಮಡಿವಾಳ ಸಮುದಾಯ ಭವನಕ್ಕೆ ನಿವೇಶನ ಗುರ್ತಿಸಿದರೇ ಭವನ ಕಟ್ಟಲು ಸಂಪೂರ್ಣ ಸಹಕಾರ ನೀಡುತ್ತೇನೆ. ಜಿಲ್ಲಾ ವ್ಯಾಪ್ತಿಯಲ್ಲಿ ಅರಸು ನಿಗಮದಿಂದ ಮಡಿವಾಳ ಸಮುದಾಯಕ್ಕೆ ಸಾಕಷ್ಟು ಸಾಲ ಸೌಲಭ್ಯ ಸಿಗುತ್ತಿತ್ತು. ಆದರೆ ಸರ್ಕಾರ ಮಡಿವಾಳ ಅಭಿವೃದ್ಧಿ ನಿಗಮ ಮಾಡಿದ್ದು, ಇದೀಗ ತಾಲೂಕಿನಲ್ಲಿ ಸಾಲ ಸೌಲಭ್ಯ ಸಿಗಲು ಕಷ್ಟವಾಗುತ್ತಿದೆ.



ಮಡಿವಾಳ ಸಂಘದ ಕ್ಯಾಲೆಂಡರ್ ಅನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಬಿಡುಗಡೆಗೊಳಿಸಿದರು.

ಮುಂದಿನ ದಿನಗಳಲ್ಲಿ ನಿಗಮದಿಂದ ಸಾಲ ಸೌಲಭ್ಯ ಕಲ್ಪಿಸಲು ಕ್ರಮ ವಹಿಸುತ್ತೇನೆ ಎಂದರು.

ಮಡಿವಾಳ ಸಂಘದ ತಾಲೂಕು ಅಧ್ಯಕ್ಷ ರವಿ ಮಾತನಾಡಿ, ಹಲವು ವರ್ಷಗಳಿಂದ ರಾಜ್ಯ ಮಟ್ಟದಲ್ಲಿ ಮಡಿವಾಳ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ. ಯಾವುದೇ ರಾಜಕೀಯ ಪಕ್ಷದವರು ಗುರುತಿಸಿ ನಮ್ಮನ್ನು ಅಭಿವೃದ್ಧಿಗೊಳಿಸುವಲ್ಲಿ ವಿಫಲವಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮೈಮುಲ್‌ನ ಕುಮಾರ್, ರಾಜಣ್ಣ, ಪತ್ರಕರ್ತರ ಸಂಘದ ಅಧ್ಯಕ್ಷ ಕೃಷ್ಣಕುಮಾರ್, ಉಪಾಧ್ಯಕ್ಷ ವೆಂಕಟೇಶ್, ರಾಘವ, ಕಾರ್ಯದರ್ಶಿ ಗಣೇಶ, ಚಿಕ್ಕಶೆಟ್ಟಿ, ಪದಾಧಿಕಾರಿಗಳು ಹಾಜರಿದ್ದರು.

# ಚುಂಚನಕಟ್ಟೆ ಬಳಿ ಬೋನಿಗೆ ಬಿದ್ದ ಚಿರತೆ

ಚುಂಚನಕಟ್ಟೆ, ಜ.18– ಕೆ.ಆರ್.ನಗರ ತಾಲೂಕಿನ ಮಳಲಿ ಅರಣ್ಯ ಶಾಖೆಗೆ ಸೇರಿದ ಹುರುಳಿಕಾಮೇನಹಳ್ಳಿ ಗ್ರಾಮದ ಬಳಿ 3 ವರ್ಷದ ಚಿರತೆ ಬೋನಿಗೆ ಬಿದ್ದಿದೆ.

ಹಲವು ದಿನಗಳಿಂದ ಈ ಭಾಗದಲ್ಲಿ ಕಾಣಿಸಿಕೊಳ್ಳುತ್ತಿದ್ದ ಚಿರತೆ ಕಂಡು ಗ್ರಾಮಸ್ಥರು ಭಯಗೊಂಡಿದ್ದರು. ಈ ಹಿನ್ನಲೆಯಲ್ಲಿ ಕೆ.ಆರ್.ನಗರ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಚಿರತೆ ಸೆರೆಗೆ ಬೋನು ಇರಿಸಿದ್ದರು. ಆದರೆ ಶುಕ್ರವಾರ ರಾತ್ರಿ ಚಿರತೆ ಬೋನಿಗೆ ಬಿದ್ದಿದ್ದು ಬಳಿಕ ಸುರಕ್ಷಿತವಾಗಿ ನಾಗರಹೊಳೆ ಅರಣ್ಯಕ್ಕೆ ಬಿಡಲಾಗಿದೆ. ಈ ವೇಳೆ ಅರಣ್ಯಾಧಿಕಾರಿ ಹನಿಪ್ರಸಾದ್, ಅಧಿಕಾರಿಗಳಾದ ಪ್ರಸನ್ನ, ಸಂಪತ್, ಮಠದ



ಕೊಪ್ಪಲು ಮಹದೇವ್, ಸುನೀಲ್ ಹಾಗೂ ಸಿಬ್ಬಂದಿ ಕಾಂತರಾಜು, ಸುಭಾಷ್ ಇದ್ದರು.

# ಟೈಲರ್ ಸಂಘಕ್ಕೆ ಮಹೇಶ್ ಅಧ್ಯಕ್ಷ




ಟೈಲರ್ ಸಂಘದ ಅಧ್ಯಕ್ಷರಾಗಿ ಮಹೇಶ್ ಆಯ್ಕೆಯಾದರು.

ತಿ.ನರಸೀಪುರ, ಜ.18– ಪಟ್ಟಣದಲ್ಲಿ ನಡೆದ ಸಭೆಯಲ್ಲಿ ತಾಲೂಕು ಟೈಲರ್ ಸಂಘದ ಅಧ್ಯಕ್ಷರಾಗಿ ಕನಕ ಸ್ಟಿಚ್‌ನ ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದಂತೆ ಪದಾಧಿಕಾರಿಗಳನ್ನು ಇದೇ ವೇಳೆ ಆಯ್ಕೆ ಮಾಡಲಾಯಿತು.

ಗೌರವಾಧ್ಯಕ್ಷ ಮಹದೇವರಾಜು, ಕಾರ್ಯದರ್ಶಿ ರವಿ, ಖಜಾಂಚಿ ಯಶಸ್ವಿನಿ ನಾಗರಾಜ್, ಉಪಾಧ್ಯಕ್ಷರಾಗಿ ಮಹದೇವಸ್ವಾಮಿ, ಎಂ.ಎಲ್.ಮಹದೇವ, ನಿರ್ದೇಶಕರಾಗಿ ವೆಂಕಟೇಶ್, ಸುರೇಶ್, ಹರೀಶ್, ಗುರುರಾಜ್, ನಾಗರಾಜು, ವಸಂತ, ಎಂ.ನಾಗರಾಜು, ಸೋಮಣ್ಣ, ನಸೀರ್ ಅಹಮದ್, ರಂಗಸ್ವಾಮಿ, ಬಸವರಾಜು ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಕನಕ ಮಹೇಶ್ ಮಾತನಾಡಿ, ಸದಸ್ಯರು ನನ್ನ ಮೇಲೆ ವಿಶ್ವಾಸವಿಟ್ಟು ಆಯ್ಕೆ ಮಾಡಿದ್ದಾರೆ. ಅವರೆಲ್ಲರ ಸಲಹೆ, ಸಹಕಾರದೊಂದಿಗೆ ಸಂಘದ ಕಾರ್ಯ ಚಟುವಟಿಕೆ ಹಮ್ಮಿಕೊಂಡು, ಸಂಘದ ಅಭಿವೃದ್ಧಿಗೆ, ಸದಸ್ಯರ ಪ್ರಗತಿಗೆ ಶ್ರಮಿಸುವುದಾಗಿ ತಿಳಿಸಿದರು. ಇದೇ ವೇಳೆ ನಿರ್ಗಮಿತ ಅಧ್ಯಕ್ಷ ಫ್ಯಾಮಿಲಿ ಟೈಲರ್ ಮಹದೇವಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಸಂಘದ ಸದಸ್ಯರು ಹಾಜರಿದ್ದರು.

# ನಲ್ಲಿತಾಳಪುರ ಗ್ರಾಪಂಗೆ ವಿಜಯಲಕ್ಷ್ಮಿ ಅಧ್ಯಕ್ಷೆ



ನಲ್ಲಿತಾಳಪುರ ಗ್ರಾಪಂ ಅಧ್ಯಕ್ಷೆಯಾಗಿ ವಿಜಯಲಕ್ಷ್ಮಿ ಆಯ್ಕೆಯಾದರು.

ಮಲ್ಲುಂಡಿ, ಜ.18– ನಂಜನಗೂಡು ತಾಲೂಕಿನ ನಲ್ಲಿತಾಳಪುರ ಗ್ರಾಪಂ ನೂತನ ಅಧ್ಯಕ್ಷೆಯಾಗಿ ವಿಜಯಲಕ್ಷ್ಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಕೆಂಪಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ವಿಜಯಲಕ್ಷ್ಮಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕೃಷ್ಣ ಘೋಷಿಸಿದರು.

ಗ್ರಾಪಂ ಸದಸ್ಯ ಕೆ.ಟಿ.ಮಲ್ಲೇಶ್ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ನೂತನ ಅಧ್ಯಕ್ಷರು ಶ್ರಮಿಸಬೇಕು. ಅಲ್ಲದೇ ಗ್ರಾಮಗಳಿಗೆ ಕುಡಿಯುವ ನೀರು, ರಸ್ತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಮುಂದಾಗಬೇಕು ಎಂದು ತಿಳಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಕೆ.ಸಿ.ಪ್ರಕಾಶ್, ನಾಗೇಗೌಡ, ರಾಜೇಂದ್ರ, ನಾಗೇಂದ್ರ, ನಂಜುಂಡಸ್ವಾಮಿ, ಕೆಂಪಮ್ಮ, ರಾಜಮ್ಮ, ಮಂಗಳಮ್ಮ, ನಂದಿನಿ, ರವಿ, ಮಣಿ, ರಾಮಲಿಂಗಸ್ವಾಮಿ, ಶಿವಮಲ್ಲು, ಮುಖಂಡರಾದ ಸಣ್ಣಪ್ಪ, ತೋಪನಾಯಕ, ನಾಗರಾಜಪ್ಪ, ಮಹದೇವನಾಯಕ, ಪಿಡಿಓ ಶ್ವೇತಾ ಸೇರಿದಂತೆ ಇತರರಿದ್ದರು.

## ನಿರ್ದೇಶಕರ ಸ್ಥಾನಕ್ಕೆ ರಾಜೀನಾಮೆ



ಹೆಚ್.ಡಿ.ಕೋಟೆ, ಜ.18– ವೈಯಕ್ತಿಕ ಕಾರಣಗಳಿಂದಾಗಿ ತಾಲೂಕಿನ ಶ್ರೀಕಾಳಿದಾಸ ಕುರುಬ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಸ್ಥಾನಕ್ಕೆ ತಾಲೂಕಿನ ಕಳಸೂರು ಗ್ರಾಮದ ನಿವಾಸಿ, ಕುರುಬರ ಸಂಘದ ಜಿಲ್ಲಾಧ್ಯಕ್ಷ ಹಾಗೂ ಡಿಸಿಸಿ ಸದಸ್ಯ ಶಿವಪ್ಪ ಕೋಟೆ ರಾಜೀನಾಮೆ ನೀಡಿದ್ದಾರೆ.

## ತಿ.ನರಸೀಪುರ ತಾಲೂಕಿನ ಬಹುತೇಕ ಶಾಲೆಗಳಲ್ಲಿ

# ದಲಿತ ವಿದ್ಯಾರ್ಥಿಗಳಿಂದ ಸಂವಿಧಾನ ಪೀಠಿಕೆ ಓದಿಸಲಾಗುತ್ತಿದೆ

## ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ

ತಿ.ನರಸೀಪುರ, ಜ.18– ತಾಲೂಕಿನ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಸಂವಿಧಾನ ಪೀಠಿಕೆಯನ್ನು ದಲಿತ ಸಮುದಾಯದ ಮಕ್ಕಳಿಂದ ಮಾತ್ರ ಓದಿಸುತ್ತಿದ್ದು, ಪೀಠಿಕೆ ಆ ಸಮುದಾಯದ ಮಕ್ಕಳಿಗೆ ಮಾತ್ರ ಸೀಮಿತವೇ ಎಂದು ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಅವರನ್ನು ಪ್ರಶ್ನಿಸಿದ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಅವರು ಬೆರಳಣಿಕೆಯಷ್ಟು ಶಾಲೆಗಳಲ್ಲಿ ಸಮಾನಾಂತರವಾಗಿ ಓದಿಸುತ್ತಿರಬಹುದೇನೋ ಆದರೆ ಬಹುತೇಕ ಖಾಸಗಿ ಶಾಲೆಗಳಲ್ಲಿ ದಲಿತ ಮಕ್ಕಳಿಂದ ಮಾತ್ರ ಪೀಠಿಕೆ ಓದಿಸುತ್ತಿದ್ದಾರೆ ಎಂದರು.

ಪಟ್ಟಣದ ತಾಪಂ ಕಚೇರಿಯಲ್ಲಿ ನಡೆದ ಮಹಾಯೋಗಿ ವೇಮನ ಅಂಬಿಗರ ಚೌಡಯ್ಯ, ಗಣರಾಜ್ಯೋತ್ಸವ, ಮಡಿವಾಳ ಮಾಚಿದೇವ ಹಾಗೂ ಸವಿತಾ ಮಹರ್ಷಿ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.



ಸಭೆಯಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಮರಯ್ಯ ಮಾತನಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್, ಶಾಲಾ–ಕಾಲೇಜುಗಳಲ್ಲಿ ಎಲ್ಲರೂ ಸರಿ ಸಮಾನರು. ಈ ಉದ್ದೇಶದಿಂದಲೇ ಸಮವಸ್ತ್ರ ಸೇರಿದಂತೆ ಆಟ, ಪಾಠ, ಊಟವನ್ನು ಎಲ್ಲಾ ಮಕ್ಕಳು ಒಂದೇ ರೀತಿ ಮಾಡಬೇಕೆಂದು ಸರ್ಕಾರ ನಿಯಮಗಳನ್ನು ಜಾರಿಗೆ ತಂದಿದೆ. ಹಾಗೇನಾದರೂ ಇದ್ದರೇ ಬಿಇಓ ಬಳಿ ಚರ್ಚಿಸಿ ಎಲ್ಲಾ ಮಕ್ಕಳು ಪೀಠಿಕೆ ಓದುವಂತೆ ತಿಳಿಸಿ ಎಂದು ಸೂಚಿಸುತ್ತೇನೆ ಎಂದರು.

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮಾತನಾಡಿ, ಜ.26 ಸಂವಿಧಾನ ಜಾರಿ ಮಾಡಿದ ದಿನವಾಗಿದ್ದು, ಅದರ ಕರ್ತೃ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸುವ ಕೆಲಸವಾಗಬೇಕಿದೆ. ಆದ್ದರಿಂದ ಅಂದು ತಾಲೂಕು ಆಡಳಿತ ಅತ್ಯಂತ ಶಿಸ್ತುಬದ್ಧವಾಗಿ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಿ ಬಾಬಾ ಸಾಹೇಬರ ಆಶಯಗಳನ್ನು ಇಂದಿನ ಪೀಳಿಗೆಗೆ ತಿಳಿಸುವ ಕೆಲಸ ಮಾಡಬೇಕೆಂದರು.

ಸಂವಿಧಾನ ಕೇವಲ ದಲಿತ ಜನಾಂಗಕ್ಕೆ ಮಾತ್ರ ಅಂಬೇಡ್ಕರ್ ಬರೆದಿದ್ದಲ್ಲ. ಇದು ಭಾರತೀಯರೆಲ್ಲರಿಗೂ ಬರೆದಿರುವ ಸಂವಿಧಾನ. ಆದ್ದರಿಂದ ಎಲ್ಲಾ ಸ್ವಾಮೀಜಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂವಿಧಾನದ ಮಹತ್ವವನ್ನು ಜನತೆಗೆ ತಿಳಿಸಬೇಕಿದೆ ಎಂದರು.

ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಮಾತನಾಡಿ, ಮುಂದಿನ ಪೀಳಿಗೆಗೆ ಈ ಹಿಂದಿನ ಇತಿಹಾಸ ತಿಳಿಸುವ ಸಲುವಾಗಿ ದೊಡ್ಡ ಪ್ರಮಾಣದಲ್ಲಿ ಆಚರಿಸಬೇಕಿದೆ. ಆದ್ದರಿಂದ ವಿದ್ಯೋದಯ ಶಿಕ್ಷಣ ಸಂಸ್ಥೆ ಆವರಣದಲ್ಲಿ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸೋಣ ಎಂದರು.

ಈ ವೇಳೆ ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ತಾಲೂಕು ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಅಲ್ಪ ಸಂಖ್ಯಾತರ ವಿಭಾಗದ ಮನ್ಸೂರ್ ಅಲಿ, ಬಾಬು ಜಗಜೀವನರಾಂ ಸಂಘದ ತಾಲೂಕು ಅಧ್ಯಕ್ಷ ಪುಟ್ಟಯ್ಯ, ಆಲಗೂಡು ಪುಟ್ಟಮಲ್ಲಯ್ಯ, ಪಿಡಬ್ಲ್ಯೂಡಿ ಸತೀಶ್ ಚಂದ್ರ, ತಾಪಂ ರಂಗಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ರಾಮೇ ಗೌಡ, ತೋಟಗಾರಿಕೆ ಶಾಂತ, ಮೀನುಗಾರಿಕೆ ಶ್ವೇತ, ಹಿಂದುಳಿದ ವರ್ಗಗಳ ರಾಜಣ್ಣ ಅಧಿಕಾರಿಗಳು ಹಾಜರಿದ್ದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ 7, 8, 9ನೇ ಘಟಿಕೋತ್ಸವ

# 8 ಮಂದಿ ಸಾಧಕರಿಗೆ ಗೌರವ ಡಾಕ್ಟರೇಟ್; 540 ಮಂದಿಗೆ ನಾನಾ ಪದವಿ ಪ್ರದಾನ



ಸಂಗೀತ ವಿವಿ 7, 8, 9ನೇ ಘಟಿಕೋತ್ಸವದಲ್ಲಿ 8 ಮಂದಿ ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ, ಸಂಗೀತ ವಿವಿ ಕುಲಪತಿ ಪ್ರೊ.ವಿ.ಬೆಟ್ಟಕೋಟೆ, ಕುಲಸಚಿವರಾದ ಪ್ರೊ.ಮಂಜುನಾಥ್, ರೇಖಾ ಉಪಸ್ಥಿತರಿದ್ದರು.

ಮೈಸೂರು, ಜ.18(ಎಂಕೆ)– ಮೈಸೂರಿನ ಲಕ್ಷ್ಮಿಪುರಂನಲ್ಲಿರುವ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ನಡೆದ 7, 8 ಮತ್ತು 9ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ 8 ಮಂದಿ ಸಾಧಕರಿಗೆ ಗೌರವ ಡಾಕ್ಟರೇಟ್ ಹಾಗೂ 540 ಮಂದಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು.

ವಿವಿ ಆವರಣದಲ್ಲಿ ಶನಿವಾರ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಮೃದಂಗ ವಾದಕ ವಿದ್ವಾನ್ ಸಿ.ಚಲುವರಾಜು, ರಂಗಭೂಮಿ ಮತ್ತು ಚಲನಚಿತ್ರ ನಟಿ ಗಿರಿಜಾ ಲೋಕೇಶ್, ಗಮಕ ಕಲಾವಿದ ವಿದ್ವಾನ್ ಎಂ.ಆರ್. ಸತ್ಯನಾರಾಯಣ, ನಟ, ಸಂಗೀತ ನಿರ್ದೇಶಕ ಸಾಧು ಕೋಕಿಲ, ರಂಗಭೂಮಿ ನಿರ್ದೇಶಕ ಸಿ.ಬಸವಲಿಂಗಯ್ಯ, ಕರ್ನಾಟಕ ಸಂಗೀತ ಗಾಯಕಿ ವಿದುಷಿ ಎಂ.ಜಿ.ಪುಷ್ಪಾ ಶ್ರೀನಿವಾಸನ್, ಭಾರತೀಯ ಶಾಸ್ತ್ರೀಯ ನೃತ್ಯ ಕಲಾವಿದರಾದ ವಿದುಷಿ ವೀಣಾಮೂರ್ತಿ ವಿಜಯ್ ಹಾಗೂ ಸತ್ಯನಾರಾಯಣರಾಜು ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಮೂರು ವರ್ಷಗಳ 540 ವಿದ್ಯಾರ್ಥಿಗಳಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಯಿತು. 27 ವಿದ್ಯಾರ್ಥಿಗಳಿಗೆ 69 ಚಿನ್ನದ ಪದಕ ಹಾಗೂ ನಗದು ಬಹುಮಾನ ಪ್ರದಾನ ಮಾಡಲಾಯಿತು. 2021–22ನೇ ಸಾಲಿನ ಪ್ರದರ್ಶಕ ಕಲೆಗಳ ಸ್ನಾತಕೋತ್ತರ ಪದವಿ(ಎಂಪಿಎ)ಯಲ್ಲಿ ವಿ.ವಿಜಯಶ್ರೀ (ಕರ್ನಾಟಕ ಸಂಗೀತ) 9 ಚಿನ್ನದ ಪದಕ, 2022–23ನೇ ಸಾಲಿನಲ್ಲಿ ಟಿ.ಎ. ಕೀರ್ತನ 5 ಚಿನ್ನದ ಪದಕ ಹಾಗೂ ಎಲ್.ಬಿ. ಬಿಂದು 6 ಚಿನ್ನದ ಪದಕ, 2023–24ನೇ ಸಾಲಿನಲ್ಲಿ ಕೆ.ಆರ್.ಅಶ್ವಿನಿ 6 ಚಿನ್ನದ ಪದಕ ಹಾಗೂ ಪ್ರದರ್ಶಕ ಕಲೆಗಳ ಪದವಿ(ಬಿಪಿಎ)ಯಲ್ಲಿ 2021–22ನೇ ಸಾಲಿನಲ್ಲಿ ಎಸ್.ವಿ.ಅಶ್ವಿನಿ (ಕರ್ನಾಟಕ ಸಂಗೀತ) 2 ಚಿನ್ನದ ಪದಕ, 2022–23ನೇ ಸಾಲಿನಲ್ಲಿ ಆರ್.ರಂಜಿಶ್ರೀ 6 ಚಿನ್ನದ ಪದಕ, 2023–24ನೇ ಸಾಲಿನಲ್ಲಿ ಆರ್.ರೂಪ 5 ಚಿನ್ನದ ಪದಕ ಪಡೆದರು.

**14 ಡಿ.ಲೀಟ್ ಪದವಿ:** ಹಾಗೆಯೇ ಡಾ.ಸರ್ಮಿಷ್ಠ ಮುಖ್ಯೋಪಾಧ್ಯಾಯ, ಸ್ವಪ್ನೊ ಕಲ್ಪ ರಾಯ್‌ಚೌಧರಿ, ಆರ್. ಗಣೇಶ್, ಟಿ.ಸಿ.ಪೂರ್ಣಿಮಾ, ಬಿ.ಹೆಚ್. ದೀಪಕ್, ಪ್ರಶಾಂತ್ ರಾಮ್, ಸಯ್ಯದ್ ಸಲ್ಲಾವುದ್ದೀನ್ ಪಾಷಾ, ಮದನ್ ಪಟೇಲ್, ಪಿ.ಆರ್. ರೂಪಾ, ಡಾ.ಕೆ.ವಿ.ಶ್ರೀನಿವಾಸ್ ಮೂರ್ತಿ, ಡಾ.ಸುರೇಶ್ ಕುಮಾರ್, ಎಂ.ನಂಜುಂಡಸ್ವಾಮಿ, ಡಾ.ಆರ್. ನಾಗರಾಜು ಹಾಗೂ ಜೆ.ಸಿದ್ದರಾಜು ಅವರಿಗೆ ಡಿ.ಲೀಟ್ ಪದವಿ ಪ್ರದಾನ ಮಾಡಲಾಯಿತು.

**ಎಲ್ಲಾ ವಿವಿಗಳಲ್ಲಿ ಸಂಗೀತ ಸೊಬಗು:** ಘಟಿಕೋತ್ಸವ ಭಾಷಣ ಮಾಡಿದ ನವದೆಹಲಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿ, ಭಾಷಾ ಸಾಹಿತ್ಯ ಮತ್ತು ಸಂಗೀತವನ್ನು ಪ್ರತ್ಯೇಕಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ರಾಜ್ಯದ ಎಲ್ಲಾ ವಿವಿಗಳಲ್ಲಿಯೂ ಸಂಗೀತ ಸೊಬಗು ದೊರೆಯುವಂತಾಗಬೇಕು ಎಂದು ಅಭಿಪ್ರಾಯಿಸಿದರು. ಕರ್ನಾಟಕ ಎಲ್ಲಾ ಕಲೆಗಳ ತವರು. ದೇಸಿ–ಮಾರ್ಗದ ತವರು. ಪುರಂದರದಾಸರು ಕರ್ನಾಟಕ ಸಂಗೀತದ ಆದ್ಯ ಪ್ರವರ್ತಕರು. ಈ ಸಂಗೀತವನ್ನು ಹೊಸ ಜಗತ್ತಿಗೆ ಪರಿಚಯಿಸಿದವರು ಮೈಸೂರು ಮಹಾರಾಜರು. ಈ ಪರಂಪರೆಯೂ ಸಂಗೀತ ವಿವಿ ಮೂಲಕ ಮುಂದುವರೆದಿದೆ ಎಂದು ಶ್ಲಾಘಿಸಿದರು.

**ಕಲೆ, ಸಂಸ್ಕೃತಿ ಬೆಳೆಸುವ ಜವಾಬ್ದಾರಿ ಇದೆ:** ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾತನಾಡಿ, ಸಾಂಪ್ರದಾಯಿಕ ಕಲೆಗಳು ನಶಿಸುತ್ತಿವೆ. ಪಾಶ್ಚಿಮಾತ್ಯ ಸಂಸ್ಕೃತಿ ಪ್ರಭಾವ ಮತ್ತು ವ್ಯಾಮೋಹ ಬೆಳೆದಿದೆ. ಕೃತಕ ಬುದ್ಧಿಮತ್ತೆ ಪ್ರಪಂಚದ ದಿಕ್ಕನ್ನು ಬದಲಿಸುತ್ತಿದೆ. ಬದಲಾಗುವ ಸನ್ನಿವೇಶದಲ್ಲೂ ಪ್ರಾಚೀನ ಕಲೆ, ಸಂಸ್ಕೃತಿ ಉಳಿಸುವ ಬೆಳೆಸುವ ಜವಾಬ್ದಾರಿ ಸಂಗೀತ ವಿವಿಯ ಮೇಲಿದೆ ಎಂದು ಸಚಿವರು ಹೇಳಿದರು. ಕುಲಪತಿ ಪ್ರೊ.ವಿ.ಬೆಟ್ಟಕೋಟೆ, ಕುಲಸಚಿವರಾದ ಪ್ರೊ.ಮಂಜುನಾಥ್, ರೇಖಾ ಮತ್ತಿತರರಿದ್ದರು.

### ಹಂತ–ಹಂತವಾಗಿ ಸಿಬ್ಬಂದಿ ನೇಮಕ: ಡಾ.ಎಂ.ಸಿ.ಸುಧಾಕರ್

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಹಂತ ಹಂತವಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕ ಮಾಡುವುದಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಭರವಸೆ ನೀಡಿದರು.

ವಿವಿಯ 7, 8 ಮತ್ತು 9ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿಶ್ವವಿದ್ಯಾನಿಲಯಗಳಲ್ಲಿ ಕಾಯಂ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಇಲ್ಲ ಎಂದು ಸರ್ಕಾರದ ಗಮನದಲ್ಲಿದೆ. ಸಿಬ್ಬಂದಿ ಭರ್ತಿಯನ್ನು ತ್ವರಿತವಾಗಿ ಮಾಡುತ್ತೇವೆ. ಮೈಸೂರಲ್ಲಿ ಸಂಗೀತ ವಿವಿ ಆರಂಭವಾಗಿ 17 ವರ್ಷಗಳಾಗಿದೆ. ಕಾಯಂ ಸಿಬ್ಬಂದಿ ಭರ್ತಿ ಮಾಡಲು ಆಗಿಲ್ಲ. ಈ ವಿವಿಗೆ ಆರ್ಥಿಕ ಕ್ರೋಢೀಕರಣದ ಶಕ್ತಿ ಇಲ್ಲ. ವಿಶೇಷ ಆದ್ಯತೆ ಕೊಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು.

### ಸಿದ್ದಿ ಸಮುದಾಯಕ್ಕೆ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕಲಿಸುವ ಗುರಿ...!

ಸಿದ್ದಿ ಸಮುದಾಯದ ಮಕ್ಕಳಲ್ಲಿ ಇರುವ ನೃತ್ಯ, ಸಂಗೀತ ಮತ್ತು ನಾಟಕ ಕಲೆಯನ್ನು ಗುರ್ತಿಸಿ, ವ್ಯವಸ್ಥಿತವಾಗಿ ಕಲಿಸುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶ ನನ್ನದಾಗಿದೆ ಎಂದು ಸಂಗೀತ ವಿವಿಯಲ್ಲಿ ನಾಟಕ ವಿಷಯದಲ್ಲಿ ಚಿನ್ನದ ಪದಕದೊಂದಿಗೆ ಸ್ನಾತಕೋತ್ತರ ಪದವಿ ಪಡೆದ ಸಿದ್ದಿ ಸಮುದಾಯದ ರೇಣುಕಾ ಸಿದ್ದಿ ತಮ್ಮ ಗುರಿಯನ್ನು ವ್ಯಕ್ತಪಡಿಸಿದರು.



'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ನೃತ್ಯ, ಸಂಗೀತ ನಮ್ಮ ಸಮುದಾಯದ ರಕ್ತದಲ್ಲಿಯೇ ಬಂದಿದೆ. ಆದರೆ, ಅದನ್ನು ಶೈಕ್ಷಣಿಕವಾಗಿ ಕಲಿಸಬೇಕೆಂಬುದೇ ನನ್ನ ಉದ್ದೇಶ. ಅದಕ್ಕಾಗಿ ಶ್ರಮಿಸುವುದೇ ನನ್ನ ಗುರಿ. ಈ ನಾಟಕ ಕಲೆಯನ್ನು ಸಮುದಾಯಕ್ಕೆ ಹಂಚುತ್ತೇನೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಮಂಚಿಕೆರೆ ಗ್ರಾಮದವಳಾಗಿದ್ದು, ನಮ್ಮ ಇಡೀ ಕುಟುಂಬವೇ ನಾಟಕದಿಂದ ಪ್ರಭಾವಕ್ಕೆ ಒಳಗಾಗಿದೆ. ನಮ್ಮ ತಾತ ಮತ್ತು ತಾಯಿ ಕೂಡ ನಾಟಕಗಳನ್ನು ಕಲಿತು ಎಲ್ಲೆಡೆ ಪ್ರದರ್ಶನಕ್ಕೆ ತೆರಳುತ್ತಿದ್ದರು. ನಾನೂ ಕೂಡ ತಾಯಿಯಿಂದ ಪ್ರಭಾವಿತಳಾಗಿ ನಾಟಕ ಕಲಿಯಲು ಆರಂಭಿಸಿದೆ. ನೀನಾಸಂ ಸೇರಿದಂತೆ ಹಲವು ಸಂಘಟನೆಗಳಲ್ಲಿ ನಾಟಕ ಪ್ರದರ್ಶನ ನೀಡಿ, ಸದ್ಯಕ್ಕೆ ಬೆಂಗಳೂರಿನ ಸಂಸ್ಥೆಯೊಂದರಲ್ಲಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದರು.

### ಕರ್ನಾಟಕಕ್ಕೆ ಕೀರ್ತಿ...

ಟೆಕ್ನಾಲಜಿ, ವಿಜ್ಞಾನದಂತೆಯೇ ಸಂಗೀತ ಮತ್ತು ಪ್ರದರ್ಶಕ ಕಲೆಗಳಿಂದಲೂ ಕರ್ನಾಟಕಕ್ಕೆ ಕೀರ್ತಿ ಬಂದಿದೆ. ವಿದೇಶದಲ್ಲಿ ಕರ್ನಾಟಕದ ಹೆಸರು ಹೇಳಿದರೆ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಜ್ಞಾಪಕ ಮಾಡಿಕೊಳ್ಳುತ್ತಾರೆ. ಅಷ್ಟರ ಮಟ್ಟಿಗೆ ಕರ್ನಾಟಕ ಸಂಗೀತ ಪ್ರಖ್ಯಾತಿಗೊಂಡಿದೆ.

– ಪ್ರೊ.ಶ್ರೀನಿವಾಸ ವರಖೇಡಿ,
ಕುಲಪತಿ, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯ



### ಬ್ಯಾಂಕ್ ಅಭಿವೃದ್ಧಿಗಾಗಿ ನಮ್ಮ ತಂಡ ಬೆಂಬಲಿಸಿ



ಮೈಸೂರು, ಜ.18–ನಾಳೆ (ಜ.19) ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ನಡೆಯಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆಯಲ್ಲಿ ಬ್ಯಾಂಕ್ ಅನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ತಮ್ಮ ನೇತೃತ್ವದಲ್ಲಿ ಸ್ಪರ್ಧಿಸಿರುವ ತಂಡದ ಅಭ್ಯರ್ಥಿಗಳಿಗೆ ಮತ ಚಲಾಯಿಸಿ ಜಯಶೀಲರನ್ನಾಗಿ ಮಾಡಬೇಕೆಂದು ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು ಮನವಿ ಮಾಡಿದ್ದಾರೆ. ಈ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ತಾವು (ಎಸ್‌ಬಿಎಂ ಮಂಜು), ಎಸ್.ಅರವಿಂದ, ಜಿ.ಕುಮಾರಗೌಡ, ವೈ.ವಿ.ಶಾಖ್, ಆರ್.ರವಿ ಕುಮಾರ್, ಪರಿಶಿಷ್ಟ ಜಾತಿ ಕ್ಷೇತ್ರದಿಂದ ಎ.ಮಂಚಪ್ಪ, ಸಾಮಾನ್ಯ ಮಹಿಳಾ ಕ್ಷೇತ್ರದಿಂದ ಎಂ.ಛಾಯಮ್ಮ, ಹೆಚ್.ವಸಂತ ಮುನೀಶ್, ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಎಸ್.ರೋಹಿತ್, ಹಿಂದುಳಿದ ವರ್ಗದ ಕ್ಷೇತ್ರದಿಂದ ಆರ್. ರವಿಕುಮಾರ್ ಸ್ಪರ್ಧಿಸುತ್ತಿರುವುದಾಗಿ ತಿಳಿಸಿರುವ ಅವರು, ತಮ್ಮ ತಂಡದ ಎಲ್ಲಾ ಅಭ್ಯರ್ಥಿಗಳಿಗೂ ಮತ ಚಲಾಯಿಸಿ ಗೆಲ್ಲಿಸುವ ಮೂಲಕ ಬ್ಯಾಂಕ್‌ನ ಅಭಿವೃದ್ಧಿಗೆ ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.





## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ವನಂಗಾನ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಗೇಮ್ ಚೇಂಜರ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಫತೇ(ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಭೂ ಮಂತರ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಯುಐ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಡಾಕು ಮಹಾರಾಜ್ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಮ್ಯಾಕ್ಸ್(ಕ) | 4 ಪ್ರದರ್ಶನಗಳು |
| **ಲಿಡೋ** | |
| ಭೂ ಮಂತರ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಮಾರ್ಕೋ (ಹಿ) | 4 ಪ್ರದರ್ಶನಗಳು |
| **ಪ್ರಭಾ** | |
| ಮದಗಜ ರಾಜ (ತ) | 5 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ. |
| ಸ್ಕ್ರೀನ್ 2 | ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೋ (ಹಿಂ): ರಾ.7ಕ್ಕೆ, ಮಾರ್ಕೋ (ಮ): ರಾ.10.10ಕ್ಕೆ. |
| ಸ್ಕ್ರೀನ್ 3 | ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ. |
| ಸ್ಕ್ರೀನ್ 4 | ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ. |
| ಸ್ಕ್ರೀನ್ 2 | ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 3 | ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ. |
| ಸ್ಕ್ರೀನ್ 4 | ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಮೈಸೂರಲ್ಲಿ ಡಾ.ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ 80ನೇ ಜಯಂತೋತ್ಸವ



ಮೈಸೂರಿನ ಅಗ್ರಹಾರ ವೃತ್ತದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಜಗದ್ಗುರು ಡಾ.ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ರವರ 80ನೇ ಜಯಂತೋತ್ಸವ ಆಚರಿಸಲಾಯಿತು.

ಮೈಸೂರು, ಜ.18(ಜಿಎ)–ಮೈಸೂರಿನ ಅಗ್ರಹಾರ ವೃತ್ತದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ವತಿಯಿಂದ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಜಗದ್ಗುರುಗಳಾದ ಡಾ.ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ 80ನೇ ಜಯಂತೋತ್ಸವ ಆಚರಿಸಲಾಯಿತು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಡಾ.ಶ್ರೀ ಬಾಲಗಂಗಾಧರನಾಥ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಮಾತನಾಡಿ, ಅನ್ನದಾಸೋಹ ಮತ್ತು ಅಕ್ಷರ ದಾಸೋಹದ ಮೂಲಕ ಎಲ್ಲಾ ವರ್ಗದ, ಸಮುದಾಯದ, ಬಡ ಜನರ ಸೇವೆಯನ್ನು ಮಾಡಿ, ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿದವರು ಗುರುಗಳು ದೇಶಾದ್ಯಂತ ಸುಮಾರು 545ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಕೋಟ್ಯಂತರ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿದ್ದಾರೆ. ಜಗತ್ತು ಕಂಡ ಮಹಾನ್ ಪುರುಷರಲ್ಲಿ ಸ್ವಾಮೀಜಿರವರು ಒಬ್ಬರು ಎಂದು ಬಣ್ಣಿಸಿದರು.

ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್ ಮಾತನಾಡಿ, ಸ್ವಾಮೀಜಿಯವರು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠವನ್ನು ಬೃಹದಾಕಾರವಾಗಿ ಕಟ್ಟಿ, ಚಿನ್ನದ ಗರಿಯನ್ನಾಗಿ ಮಾಡಿ ಪ್ರತಿ ನಿತ್ಯ ಅಲ್ಲಿಗೆ ಆಗಮಿಸುವ ಭಕ್ತಾದಿಗಳಿಗೆ ಕಾಲ ಭೈರವೇಶ್ವರ ದರ್ಶನದ ಜೊತೆಗೆ ನಿತ್ಯ ದಾಸೋಹವನ್ನು ಮಾಡುತ್ತಿದ್ದಾರೆ. ಜೊತೆಗೆ ಪ್ರತಿಯೊಂದು ಸಮುದಾಯದವರಿಗೂ, ಹಿಂದುಳಿದ ವರ್ಗದ, ದಲಿತರ ಪ್ರತಿಂಯೊಂದು ಸಮುದಾಯಗಳಿಗೂ ಸಹಾಯ ಮಾಡಿದ್ದಾರೆ. ಕೋಟ್ಯಂತರ ವಿದ್ಯಾರ್ಥಿಗಳಿಗೆ ಅನ್ನ ಅಕ್ಷರ ನೀಡಿದ ಇವರಿಗೆ ಕೇಂದ್ರ ಸರ್ಕಾರ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರು ಸಿಹಿ ವಿತರಿಸಿದರು. ಈ ವೇಳೆ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಉಪಾಧ್ಯಕ್ಷ ಶಿವಲಿಂಗಯ್ಯ, ಮಹಿಳಾ ಅಧ್ಯಕ್ಷೆ ಲತಾ ರಂಗನಾಥ್, ವಿಜಯನಗರ ಮಂಜು, ಲಿಂಗಪ್ಪ, ಯಶ್ವಂತ್, ಸಂಜಯ್, ಸುಬ್ಬೆಗೌಡ, ಕೃಷ್ಣಪ್ಪ, ನೇಹಾ, ಪದ್ಮ, ಲಕ್ಷ್ಮೀ ಶಿವರಾಜ್, ಭಾಗ್ಯಮ್ಮ, ದರ್ಶನ್ ಗೌಡ ರವಿ ಒಲಂಪಿಯ, ನರಸಿಂಹೇಗೌಡ, ರಾಮಕೃಷ್ಣೇಗೌಡ, ಗಿರೀಶ್ ಹೆಚ್, ತ್ಯಾಗರಾಜ್, ಪ್ರಕಾಶ್, ಪ್ರಭಾಕರ್, ಪರಿಸರ ಚಂದ್ರು, ಹನುಮಂತಯ್ಯ ಇನ್ನಿತರರು ಉಪಸ್ಥಿತರಿದ್ದರು.